Service on call / Door step service Digital Process

Features: 20+ Loan Products 30+ Banks & NBFC

Star Capital Ventures Pvt Ltd

No-2M-154. VR Heights, 4th Floor, 2nd Main Road, East Of NGEF Layout, Kasturi Nagar, Bangalore - 560043
www.starcapitalventures.in
Call : +91 8711088881


### ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ಮಹಿಳಾ ಚೈತನ್ಯ ದಿನ

# 'ಹೆರುವಂತೆ ಆದೇಶಿಸಲು ಇವರು ಯಾರು?'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಮಹಿಳೆಯರನ್ನು ಹೆರುವ ಯಂತ್ರ ಮಾಡುವ ಆದೇಶ ಇತ್ತೀಚೆಗೆ ಬರುತ್ತಿವೆ. ಹೀಗೆ ಆದೇಶಿಸಲು ಇವರ್‍ಯಾರು' ಎಂದು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಡಾ.ಎಚ್.ಜಿ.ಜಯಲಕ್ಷ್ಮಿ ಪ್ರಶ್ನಿಸಿದರು.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಶನಿವಾರ ಹಮ್ಮಿಕೊಂಡಿದ್ದ 'ಮಹಿಳಾ ಚೈತನ್ಯ ದಿನ' ಸಮಾವೇಶದಲ್ಲಿ ಮಾತನಾಡಿದ ಅವರು, '11 ವರ್ಷಗಳಿಂದ ದೇಶದಲ್ಲಿ ನಮ್ಮ ನಡುವೆ ಒಡಕು ತರುವ ಪ್ರಯತ್ನ ನಡೆಯುತ್ತಿವೆ. ರಾಜಕೀಯಕ್ಕೆ ಧರ್ಮ, ಜಾತಿ ಅಗತ್ಯ ಇಲ್ಲ. ಆದರೂ ಅದನ್ನು ಒತ್ತಾಯಪೂರ್ವಕವಾಗಿ ತರಲಾಗುತ್ತಿದೆ. ಇಂಥದ್ದೇ ಬೆಳವಣಿಗೆ ಮುಂದುವರಿದರೆ, ಯಹೂದಿಗಳ ಘೋರ ಮಾರಣಹೋಮ ಆದ ಪರಿಸ್ಥಿತಿ ಪುನಃ ಮರುಕಳಿಸುವ ಅಪಾಯ ಇದೆ' ಎಂದರು.

'ವಾರಕ್ಕೆ 70 ಗಂಟೆ ದುಡಿಯಬೇಕು ಎಂದು ಒಬ್ಬರು ಹೇಳಿದರೆ, 90 ಗಂಟೆ ದುಡಿಯಲು ಇನ್ನೊಬ್ಬರು ಹೇಳುತ್ತಾರೆ. ಹೆಂಡತಿ ಮುಖ ನೋಡುತ್ತ ಎಷ್ಟು ಹೊತ್ತು ಮನೆಯಲ್ಲಿ ಕೂರುತ್ತೀರಿ ಎಂದು ಮತ್ತೊಬ್ಬರು ಪ್ರಶ್ನಿಸುತ್ತಾರೆ. ಮನೆ, ಮಕ್ಕಳ ಜೊತೆ ಬೆರೆತು ಕಾಲ ಕಳೆಯುವ ಅಗತ್ಯ ನಿಮಗೆ ಗೊತ್ತೆ? ನೀವು ಬಡವರನ್ನು ಶೋಷಿಸಿಯೇ ಶ್ರೀಮಂತರಾಗಿದ್ದೀರಿ. ಬಡವರು, ಶ್ರಮಿಕರ ಸಮಾಧಿಯ ಮೇಲೆ ನೀವು ನಿಮ್ಮ ಸೌಧ ಕಟ್ಟಿದ್ದೀರಿ' ಎಂದು ಅವರು ಹೇಳಿದರು.

ಮೈಸೂರಿನ ಸುಮನಾ ಎಂ.ಎನ್. ಅಧ್ಯಕ್ಷತೆ ವಹಿಸಿದ್ದರು. ಡಾ. ಎಚ್.ಎಸ್. ಅನುಪಮಾ, ನಸ್ರೀನ್ ಮಿಠಾಯಿ, ಟಿ.ಎಂ.ಉಷಾರಾಣಿ, ವಾಣಿ ಪೆರಿಯೋಡಿ, ನಾಗವೇಣಿ ಸೋಸಲೆ, ವೆರೋನಿಕಾ ಕರ್ನೇಲಿಯೊ, ಜಿ.ಕೆ. ಪ್ರೇಮಾ, ಮಲ್ಲಮ್ಮ ಯಾಳವಾರ, ಸಲೀಮಾ ಜಾನ್, ಜ್ಯೋತಿ ಹಿಟ್ನಾಳ, ಆಶಾಲತಾ ಬೇಕಲ್ ಇದ್ದರು.

ಹೊಸಪೇಟೆಯಲ್ಲಿ ಶನಿವಾರ ನಡೆದ ಮಹಿಳಾ ಚೈತನ್ಯ ದಿನ ಸಮಾವೇಶದಲ್ಲಿ ಡಾ. ಎಚ್.ಜಿ.ಜಯಲಕ್ಷ್ಮಿ ಮಾತನಾಡಿದರು —ಪ್ರಜಾವಾಣಿ ಚಿತ್ರ

**ಮಹಿಳೆಯರಿಗೆ ಗಟ್ಟಿ ಧ್ವನಿ ಬರಬೇಕಾದರೆ ವಿಧಾನಸಭೆ, ಸಂಸತ್‌ನಲ್ಲೇ ಮೀಸಲಾತಿ ಸಿಗಬೇಕು. ಅದಕ್ಕಾಗಿ ನಮ್ಮೆಲ್ಲರ ಹೋರಾಟ ನಡೆಯಬೇಕಿದೆ**

**ಝುಕಿಯಾ ಸೋಮನ್**
ಸಂಸ್ಥಾಪಕಿ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ

**ಅನ್ಯಾಯ ಮತ್ತು ಕೋಮು ರಾಜಕೀಯದ ವಿರುದ್ಧ ಧ್ವನಿ ಎತ್ತಿದರೆ, ಅದನ್ನು ಹತ್ತಿಕ್ಕಲಾಗುತ್ತದೆ. ದೇಶದ್ರೋಹದ ಹಣೆಪಟ್ಟಿ ಕಟ್ಟಲಾಗುತ್ತದೆ**

**ಡಾ. ಎಚ್.ಜಿ.ಜಯಲಕ್ಷ್ಮಿ**
ಮಹಿಳಾ ಹಕ್ಕುಗಳ ಹೋರಾಟಗಾರ್ತಿ

### 'ತಾರತಮ್ಯದ ವಿಕಸಿತ ಭಾರತ'

'ನಾವು ವಿಕಸಿತ ಭಾರತ ನಿರ್ಮಿಸುತ್ತಿದ್ದೇವೆ, ಈಗಾಗಲೇ ವಿಕಸಿತರಾಗುವ ಹಂತದಲ್ಲಿದ್ದೇವೆ ಎನ್ನಲಾಗುತ್ತಿದೆ. ಆದರೆ, ಇದು ತಾರತಮ್ಯದಿಂದ ಕೂಡಿದ ಬೆಳವಣಿಗೆ. ದೇಶದ ಶೇ 50ರಷ್ಟು ಸಂಪತ್ತು ಕೇವಲ ಶೇ 10ರಷ್ಟು ಜನರ ಬಳಿ ಇದೆ. ಇದನ್ನು ವಿಕಸಿತ ಭಾರತ ಎಂದು ಒಪ್ಪಬಹುದೇ' ಎಂದು ಭಾರತೀಯ ಮುಸ್ಲಿಂ ಮಹಿಳಾ ಆಂದೋಲನದ ಸಂಸ್ಥಾಪಕಿ, ಗುಜರಾತ್‌ನ ಝುಕಿಯಾ ಸೋಮನ್ ಪ್ರಶ್ನಿಸಿದರು.

ಝುಕಿಯಾ ಸೋಮನ್

'ದೇಶದಲ್ಲಿ ಈಗಲೂ ಪುರುಷ ಪ್ರಧಾನ ವ್ಯವಸ್ಥೆಯಿದ್ದು, ಇದರಿಂದ ಮಹಿಳೆಯರಿಗೆ ಸಮಾನ ಹಕ್ಕು ಸಿಗುತ್ತಿಲ್ಲ. ಮುಸ್ಲಿಂ ಸಮುದಾಯದಲ್ಲಿನ ತ್ರಿವಳಿ ತಲಾಖ್ ತೊಡೆದು ಹಾಕುವ ಪ್ರಯತ್ನ ನಡೆದಿದೆ. ಆದರೆ ಬಹುಪತ್ನಿತ್ವ ಈಗಲೂ ಜಾರಿಯಲ್ಲಿದೆ. ಮುಸ್ಲಿಂ ವಿವಾಹ ಕಾಯ್ದೆ ಸಂಸತ್‌ನಲ್ಲಿ ಇನ್ನೂ ಮಂಡನೆಯಾಗಿಲ್ಲ. ಹೀಗಾಗಿ ಮಹಿಳೆಯರಿಗೆ ಸಮಾನ ಅವಕಾಶ, ಹಕ್ಕುಗಳಿಗಾಗಿ ನಡೆಯುವ ಹೋರಾಟಕ್ಕೆ ಬೆಂಬಲ ನೀಡುವ ಅಗತ್ಯ ಇದೆ' ಎಂದರು.

## ಪ್ರಕಾಶ ಪುಟ್ಟಪ್ಪ, ಮಂಜುನಾಥ ಕುಣಿಗಲ್‌ಗೆ ಪ್ರಶಸ್ತಿ

ಧಾರವಾಡ: ರಾಘವೇಂದ್ರ ಪಾಟೀಲ ಸಾಹಿತ್ಯ ವೇದಿಕೆ ನೀಡುವ 'ರಾಘವೇಂದ್ರ ಪಾಟೀಲ' ಕಥಾ ಪ್ರಶಸ್ತಿಗೆ ಚಾಮರಾಜನಗರದ ಪ್ರಕಾಶ ಪುಟ್ಟಪ್ಪ ಅವರ 'ಗಾಂಧಿ ಜೋಡಿನ ಮಳಿಗೆ' ಮತ್ತು ತುಮಕೂರಿನ ಮಂಜುನಾಥ ಕುಣಿಗಲ್ ಅವರ 'ದೂರ ದೇಶದ ದೇವರು' ಕೃತಿ ಆಯ್ಕೆಯಾಗಿವೆ ಎಂದು ವೇದಿಕೆ ಅಧ್ಯಕ್ಷ ಪ್ರೊ.ಮಲ್ಲಿಕಾರ್ಜುನ ಹಿರೇಮಠ ತಿಳಿಸಿದ್ದಾರೆ.

'ಪುರಸ್ಕಾರವು ತಲಾ ₹10 ಸಾವಿರ ನಗದು, ಫಲಕ ಒಳಗೊಂಡಿದೆ. ಧಾರವಾಡದಲ್ಲಿ ಏಪ್ರಿಲ್ 20ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

## ಅಪಘಾತ ವಿಮೆ ದುರ್ಬಳಕೆ: ತನಿಖೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೋಟಾರು ವಾಹನ ಕಾಯ್ದೆಯಡಿ ಪರಿಹಾರ ಪಡೆಯಲು ಹಲವಾರು ಅಪಘಾತಗಳಲ್ಲಿ ಒಂದೇ ವಾಹನವನ್ನು ಬಳಸಿ ವಂಚಿಸಲಾಗುತ್ತಿದೆ ಎಂಬ ವಿಮಾ ಕಂಪನಿಯ ದೂರಿನ ಬಗ್ಗೆ ತನಿಖೆ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ನೈಜವಾಗಿರದ ಕ್ಲೈಮುಗಳನ್ನು ನಿರಾಕರಿಸುವ ವಿಷಯದಲ್ಲಿ ವಿಮಾ ಕಂಪನಿಗಳನ್ನು ಶಕ್ತಿಹೀನವಾಗಿಸುವುದು ಸರಿಯಲ್ಲ ಎಂದಿರುವ ನ್ಯಾಯಮೂರ್ತಿಗಳಾದ ಅಹ್ಸಾನುದ್ದೀನ್ ಅಮಾನುಲ್ಲಾ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ವಿಭಾಗೀಯ ಪೀಠ, ಒಡಿಶಾದ ವಿಮೆ ಸಂಬಂಧಿ ಪ್ರಕರಣದ ಕುರಿತು ತನಿಖೆ ನಡೆಸಲು ಎಸ್‌ಐಟಿ ರಚಿಸುವಂತೆ ಅಲ್ಲಿನ ಡಿಜಿಪಿಗೆ ನಿರ್ದೇಶನ ನೀಡಿದೆ.

ಅಪಘಾತ ವಿಮೆ ಪಾವತಿಸುವಂತೆ ಒಡಿಶಾ ಹೈಕೋರ್ಟ್ 2022ರ ಮೇ 9ರಂದು ನೀಡಿದ್ದ ತೀರ್ಪಿನ ವಿರುದ್ಧ ಓರಿಯಂಟಲ್ ಇನ್ಶುರೆನ್ಸ್ ಕಂಪನಿಯು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. 2017ರ ಅ. 19ರಂದು ಅಪಘಾತ ಸಂಭವಿಸಿತ್ತು. ಕ್ಲೈಮ್ ಅರ್ಜಿ ಸಲ್ಲಿಸಿದ ದಿನಾಂಕದಿಂದ ವಾರ್ಷಿಕ ಶೇ 7 ಬಡ್ಡಿಯೊಂದಿಗೆ ಪರಿಹಾರವಾಗಿ ₹40,42,162 ಪಾವತಿಸಲು ಹೈಕೋರ್ಟ್ ವಿಮಾ ಕಂಪನಿಗೆ ನಿರ್ದೇಶನ ನೀಡಿತ್ತು.

ವಿಮಾ ಕಂಪನಿ ಪರವಾಗಿ ಹಾಜರಾದ ವಕೀಲ ಎಚ್. ಚಂದ್ರಶೇಖರ್, 'ಅಪಘಾತದಲ್ಲಿ ಭಾಗಿಯಾಗಿದೆ ಎಂದು ಹೇಳಲಾದ ವಾಹನವು ಇತರ ನಾಲ್ಕು ಕ್ಲೈಮುಗಳಲ್ಲಿ ಭಾಗಿಯಾಗಿದೆ. ಅಪಘಾತದಲ್ಲಿ ಭಾಗಿಯಾಗದ ವಾಹನದ ದಾಖಲೆ ಸಲ್ಲಿಸಿ ದುರುದ್ದೇಶದಿಂದ ವಿಮೆ ಪಡೆಯುವ ಯತ್ನ ಇದಾಗಿದೆ. ಇದೊಂದು ವಂಚನೆ' ಎಂದರು.

'ಅಪರಿಚಿತ ವಾಹನವೊಂದು ತನ್ನ ಸಹೋದರನಿಗೆ ಡಿಕ್ಕಿ ಹೊಡೆದಿದೆ ಎಂದು ಮೃತನ ಸಹೋದರ ಆರಂಭದಲ್ಲಿ ಹೇಳಿಕೆ ನೀಡಿದ್ದರು. ಎಫ್‌ಐಆರ್ ದಾಖಲಿಸುವ ವೇಳೆ ಅಪಘಾತ ವೆಸಗಿದ ವಾಹನದ ಸಂಖ್ಯೆ ನೀಡಿದ್ದರು' ಎಂದು ಪೀಠದ ಗಮನಕ್ಕೆ ತಂದರು. ಒಂದು ತಿಂಗಳಲ್ಲಿ ವರದಿ ಸಲ್ಲಿಸಲು ಸೂಚಿಸಿ, ವಿಚಾರಣೆಯನ್ನು ಏ. 17ಕ್ಕೆ ಮುಂದೂಡಿತು.

## ಕ್ರಿಶ್ಚಿಯನ್ ಅಭಿವೃದ್ಧಿ ನಿಗಮಕ್ಕೆ ನೇಮಕ

ಮಂಗಳೂರು: ಕರ್ನಾಟಕ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ. ಎಸ್. ಜಾಫೆಟ್ ಅವರನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಉಪಾಧ್ಯಕ್ಷರಾಗಿ ಬೆಂಗಳೂರಿನ ವಿನಿಶ್ ನಿರೋ ಮತ್ತು ಇಂಡಿಯನ್ ಕ್ರಿಶ್ಚಿಯನ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ಸಂಜೀವ ಕುಮಾರ್ ಜಾಗೀರದಾರ ನೇಮಕಗೊಂಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಜೆಟ್‌ನಲ್ಲಿ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮಕ್ಕೆ ₹250 ಕೋಟಿ ಘೋಷಣೆ ಮಾಡಲಾಗಿದೆ. 2019ರಲ್ಲಿ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ನಿಗಮ ಘೋಷಣೆ ಆಗಿದ್ದರೂ, ನಂತರ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅದು ಮೂಲೆಗುಂಪಾಗಿತ್ತು. ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ಅಧೀನದಲ್ಲಿ ಬರುವ ನಿಗಮವು ಪ್ರತ್ಯೇಕ ನಿರ್ದೇಶನಾಲಯವಾಗಬೇಕು. ಈ ನಿಟ್ಟಿನಲ್ಲಿ ಕ್ರಿಶ್ಚಿಯನ್ ಅಲ್ಪಸಂಖ್ಯಾತ ನಿರ್ದೇಶನಾಲಯ ರಚಿಸಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದೆ ಇಡಲಾಗಿದೆ ಎಂದು ಹೇಳಿದರು.

## ಯಡ್ರಾಮಿ: ಬಾಲ ಪ್ರೇಮಿಗಳ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಯಡ್ರಾಮಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮಳ್ಳಿ ಗ್ರಾಮದ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಓದುತ್ತಿದ್ದ ಬಾಲಪ್ರೇಮಿಗಳು ಒಂದೇ ಹಗ್ಗಕ್ಕೆ ನೇಣು ಹಾಕಿಕೊಂಡು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಾಗರಹಳ್ಳಿ ಗ್ರಾಮದ ಮಾಳಪ್ಪ ಕೆಂಭಾವಿ (16) ಮತ್ತು ಮಳ್ಳಿ ಗ್ರಾಮದ ನಸೀಮಾ ಮುಲ್ಲಾ (16) ಮೃತರು. ಮಳ್ಳಿ ಮತ್ತು ಐನಾಪುರ ರಸ್ತೆ ಬದಿಯ ಹೊಲದಲ್ಲಿನ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಶುಕ್ರವಾರ ರಾತ್ರಿ ನಸೀಮಾ ಮನೆಯಲ್ಲೇ ಮಲಗಿದ್ದಳು. ಬೆಳಿಗ್ಗೆ ಎದ್ದು ಬಹಿರ್ದೆಸೆಗೆ ಹೋಗಿರಬಹುದು ಎಂದು ಸುಮ್ಮನೆ ಇದ್ದೆವು. ನಸೀಮಾ ಮತ್ತು ಮಾಳಪ್ಪ ಒಂದೇ ಹಗ್ಗಕ್ಕೆ ನೇಣು ಹಾಕಿಕೊಂಡಿದ್ದು ಬೇರೆಯವರಿಂದ ಗೊತ್ತಾಯಿತು. ಈ ಇಬ್ಬರೂ ಪ್ರೀತಿಸುತ್ತಿರುವುದು ಆತ್ಮಹತ್ಯೆ ಮಾಡಿಕೊಂಡ ಬಳಿಕವಷ್ಟೇ ಗೊತ್ತಾಗಿದೆ. ಪ್ರೀತಿಸುವ ವಿಚಾರವಾಗಿ ಯಾರೂ ಮಾನಸಿಕ ಮತ್ತು ದೈಹಿಕವಾಗಿ ತೊಂದರೆ ಕೊಟ್ಟಿಲ್ಲ. ಇಬ್ಬರ ಆತ್ಮಹತ್ಯೆ ವಿಚಾರದಲ್ಲಿ ಯಾರ ಮೇಲೂ ಸಂಶಯ ಇಲ್ಲ' ಎಂದು ಬಾಲಕಿಯ ತಂದೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಯಡ್ರಾಮಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಒಂದೇ ವೇದಿಕೆಯಲ್ಲಿ ಸಂಘಟಿಸಲು ಸಮುದಾಯದ ಸಭೆಯಲ್ಲಿ ನಿರ್ಣಯ

# 'ಈಡಿಗ ಸಮುದಾಯದ ಬೃಹತ್ ಸಮಾವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವ ಸಿದ್ಧಾಂತಗಳನ್ನು ಪಾಲಿಸುತ್ತಿರುವ ಈಡಿಗ ಸಮುದಾಯದ 26 ಉಪ ಪಂಗಡಗಳು ಹಾಗೂ ಅವರ ಅನುಯಾಯಿಗಳನ್ನು ಒಂದೇ ವೇದಿಕೆಯಡಿ ಸಂಘಟಿಸಿ, ದಕ್ಷಿಣ ಭಾರತ ಮಟ್ಟದಲ್ಲಿ ಬೃಹತ್ ಸಮಾವೇಶ ಆಯೋಜಿಸಲು ಸಮುದಾಯದ ಚಿಂತನ-ಮಂಥನ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ನಗರದಲ್ಲಿ ಶನಿವಾರ ನಡೆದ ಈಡಿಗ, ಬಿಲ್ಲವ, ನಾಮಧಾರಿ, ದೀವರು ಇತ್ಯಾದಿ 26 ಉಪಪಂಗಡಗಳನ್ನು ಒಳಗೊಂಡು ಆಯೋಜಿಸಿದ್ದ 'ಈಡಿಗ ಜನಾಂಗದ ಇತಿಹಾಸ-ಅಭಿವೃದ್ಧಿಯ ಬಗ್ಗೆ ಒಂದು ಅವಲೋಕನ' ಚಿಂತನ-ಮಂಥನ ಸಭೆಯಲ್ಲಿ, ಸಮುದಾಯ ಎದುರಿಸುತ್ತಿರುವ ಸವಾಲುಗಳನ್ನು ಚರ್ಚಿಸಲಾಯಿತು.

ಸೋಲೂರಿನ ಆರ್ಯ ಈಡಿಗರ ಮಹಾಸಂಸ್ಥಾನ ಮಠದ ವಿಖ್ಯಾತಾನಂದ ಸ್ವಾಮೀಜಿ, ಪ್ರಣವಾನಂದ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ತೆಲಂಗಾಣದ ಮಾಜಿ ಸಚಿವ ಶ್ರೀನಿವಾಸ್ ಗೌಡ್, ಶಾಸಕ ವಿ. ಸುನಿಲ್ ಕುಮಾರ್, ಮಾಜಿ ಶಾಸಕ ಶ್ರೀನಾಥ್, ಕರ್ನಾಟಕ ಲೋಕ ಸೇವಾ ಆಯೋಗದ ಮಾಜಿ ಸದಸ್ಯ ಲಕ್ಷ್ಮಿ ನರಸಿಹಯ್ಯ ಹಾಗೂ ಸಮುದಾಯದ ಮುಖಂಡರುಲ್ಲಿ ಪಾಲ್ಗೊಂಡಿದ್ದರು.

ದಕ್ಷಿಣ ಭಾರತದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಸಂಘಟಿತರಾಗಲು ಸಮುದಾಯದ 26 ಉಪ ಪಂಗಡಗಳು ಒಟ್ಟಾಗಿ ಬೃಹತ್ ಸಮಾವೇಶ ಹಮ್ಮಿಕೊಳ್ಳಬೇಕು. ಕನಿಷ್ಠ 5 ಲಕ್ಷ ಜನರನ್ನು ಸೇರಿಸಿ ಸಮಾವೇಶ ನಡೆಸಬೇಕು ಎಂದು ತೀರ್ಮಾನ ಕೈಗೊಳ್ಳಲಾಯಿತು.

ಸಮುದಾಯದ ಪ್ರಮುಖ ಒಂಬತ್ತು ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕು. ಅವುಗಳ ಈಡೇರಿಕೆಗೆ ಸಂಬಂಧಿಸಿದಂತೆ ರಾಜ್ಯ ಮುಖಂಡರ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಒತ್ತಾಯಿಸಬೇಕು ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು.

ಸಭೆಯಲ್ಲಿ ನಾಗರಾಜ್, ಮಧು ಕೊರಟಗೆರೆ, ಬಿ.ಕೆ. ಹರಿಪ್ರಸಾದ್, ಎಚ್.ಆರ್.ಶ್ರೀನಾಥ್, ಶ್ರೀನಿವಾಸ್ ಗೌಡ್, ವಿಖ್ಯಾತಾನಂದ ಸ್ವಾಮೀಜಿ, ಜೆ.ಪಿ. ಸುಧಾಕರ್, ಪ್ರಣವಾನಂದ ಸ್ವಾಮೀಜಿ ಹಾಗೂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

### ಪ್ರಮುಖ ಬೇಡಿಕೆಗಳು

- ನಾರಾಯಣಗುರು ಈಡಿಗ ಅಭಿವೃದ್ಧಿ ನಿಗಮವನ್ನು ಕ್ರಿಯಾಶೀಲಗೊಳಿಸಿ, ₹250 ಕೋಟಿ ಅನುದಾನ ಬಿಡುಗಡೆ ಮಾಡಬೇಕು
- ಬ್ರಹ್ಮಶ್ರೀ ನಾರಾಯಣಗುರು ಅವರ ಪುತ್ಥಳಿಯನ್ನು ಜನಾಂಗದ ಕೇಂದ್ರವಾದ ಸೋಲೂರು ಆರ್ಯ ಈಡಿಗ ಮಹಾಸಂಸ್ಥಾನದಲ್ಲಿ ಸ್ಥಾಪಿಸಬೇಕು
- ಮಂಗಳೂರು ವಿಶ್ವವಿದ್ಯಾಲಯದ ನಾರಾಯಣಗುರು ಅಧ್ಯಯನ ಪೀಠಕ್ಕೆ ₹5 ಕೋಟಿ ಅನುದಾನ ಬಿಡುಗಡೆ ಮಾಡಬೇಕು
- ಕೋಟಿ-ಚೆನ್ನಯ್ಯ ಥೀಮ್ ಪಾರ್ಕ್ ನಿರ್ಮಾಣಕ್ಕೆ ₹10 ಕೋಟಿ ಅನುದಾನ ಬಿಡುಗಡೆ ಮಾಡಬೇಕು
- ಕುಲ ಕಸುಬು ಕಳೆದುಕೊಂಡಿರುವ ಈಡಿಗ ಸಮುದಾಯದ ಉಪ ಪಂಗಡಗಳ ಜನರ ಪುನರ್ ವಸತಿಗಾಗಿ ಪ್ಯಾಕೇಜ್ ಘೋಷಣೆ ಮಾಡಬೇಕು
- ಅಬಕಾರಿ ಇಲಾಖೆಯಿಂದ ಮದ್ಯದಂಗಡಿಗಳ ಪರವಾನಗಿ ನೀಡುವಾಗ ಆಂಧ್ರಪ್ರದೇಶ ಸರ್ಕಾರದ ಮಾದರಿಯಲ್ಲಿ ಈಡಿಗ ಸಮುದಾಯದ ಉಪ ಪಂಗಡಗಳಿಗೆ ಮೀಸಲಾತಿ ನೀಡಬೇಕು
- ಶರಣ ಹೆಂಡದ ಮಾರಯ್ಯ ತಪಸ್ಸು ಮಾಡಿದ ಬಸವ ಕಲ್ಯಾಣದಲ್ಲಿ ಬಸದಿ ಕಟ್ಟಿಸಿ, ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಮಾಡಬೇಕು
- ರಾಜ್ಯದಾದ್ಯಂತ ಈಡಿಗ ಜನಾಂಗದವರು ನಿರ್ಮಿಸುತ್ತಿರುವ ವಿದ್ಯಾರ್ಥಿ ನಿಲಯಗಳು ಮತ್ತು ಸಮುದಾಯ ಭವನಗಳಿಗೆ ವಿಶೇಷವಾಗಿ ಆರ್ಥಿಕ ನೆರವು ಕಲ್ಪಿಸಬೇಕು
- ಬೆಂಗಳೂರಿನಲ್ಲಿ ಬ್ರಹ್ಮಶ್ರೀ ನಾರಾಯಣಗುರುಗಳ ಹೆಸರಿನಲ್ಲಿ ವಿದ್ಯಾರ್ಥಿ ನಿಲಯ ಮತ್ತು ಸಮುದಾಯ ಭವನವನ್ನು ನಿರ್ಮಿಸಲು 10 ಎಕರೆ ಭೂಮಿಯನ್ನು ಮಂಜೂರಾತಿ ಮಾಡಬೇಕು


ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

SVC EDUCATIONAL INSTITUTIONS
Kushtagi - 583277, Koppal District
Educators Wanted for CBSE & KSEAB Schools

PG Teachers
Qualification and Experience: PG with BEd. Experience preferred
Subject: English, Hindi, Kannada, Social Studies, Science, Mathematics, Physical Education Instructors, Computers and ICT

TG Teachers for Primary Section
Qualifications: Any Degree with BEd. Experience preferred
Subjects: English, Hindi, Kannada, Social Studies, Science, Mathematics, Physical Education Instructors, Computers and ICT, Art, Music, Counsellors

PU College
Physics, Mathematics, Chemistry, Biology, Accountancy, Economics, Business Studies, Computer Science
PG in respective disciplines with BEd. Candidates with NET, SLET, PhD will have added advantage.
Experienced candidates with ideas, vision and professionalism with English proficiency needed to head Institutions.
Attractive salary package commensurate with experience and qualification
Contact: 7411024861, 9606044849, 9945976976
Email your profiles to: ceo@svcerdt.com

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

Drivers

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ, ನಂ. 4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

ಪ್ರವಾಸ

Travel

HITESH HOLIDAYS
SUMMER 2025 PACKAGES APRIL TO JUNE
HIMACHAL - 07 DAYS 13TH APRIL - Rs. 52,800/-
THAILAND - 05 DAYS 28TH APRIL - Rs. 57,900/-
VIETNAM - 07 DAYS 17TH MAY - Rs. 1,12,900/-
EUROPE - 16 DAYS 12TH JUNE - Rs. 3,95,000
CONTACT : CHETAN 97393 26102 90365 68598

20.03.2025 ಕಾಶಿ ಅಯೋಧ್ಯ ಅಲಹಾಬಾದ್,ಬುದ್ಧಗಯಾ. 14.04.2025 ವೈಷ್ಣೋದೇವಿ ಕಾಶ್ಮೀರ್,ಜ್ವಾಲಾಮುಖಿ ಕುಲುಮನಾಲಿ. 28.04.2025 12.05.2025 ಚಾರ್‌ಧಾಮ್ ಸಮೇತಪ್ರವಾಸ. 26.06.2025 10.07.2025 ಅಮರನಾಥ್ ಅಮೃತ್‌ಸರ್ ಕುರುಕ್ಷೇತ್ರ ಗುಲ್ ಮಾರ್ಗ. 14.04.2025 ಸೋಮನಾಥ್,ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. ಇತ್ಯಾದಿ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು.4. 26574131 8431888138 8317446683 9686708171

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ ಎಸಿ ಬಸ್ಸಿನಲ್ಲಿ 6 ದಿನಗಳು. 19.03.2025 ರಾಮೇಶ್ವರಂ ಕನ್ಯಾಕುಮಾರಿ,ಮಧುರೈ ತಿರುಚಂದೂರು ಸಮಯಪುರಂ ಇತ್ಯಾದಿ 9500. 11.04.2025 ನವಗ್ರಹ ಮಂದಿರಗಳು ಸೇರಿ 18ಕ್ಷೇತ್ರಗಳು 7100. 9448390735 9449721678

20.3.2025 ರಿಂದ 9 ದಿನಗಳು ಅಂಡಮಾನ್ ಪ್ರವಾಸ ಹಡಗು ಮತ್ತು ವಿಮಾನದಲ್ಲಿ, ಜುಲೈ 1 ರಿಂದ 12 ದಿನಗಳು ಅಮರನಾಥ್, ವೈಷ್ಣೋದೇವಿ ಅಮೃತಸರ, ಶ್ರೀನಗರ. ಶ್ರೀಗಂಗಾ ಟೂರಿಸ್ಟ್. 9480253807

Travel Agencies

ಮಹಿಳಾ ದಿನಾಚರಣೆ ವಿಶೇಷ ರಿಯಾಯಿತಿ 11 ದಿನಗಳು ಸಿಂಗಪೂರ್ ಮಲೇಶಿಯಾ ಥೈಲ್ಯಾಂಡ್, 6 ದಿನಗಳು ಬಾಲಿ 10 ದಿನಗಳು ಕಾಂಬೋಡಿಯಾ & ವಿಯೆಟ್ನಾಂ, 12 ದಿನಗಳು ಲಂಡನ್ ಸ್ಕಾಟ್ಲಾಂಡ್ ಐರ್ಲ್ಯಾಂಡ್ ವೇಲ್ಸ್. ಭಟ್ ಟ್ರಾವೆಲ್ಸ್: 9844037295

ಭವಿಷ್ಯ

Astrology

★ಓಂ ದುರ್ಗಾಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ,ಭಾರತದ ಪ್ರಖ್ಯಾತ ಲಕ್ಷಾಂತರ ಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದ ಮಹಾರಾಜ,ನಿಮ್ಮೆಲ್ಲಾ ಸಂಕಷ್ಟಗಳಿಗೆ ಪರಿಹಾರ, ಬೆಂಗಳೂರು.9845005009

★॥ಶ್ರೀಗೋಮಾತಾ ಜ್ಯೋತಿಷ್ಯರು॥★ ಪ್ರೀತಿಪ್ರೇಮ,_ದಾಂಪತ್ಯ, ವಿದ್ಯೆ, ಉದ್ಯೋಗ, ಕಂಕಣಭಾಗ್ಯ, ಸಾಲಬಾಧೆ, ಇನ್ನೂಯಾವುದೇ ಸಮಸ್ಯೆಗಳಿದ್ದರೂ ಪರಿಹಾರ ಮಾಡುತ್ತಾರೆ. ಸಂಪರ್ಕಿಸಿ: 9108022257

ವ್ಯಾಪಾರ

Business Offers

Distributors

MEN'S CLOTHING brand is looking for Distributors in Karnataka. Candidates to be fluent in English, Hindi, Kannada. Experience required. Call/WhatsApp +91 7840962967

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
@ 2244/-* FOR 15 WORDS
*Conditions apply
www.dhclassifieds.com BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9900428036

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

# ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ(ರಿ)

ನಂ.28, ಕ್ರೆಸೆಂಟ್ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು-560 001 ದೂ. 080 22265370/71 Email : karnatakafilmhouse@yahoo.com

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಸಿದ್ದರಾಮಯ್ಯ ಅವರಿಗೆ, ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀಯುತ ಡಿ.ಕೆ.ಶಿವಕುಮಾರ್ ಮತ್ತು ಗೃಹಮಂತ್ರಿಗಳಾದ ಜಿ.ಪರಮೇಶ್ವರ್ ಹಾಗೂ ಮಂತ್ರಿಮಂಡಲದ ಸಚಿವರಿಗೆ ಕನ್ನಡ ಚಲನಚಿತ್ರೋದ್ಯಮದ ಪರವಾಗಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಕೃತಜ್ಞತಾಪೂರ್ವಕ ಅಭಿನಂದನೆಗಳು

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಕನ್ನಡ ಚಿತ್ರರಂಗದ ಪ್ರಮುಖ ಬೇಡಿಕೆಗಳಿಗೆ ಸೂಕ್ತ ಪರಿಹಾರ ನೀಡುವಂತೆ ಘನ ಸರ್ಕಾರಕ್ಕೆ ಸಾರಾ.ಗೋವಿಂದು ರವರ ನೇತೃತ್ವದಲ್ಲಿ ಮನವಿ ಸಲ್ಲಿಸಿದ್ದು, ನಮ್ಮ ಮನವಿಗೆ ಸ್ಪಂದಿಸಿದ ಜನಪ್ರಿಯ ಮುಖ್ಯಮಂತ್ರಿಗಳು ಕನ್ನಡ ಚಿತ್ರರಂಗಕ್ಕೆ ಹಿಂದಿನಿಂದಲೂ ಸಹಾಯಹಸ್ತವನ್ನು ನೀಡುತ್ತಾ ಸದಾ ಚಿತ್ರರಂಗಕ್ಕೆ ಬೆನ್ನೆಲುಬಾಗಿ ಸಹಕಾರ ನೀಡುತ್ತಾ ಮತ್ತೊಮ್ಮೆ ಕನ್ನಡ ಚಿತ್ರರಂಗದ ಉತ್ತಮ ಭವಿಷ್ಯಕ್ಕಾಗಿ 2025-26ನೇ ಸಾಲಿನ 16ನೇ ಆಯವ್ಯಯದಲ್ಲಿ ಕೆಳಕಂಡ ಕೊಡುಗೆಗಳನ್ನು ಘೋಷಿಸಿರುವುದು ಕನ್ನಡ ಚಲನಚಿತ್ರೋದ್ಯಮಕ್ಕೆ ಹರ್ಷವನ್ನುಂಟು ಮಾಡಿದೆ.

1. ಸಿನಿಮಾ ಕ್ಷೇತ್ರವನ್ನು ಉದ್ಯಮವೆಂದು ಪರಿಗಣಿಸಿ. ಕೈಗಾರಿಕಾ ನೀತಿಯಡಿ ಒದಗಿಸಲಾಗುವ ಸೌಲಭ್ಯಗಳನ್ನು ಸಿನಿಮಾ ಕ್ಷೇತ್ರಕ್ಕೆ ಒದಗಿಸಿದೆ.
2. ಚಲನಚಿತ್ರ ಅಕಾಡೆಮಿಯು ಹೊಂದಿರುವ 2.5 ಎಕರೆ ನಿವೇಶನದಲ್ಲಿ ಬಹುಪರದೆಗಳಿರುವ ಚಿತ್ರಮಂದಿರ ಸಮುಚ್ಚಯವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವುದು.
3. ಸಾಮಾಜಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬಿಂಬಿಸುವ ಕನ್ನಡ ಚಿತ್ರಗಳನ್ನು ಡಿಜಿಟಲ್ ಹಾಗೂ ನಾನ್-ಡಿಜಿಟಲ್ ಮಾದರಿಯಲ್ಲಿ ಸಂರಕ್ಷಿಸಲು 3 ಕೋಟಿ ರೂ ವೆಚ್ಚದಲ್ಲಿ ಚಲನಚಿತ್ರ ಭಂಡಾರ ಸ್ಥಾಪನೆ.
4. ಕನ್ನಡ ಚಲನಚಿತ್ರಗಳ ಪ್ರೋತ್ಸಾಹಕ್ಕಾಗಿ ಒಟಿಟಿ ಸ್ಥಾಪನೆ.
5. ಅಂತರಾಷ್ಟ್ರೀಯ ದರ್ಜೆಯ ಚಿತ್ರನಗರಿಯನ್ನು ಪಿಪಿಪಿ ಮಾದರಿಯಲ್ಲಿ ಅಂದಾಜು 500 ಕೋಟಿ ರೂ. ವೆಚ್ಚದಲ್ಲಿ ಮೈಸೂರಿನಲ್ಲಿ ಸ್ಥಾಪಿಸಲು 150 ಎಕರೆ ಜಮೀನನ್ನು ಕಾಯ್ದಿರಿಸಿದೆ.
6. ರಾಜ್ಯದ ಮಲ್ಟಿಪ್ಲೆಕ್ಸ್‌ಗಳೂ ಸೇರಿದಂತೆ ಎಲ್ಲಾ ಚಿತ್ರಮಂದಿರಗಳಲ್ಲಿ ಪ್ರದರ್ಶಿಸಲಾಗುವ ಪ್ರತಿ ಪ್ರದರ್ಶನಕ್ಕೆ ಪ್ರವೇಶದರವನ್ನು 200 ರೂ.ಗಳಿಗೆ ಸೀಮಿತಗೊಳಿಸಿದೆ.

ಕನ್ನಡ ಚಿತ್ರರಂಗದ ಏಳಿಗೆಯನ್ನೇ ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಅನೇಕ ಯೋಜನೆಗಳನ್ನು ರೂಪಿಸಲು ಮುಂದಾಗಿರುವ ನಮ್ಮ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಿಗೆ ತುಂಬುಹೃದಯದ ಧನ್ಯವಾದಗಳು.

ಇಂತಿ : ಅಧ್ಯಕ್ಷರು, ಪದಾಧಿಕಾರಿಗಳು, ಮಾಜಿಅಧ್ಯಕ್ಷರು
ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸದಸ್ಯರು
ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

ಎಂ.ನರಸಿಂಹಲು
ಅಧ್ಯಕ್ಷರು

| | | | | | | |
|---|---|---|---|---|---|---|
| ಕೆ.ವಿ. ವೆಂಕಟೇಶ್ (ಸಫೈರ್) | ಶ್ರೀನಿವಾಸ್ ಹೆಚ್.ಸಿ. (ಶಿಲ್ಪ ಶ್ರೀನಿವಾಸ್) | ರಂಗಪ್ಪ ಕೆ.ಓ | ಡಿ.ಕೆ.ರಾಮಕೃಷ್ಣ | ಎಂ.ಎನ್.ಕುಮಾರ್ | ಎಲ್.ಸಿ.ಕುಶಾಲ್ | ಬಿ.ಮಹದೇವ್ |
| ಉಪಾಧ್ಯಕ್ಷರು | ಉಪಾಧ್ಯಕ್ಷರು | ಉಪಾಧ್ಯಕ್ಷರು | ಗೌರವ ಕಾರ್ಯದರ್ಶಿ | ಗೌರವ ಕಾರ್ಯದರ್ಶಿ | ಗೌರವ ಕಾರ್ಯದರ್ಶಿ | ಖಜಾಂಚಿ |

ಮಣಿ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಟ್ರೈಲೈಫ್ ಆಸ್ಪತ್ರೆ ವತಿಯಿಂದ ನಡೆದ 3 ಕಿ.ಮೀ.ವಾಕಥಾನ್‌ನಲ್ಲಿ 2000ಕ್ಕೂ ಅಧಿಕ ಮಹಿಳೆಯರು ಭಾಗವಹಿಸಿದರು

### ಚಿಂತನ – ಮಂಥನ ಕಾರ್ಯಕ್ರಮ ಆಯೋಜನೆ

# ಸಂಭ್ರಮದ ಮಹಿಳಾ ದಿನ



ಬೆಂಗಳೂರು: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಗರದಲ್ಲಿ ಹಲವು ಸಂಘ ಸಂಸ್ಥೆಗಳು, ಇಲಾಖೆಗಳು ಶನಿವಾರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡವು

## ಹೆಚ್ಚಲಿದೆ ರಾಜಕೀಯ ಪ್ರಾತಿನಿಧ್ಯ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಸರ್ಕಾರ ರೂಪಿಸಿದ ಶೇ 33 ಮಹಿಳಾ ಮೀಸಲಾತಿ ಫಲವಾಗಿ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ 'ಮಹಿಳಾ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರಪತಿ ದ್ರೌಪದಿ ಮುರ್ಮು, ಸಚಿವೆ ನಿರ್ಮಲಾ ಸೀತಾರಾಮನ್ ದೇಶದ ಅತ್ಯುನ್ನತ ಹುದ್ದೆ ಅಲಂಕರಿಸಿದ್ದಾರೆ. ಇಂದು ಹೆಚ್ಚಿನ ಸಂಖ್ಯೆಯ ಮಹಿಳೆಯರು ಬಿಜೆಪಿಯತ್ತ ವಾಲುತ್ತಿದ್ದಾರೆ ಎಂದರು. ಈ ಸಮಯದಲ್ಲಿ ಆರು ಸಾಧಕಿಯರನ್ನು ಸನ್ಮಾನಿಸಲಾಯಿತು.

## 'ಹಕ್ಕಿಗಾಗಿ ಧ್ವನಿ ಎತ್ತಿ'

ಆಶಾದೇವಿ

ಮಹಿಳೆಯರ ಮತ್ತು ಮಕ್ಕಳ ಜೀವಿಸುವ ಹಕ್ಕಿಗಾಗಿ ಧ್ವನಿ ಎತ್ತಿ, ಆರೋಗ್ಯ-ಶಿಕ್ಷಣ-ಸುರಕ್ಷತೆ ಮತ್ತು ಆರ್ಥಿಕ ಭದ್ರತೆಯನ್ನು ಖಾತ್ರಿಪಡಿಸಿ ಎಂಬ ಘೋಷವಾಕ್ಯದೊಂದಿಗೆ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿಯು ಮಹಿಳಾ ದಿನ ಆಚರಿಸಿತು.

ಪ್ರಾಧ್ಯಾಪಕಿ ಎಂ.ಎಸ್. ಆಶಾದೇವಿ ಮಾತನಾಡಿ, 'ಬದಲಾದ ಹೆಣ್ಣನ್ನು ಈ ಸಮಾಜ ಸುಲಭವಾಗಿ ಒಪ್ಪುವುದಿಲ್ಲ. ಮಹಿಳೆಯರ ಸಹಿಸಿಕೊಳ್ಳುವ ಗುಣವೇ ಅವರಿಗೆ ಇಂದು ಮುಳ್ಳಾಗಿದೆ. ಹೆತ್ತವರು ಸಹ ಹೆಣ್ಣುಮಕ್ಕಳಿಗೆ ಎಲ್ಲವನ್ನು ಸಹಿಸಿಕೊಳ್ಳುವ ಬೋಧನೆಯನ್ನು ಮಾಡುತ್ತಾರೆ. ಮಹಿಳೆಯರು ಎಲ್ಲವನ್ನೂ ಸಹಿಸಿಕೊಳ್ಳಬೇಕಿಲ್ಲ' ಎಂದು ಹೇಳಿದರು.

ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿ ಶೋಭಾ ಎಸ್. ಮಾತನಾಡಿ, 'ವ್ಯವಸ್ಥೆಯು ಮಹಿಳೆ ಮತ್ತು ಮಕ್ಕಳ ಜೀವಿಸುವ ಹಕ್ಕನ್ನೇ ಕಸಿದುಕೊಳ್ಳುತ್ತಿದೆ. ಇತ್ತೀಚೆಗೆ ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕಳಪೆ ಔಷಧದಿಂದಾಗಿ ಉಂಟಾದ ಸಾಲು ಸಾಲು ಬಾಣಂತಿಯರ ಸಾವುಗಳು ಹಾಗು ಶಿಶುಮರಣಗಳು ರಾಜ್ಯದ ಜನರನ್ನು ತಲ್ಲಣಗೊಳಿಸಿವೆ' ಎಂದರು.

'ರಾಜ್ಯದಲ್ಲಿ ಮಹಿಳೆಯರು ಮತ್ತು ಮಕ್ಕಳು ರಕ್ತಹೀನತೆ ಹಾಗೂ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಹೀಗಿದ್ದರೂ ರಾಜ್ಯ ಸರ್ಕಾರವು ಈ ಬಾರಿಯು ಬಜೆಟ್ ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಮೀಸಲಿಟ್ಟ ಹಣ ಶೇಕಡಾ 4 ಮಾತ್ರ' ಎಂದು ಬೇಸರ ವ್ಯಕ್ತಪಡಿಸಿದರು.

ಎಐಎಂಎಸ್‌ಎಸ್ ಜಿಲ್ಲಾಧ್ಯಕ್ಷೆ ಹೇಮಾವತಿ ಕೆ., ಜಿಲ್ಲಾ ಕಾರ್ಯದರ್ಶಿ ನಿರ್ಮಲಾ ಎಚ್.ಎಲ್. ಭಾಗವಹಿಸಿದ್ದರು.

ಮಹಿಳಾ ಪೊಲೀಸರು ಕವಾಯತು ನಡೆಯಿತು

## ಕವಾಯತು

ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಮೈಸೂರು ರಸ್ತೆಯಲ್ಲಿರುವ ಸಿಎಆರ್ ಮೈದಾನದಲ್ಲಿ ಶನಿವಾರ ಮಹಿಳಾ ಪೊಲೀಸ್ ಸಿಬ್ಬಂದಿ ಕವಾಯತು ನಡೆಯಿತು.

ರಾಣಿ ಚೆನ್ನಮ್ಮ ಪಡೆಯು ವಿಶೇಷ ಪ್ರದರ್ಶನ ನೀಡಿತು. ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಕವಾಯತು ವೀಕ್ಷಿಸಿದರು.

ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಮಹಿಳಾ ಫಲಾನುಭವಿಗಳಿಗೆ 32 ಎಲೆಕ್ಟ್ರಿಕ್ ಆಟೊಗಳು, ಎರಡು ಚಾಯ್ ಬಂಡಿ, 10 ಹೊಲಿಗೆ ಯಂತ್ರಗಳನ್ನು ಇದೇ ವೇಳೆ ವಿತರಣೆ ಮಾಡಲಾಯಿತು.

## ಕ್ಯಾನ್ಸರ್ ತಪಾಸಣೆ

ಪೊಲೀಸ್ ಇಲಾಖೆ ಸಹಯೋಗದೊಂದಿಗೆ ನಗರ ಪೊಲೀಸ್ ಮಹಿಳಾ ಸಿಬ್ಬಂದಿಗೆ ಹಮ್ಮಿಕೊಂಡಿದ್ದ ಉಚಿತ ಸರ್ವೈಕಲ್ ಕ್ಯಾನ್ಸರ್‌ನ ಲಸಿಕೆ ಹಾಗೂ ಕ್ಯಾನ್ಸರ್ ತಪಾಸಣೆಗೆ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಚಾಲನೆ ನೀಡಿದರು.

ಕಾನೂನು ಸುವ್ಯವಸ್ಥೆ ನಿರ್ವಹಣೆಯಲ್ಲಿ ಪೊಲೀಸ್ ಮಹಿಳಾ ಸಿಬ್ಬಂದಿಯ ಕಾರ್ಯ ಅವಶ್ಯಕ. ಕರ್ತವ್ಯ ನಿರ್ವಹಣೆಯ ಭರದಲ್ಲಿ ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಬಾರದು. ಕ್ಯಾನ್ಸರ್ ಬಗ್ಗೆ ತಪಾಸಣೆಯನ್ನು ಆಗಾಗ ಮಾಡಿಸಬೇಕು. ಎಚ್‌ಸಿಜಿ ಕ್ಯಾನ್ಸರ್ ಕೇಂದ್ರವು ಸರ್ವೈಕಲ್ ಕ್ಯಾನ್ಸರ್ ಲಸಿಕೆ ನೀಡುತ್ತಿರುವುದು ಶ್ಲಾಘನೀಯ ಎಂದು ದಯಾನಂದ ಮೆಚ್ಚುಗೆ ವ್ಯಕ್ತಪಡಿಸಿದರು.

ಎಚ್‌ಸಿಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಎಸ್. ಮನೀಶಾ ಕುಮಾರ್ ಮಾತನಾಡಿ, ಮಹಿಳೆ ಆರೋಗ್ಯವಾಗಿದ್ದರೆ ಸಮಾಜವೇ ಆರೋಗ್ಯವಾಗಿರುತ್ತದೆ' ಎಂದರು.

ಕಾರ್ಯಕ್ರಮದಲ್ಲಿ ನಗರದ 250ಕ್ಕೂ ಹೆಚ್ಚು ಮಹಿಳಾ ಪೊಲೀಸ್ ಸಿಬ್ಬಂದಿಗೆ ಸರ್ವೈಕಲ್ ಕ್ಯಾನ್ಸರ್ ಲಸಿಕೆ ನೀಡಲಾಯಿತು. ಜೊತೆಗೆ, ಸ್ತನ ಕ್ಯಾನ್ಸರ್, ಪಿಎಪಿ ಸ್ಮೀಯರ್ ಟೆಸ್ಟ್ ಸೇರಿದಂತೆ ಹಲವು ತಪಾಸಣೆ ಮಾಡಲಾಯಿತು. ಪೊಲೀಸ್ ನಿರ್ವಹಣಾ ಜಂಟಿ ಕಮಿಷನರ್ ಕುಲ್‌ದೀಪ್ ಕುಮಾರ್ ಆರ್. ಜೈನ್, ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್, ಹೆಚ್ಚುವರಿ ಪೊಲೀಸ್ ಕಮಿಷನರ್ ಚಂದ್ರಗುಪ್ತಾ ಉಪಸ್ಥಿತರಿದ್ದರು.

## ಸಾಧಕರಿಗೆ ಸನ್ಮಾನ

ಪ್ರಪಂಚದ ಅತಿ ಕಠಿಣ ಮ್ಯಾರಥಾನ್‌ಗಳಲ್ಲಿ ಒಂದಾದ ಲಡಾಖ್‌ನ 12,000 ಅಡಿ ಎತ್ತರ ಪ್ರದೇಶದಲ್ಲಿ 42 ಕಿ.ಮೀ ಓಟ ಪೂರೈಸಿ ಗೆದ್ದ ಶಿಲ್ಪಾ ಹೆಗಡೆ, ಇಸ್ರೊ ಅಂತರಿಕ್ಷಕ್ಕೆ ಚಿಮ್ಮಿಸಿದ ಮೊದಲ ಮೈಕ್ರೊ ಬಯಾಲಜಿಕಲ್ ಪೇ ಲೋಡ್ ಆರ್‌ವಿಎಸ್‌ಎಟಿ-1ರ ಸಿದ್ಧತೆ ಮಾಡಿದ ತಂಡದಲ್ಲಿರುವ ವಿಜ್ಞಾನಿ ಪಾರ್ವತಿ, ಅತಿ ಚಿಕ್ಕ ವಯಸ್ಸಿನಲ್ಲಿಯೇ ದೇಶ ವಿದೇಶಗಳಲ್ಲಿ ಯೋಗ, ಭರತನಾಟ್ಯ ಪ್ರದರ್ಶಿಸಿದ ನೇಹಾ, ಬಹುಭಾಷಾ ತಜ್ಞೆ, ಸಾಹಿತಿ,ಯಕ್ಷ ನೃತ್ಯ ಸಹಿತ ಬಹುವಿಧದ ಶಾಸ್ತ್ರೀಯ ವಾದನದ ಪ್ರವೀಣೆ ಸ್ವಾತಿ ಪಂಡಿತ, ಜೆಇಇ ಬಿ ಆರ್ಚ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ, ರಾಷ್ಟ್ರಮಟ್ಟದಲ್ಲಿ 5ನೇ ರ‍್ಯಾಂಕ್ ಗಳಿಸಿದ ರಕ್ಷಾ ದಿನೇಶ ಹೆಗಡೆ ಅವರನ್ನು ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದಲ್ಲಿ ಸನ್ಮಾನಿಸಲಾಯಿತು.

ರಕ್ಷಾ ದಿನೇಶ್ ಹೆಗಡೆ ಅವರ ಪರವಾಗಿ ಗೀತಾ ಸಭಾಹಿತ ಸನ್ಮಾನ ಸ್ವೀಕರಿಸಿದರು. ಸರೋಜಾ ಪ್ರಕಾಶ್ ಬರೆದ 'ವಿಜ್ಞಾನದ ಜಾಡು ಬದಲಿಸಿದ ಜಾಣೆಯರು' ಪುಸ್ತಕವನ್ನು ಪ್ರಕಾಶಕಿ ವಿಶಾಲಾಕ್ಷಿ ಶರ್ಮ ಅವರ ಭೂಮಿ ಬುಕ್ಸ್ ಪ್ರಕಾಶನ ಪ್ರಕಟಿಸಿದ್ದು, ಲೇಖಕಿ ದೀಪಾ ಎಂ.ಬಿ. ಹಾಗೂ ನಿವೃತ್ತ ಡಿಜಿಪಿ ಡಿ.ವಿ. ಗುರುಪ್ರಸಾದ ಬಿಡುಗಡೆ ಮಾಡಿದರು.

ಭಾರತಿನಗರ ರೆಸಿಡೆನ್ಸಿ ಫೋರಂ ವತಿಯಿಂದ ನಡೆದ ಮಹಿಳಾ ದಿನಾಚರಣೆಯಲ್ಲಿ ಆಟೊ ಚಾಲಕಿಯರು, ಮಹಿಳಾ ಪೌರಕಾರ್ಮಿಕರು, ಕಾವಲು ಪಡೆ, ಶಿಕ್ಷಕಿಯರನ್ನು ಗುರುತಿಸಿ ಗೌರವಿಸಲಾಯಿತು. ನಟಿ ತಾರಾ ಅನುರಾಧ, ರಾಗಿಣಿ ರಾಜವರ್ಧನ್, ಗೌತಮ್ ಮಾಚಯ್ಯ, ಸುರೇನ್ ಭಾಗವಹಿಸಿದರು

## ಭೀಮವ್ವ ಶಿಳ್ಳೆಕ್ಯಾತರಗೆ ಗೌರವ

ವೃತ್ತಿಯಲ್ಲಿ ಸಾಧನೆ ತೋರಿದ ಕೆಎಸ್‌ಆರ್‌ಟಿಸಿಯ ಮಹಿಳಾ ನೌಕರರನ್ನು ಮಹಿಳಾ ದಿನಾಚರಣೆಯಲ್ಲಿ ಸನ್ಮಾನಿಸಲಾಯಿತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೊಪ್ಪಳದ ಜನಪದ ಹಾಡುಗಾರ್ತಿ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತರ ಅವರನ್ನು ಗೌರವಿಸುವ ಮೂಲಕ ಕೆಎಸ್‌ಆರ್‌ಟಿಸಿ ನೌಕರರು ಮಹಿಳಾ ದಿನ ಆಚರಿಸಿದರು.

ಭೀಮವ್ವ ಹಾಡುವ ಮೂಲಕ ಕಾರ್ಯಕ್ರಮಕ್ಕೆ ಮೆರುಗು ನೀಡಿದರು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, 'ಎಲ್ಲ ರಂಗಗಳಲ್ಲಿಯೂ ಮಹಿಳೆಯರು ಪುರುಷರಿಗೆ ಸಮಾನವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಿಗಮದ ತಾಂತ್ರಿಕ ಸಿಬ್ಬಂದಿ ವಿಭಾಗದಲ್ಲಿ ಮಹಿಳೆಯರು ಪುರುಷರಿಗಿಂತಲೂ ಹೆಚ್ಚಿನ ಕಾರ್ಯಕ್ಷಮತೆಯಿಂದ ಕಾರ್ಯನಿರ್ವಹಿಸಿ, ವಾಹನಗಳ ಪುನಃಶ್ಚೇತನ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದಾರೆ' ಎಂದು ಶ್ಲಾಘಿಸಿದರು.

ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಎಲ್ಲಾ ರೀತಿಯಿಂದಲೂ ಅನುಕೂಲ ಕಲ್ಪಿಸಲಾಗುತ್ತಿದೆ, ಮಾರ್ಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನಿರ್ವಾಹಕಿಯರಿಗೂ ಮಾರ್ಗ ನಿಯೋಜನೆಯಲ್ಲಿ ಪ್ರಾಶಸ್ತ್ಯ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮಹಿಳಾ ತಾಂತ್ರಿಕ ಸಿಬ್ಬಂದಿಯೇ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸಿರುವ ನಗರ ಸಾರಿಗೆ ಬಸ್ಸುಗಳ ಪುನಃಶ್ಚೇತನದ ವಿಡಿಯೊವನ್ನು ಬಿಡುಗಡೆ ಮಾಡಲಾಯಿತು.

ಕೆಎಸ್‌ಆರ್‌ಟಿಸಿಯಲ್ಲಿ ಅಧಿಕಾರಿಗಳು 80, ನಿರ್ವಾಹಕರು 875, ಚಾಲಕ ಕಂ ನಿರ್ವಾಹಕರು 26, ತಾಂತ್ರಿಕ ಸಿಬ್ಬಂದಿ 976, ಭದ್ರತಾ ಸಿಬ್ಬಂದಿ 110 ಕಚೇರಿ ಸಹಾಯಕರು 80 ಹಾಗೂ ಸ್ವಚ್ಛತಾಗಾರರು 135 ಸೇರಿ ಒಟ್ಟು 3,052 ಮಹಿಳೆಯರಾಗಿದ್ದಾರೆ.

ನಿಗಮದ 17 ವಿಭಾಗಗಳಿಂದ ತಲಾ ಒಬ್ಬರಂತೆ ಉತ್ತಮ ಕಾರ್ಯ ಸಾಧನೆ ತೋರಿದ, ತಾಂತ್ರಿಕ ಸಿಬ್ಬಂದಿ-19, ನಿರ್ವಾಹಕರು-16, ಹಾಗೂ ಕರಾಸಾ ಪೇದೆ-7, ಒಟ್ಟು 42 ಮಹಿಳೆಯರನ್ನು ಸನ್ಮಾನಿಸಲಾಯಿತು.

ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ಮಹಮ್ಮದ್ ರಿಜ್ವಾನ್ ನವಾಬ್, ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿದೇವಿ ಭಾಗವಹಿಸಿದ್ದರು.

## ಮಹಿಳೆಯರಿಂದಲೇ 'ಮಾಲ್ಗುಡಿ ಎಕ್ಸ್‌ಪ್ರೆಸ್' ನಿರ್ವಹಣೆ

**ಬೆಂಗಳೂರು:** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಶನಿವಾರ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಮಹಿಳಾ ಸಿಬ್ಬಂದಿಯೇ 'ಮಾಲ್ಗುಡಿ ಎಕ್ಸ್‌ಪ್ರೆಸ್' ರೈಲನ್ನು ಸಂಪೂರ್ಣವಾಗಿ ನಿರ್ವಹಿಸಿದರು.

ಲೋಕೊ ಪೈಲಟ್ ಆಗಿ ಸಿರೀಷಾ ಗಜಿನಿ, ಸಹಾಯಕ ಲೋಕೊ ಪೈಲಟ್ ಆಗಿ ಸುಕನ್ಯಾ ಎಸ್., ರೈಲು ನಿರ್ವಾಹಕರಾಗಿ ಪ್ರಿಯದರ್ಶಿನಿ ನಿರ್ವಹಣೆ ಮಾಡಿದರು. ಟಿಕೆಟ್ ಪರೀಕ್ಷಕಿ ಸೋನಾ ವಿ.ಜೆ., ರೈಲ್ವೆ ರಕ್ಷಣಾ ಪಡೆಯ (ಆರ್‌ಪಿಎಫ್) ಸೌಮ್ಯಾ ಮತ್ತು ಅಶ್ವತಿ ಚಂದ್ರನ್ ಎಸ್ಕಾರ್ಟಿಂಗ್ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸಿದರು.

ಈ ರೈಲಿಗೆ ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಮಿತೇಶ್ ಕುಮಾರ್ ಸಿನ್ಹಾ ಚಾಲನೆ ನೀಡಿದರು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಅಶುತೋಷ್ ಮಾಥುರ್, ಪರೀಕ್ಷಿತ್ ಮೋಹನ್ ಪುರಿಯಾ; ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್ ಸುರೇಂದ್ರ ನಾಥ್, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ, ಹಿರಿಯ ವಿಭಾಗೀಯ ಪರಿಸರ ಮತ್ತು ಹೌಸ್ ಕೀಪಿಂಗ್ ವ್ಯವಸ್ಥಾಪಕಿ ಪ್ರಿಯಾ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಕೃಷ್ಣ ಚೈತನ್ಯ, ಮುಖ್ಯ ವೈದ್ಯಕೀಯ ಅಧೀಕ್ಷಕಿ ಪ್ರಭಾವತಿ ಗಜಲಕ್ಷ್ಮಿ, ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕಿ ನಿವೇದಿತಾ ಬಾಲರಡ್ಡಿಯವರ್, ವಿಭಾಗೀಯ ಸಿಬ್ಬಂದಿ ಅಧಿಕಾರಿ ವೆಂಕಟೇಶ್ ನಾಯಕ್ ಉಪಸ್ಥಿತರಿದ್ದರು.

ಮಹಿಳಾ ದಿನಾಚರಣೆಯ ಅಂಗವಾಗಿ, ಬೆಂಗಳೂರು ವಿಭಾಗವು ಮಹಿಳಾ ಉದ್ಯೋಗಿಗಳಿಗೆ ಆಶುಭಾಷಣ ಸ್ಪರ್ಧೆ, ಮೆಹಂದಿ ಮತ್ತು ನೇಲ್ ಆರ್ಟ್, ಬೆಂಕಿ ರಹಿತ ಅಡುಗೆ ತಯಾರಿಕೆ ಮೊದಲಾದ ಸ್ಪರ್ಧೆಗಳನ್ನು ಆಯೋಜಿಸಿತ್ತು.

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಮಹಿಳಾ ಸಿಬ್ಬಂದಿಯೇ ಸಂಪೂರ್ಣವಾಗಿ ನಿರ್ವಹಿಸುವ 'ಮಾಲ್ಗುಡಿ ಎಕ್ಸ್‌ಪ್ರೆಸ್' ರೈಲಿಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಲ್ಲಿ ಚಾಲನೆ ನೀಡಲಾಯಿತು

## 'ಹೆಣ್ಣೆಂದು ಕೊರಗುವುದು ಬಿಟ್ಟುಬಿಡಿ'

ಪ್ರಜಾವಾಣಿ ವಾರ್ತೆ

ಸಂವಾದ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ಮಾತನಾಡಿದರು. ಜಯ್ನಾ ಕೊಠಾರಿ ಉಪಸ್ಥಿತರಿದ್ದರು
–ಪ್ರಜಾವಾಣಿ ಚಿತ್ರ

**ಬೆಂಗಳೂರು:** 'ತಾನು ಹೆಣ್ಣು ಎಂದು ಕೊರಗುವುದನ್ನು ಮೊದಲು ಬಿಟ್ಟುಬಿಡಿ. ಕಠಿಣ ಪರಿಶ್ರಮವನ್ನು ನಂಬಿ' ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ತಿಳಿಸಿದರು.

ಸೆಂಟರ್ ಫಾರ್ ಲಾ ಆ್ಯಂಡ್ ಪಾಲಿಸಿ ರಿಸರ್ಚ್ (ಸಿಎಲ್‌ಪಿಆರ್) ಶನಿವಾರ ಹಮ್ಮಿಕೊಂಡಿದ್ದ 'ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹಿಳೆಯರ ಸಮಾನ ಒಳಗೊಳ್ಳುವಿಕೆ' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ತನಗೆ ಹೆಚ್ಚಿನ ರಕ್ಷಣೆ ಬೇಕು. ರಾತ್ರಿ ಕೆಲಸ ಮಾಡುವುದು ಕಷ್ಟ. ಹೀಗೆ ನಾವೇ ಏನೇನೋ ಕಲ್ಪಿಸಿಕೊಂಡು ಅವಕಾಶಗಳನ್ನು ಕೈಚೆಲ್ಲಬಾರದು. ಹೆಣ್ಣು ಎಂಬುದನ್ನು ತಲೆಯಿಂದ ಮೊದಲು ತೆಗೆದುಬಿಡಬೇಕು. ಜನಸಂಖ್ಯೆಯ ಶೇ 50ರಷ್ಟು ಇರುವ ಹೆಣ್ಣುಮಕ್ಕಳು ನ್ಯಾಯಾಂಗ ಸಹಿತ ಎಲ್ಲ ಕ್ಷೇತ್ರಗಳಲ್ಲಿ ಶೇ 50ರಷ್ಟು ಅವಕಾಶ ಪಡೆಯುವಂತಾಗಬೇಕು' ಎಂದರು.

'ಬಾಲ್ಯದಲ್ಲಿಯೇ ಹೆಣ್ಣು, ಗಂಡು ಎಂಬ ಭೇದ ಮಾಡದೇ ಇಬ್ಬರಿಗೂ ಸಮಾನ ಶಿಕ್ಷಣ, ಸಮಾನ ಅವಕಾಶಗಳನ್ನು ನೀಡುವುದನ್ನು ಹೆತ್ತವರು ರೂಢಿಸಿಕೊಂಡರೆ ದೊಡ್ಡವರಾದ ಮೇಲೆ ಹೆಣ್ಣುಮಕ್ಕಳು ಕೀಳರಿಮೆ ಹೊಂದುವುದು ತಪ್ಪುತ್ತದೆ' ಎಂದು ಹೇಳಿದರು.

ಬಾಲ್ಯ, ಮನೆಯಲ್ಲಿ ಹೆತ್ತವರ ಪ್ರೋತ್ಸಾಹ, ನ್ಯಾಯಮೂರ್ತಿ ಆಗುವುದನ್ನು ನೋಡಬೇಕು ಎಂಬ ತಂದೆಯ ಕನಸು, ವಿಶಾಲ ಮನಸ್ಸಿನ ಅಜ್ಜಿ ಉಂಟು ಮಾಡಿದ ಪ್ರಭಾವಗಳನ್ನು ಇಂದಿರಾ ಬ್ಯಾನರ್ಜಿ ಹಂಚಿಕೊಂಡರು.

ಸಿಎಲ್‌ಪಿಆರ್ ಕಾರ್ಯನಿರ್ವಾಹಕ ನಿರ್ದೇಶಕಿ ಜಯ್ನಾ ಕೊಠಾರಿ ಸಂವಾದ ನಡೆಸಿಕೊಟ್ಟರು.

## ಬ್ಯಾಟರಾಯನಪುರ: 'ಸ್ತ್ರೀಸಂಭ್ರಮ'

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್‌ನ ಮಹಿಳಾ ಮುಖಂಡರನ್ನು ಸನ್ಮಾನಿಸಲಾಯಿತು

**ಯಲಹಂಕ:** ಸಮಾಜದ, ಕುಟುಂಬಗಳ ಏಳಿಗೆ ಮತ್ತು ಯಶಸ್ಸಿಗೆ ಮಹಿಳೆಯರೇ ಪ್ರೇರಕಶಕ್ತಿ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಕೆಬಿಜಿ ಸ್ವಯಂಸೇವಕರು ಮತ್ತು ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮಹಿಳಾ ಕಾಂಗ್ರೆಸ್ ಘಟಕದ ಆಶ್ರಯದಲ್ಲಿ ಸಹಕಾರ ನಗರದ ಕೆನರಾ ಬ್ಯಾಂಕ್ ಲೇಔಟ್ ಮೈದಾನದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 'ಸ್ತ್ರೀ-ಸಂಭ್ರಮ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳೆಯರ ಶ್ರಮ ಮತ್ತು ಸಾಧನೆಯನ್ನು ಗೌರವಿಸುವುದನ್ನು ಕಲಿತರೆ ಕುಟುಂಬ, ದೇಶ ಹಾಗೂ ಪ್ರಪಂಚಕ್ಕೆ ಒಳಿತಾಗಲಿದೆ. ಹಲವು ರಂಗಗಳಲ್ಲಿ ಮಹಿಳೆಯರು ಅದ್ವಿತೀಯ ಸಾಧನೆಮಾಡುವ ಮೂಲಕ ದೇಶದ ಅಭಿವೃದ್ಧಿಗೆ ವಿಶೇಷ ಕೊಡುಗೆ ನೀಡಿದ್ದಾರೆ. ಈ ದಿಸೆಯಲ್ಲಿ ಮಹಿಳೆಯರ ಸಾಧನೆಯನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಕ್ಷೇತ್ರದಲ್ಲಿ ಪ್ರತಿವರ್ಷ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಕ್ಷೇತ್ರವ್ಯಾಪ್ತಿಯಲ್ಲಿ ಕಾಂಗ್ರೆಸ್ ಸದಸ್ಯತ್ವ ಪಡೆದಿರುವ ಒಂದು ಸಾವಿರಕ್ಕೂ ಹೆಚ್ಚು ಜನರಿಗೆ ನೋಂದಣಿ ಆದೇಶಪತ್ರ ಹಾಗೂ ಉಡುಗೊರೆಗಳನ್ನು ವಿತರಿಸಲಾಯಿತು. ಮಹಿಳೆಯರಿಗಾಗಿ ರಂಗೋಲಿ, ಅಡುಗೆಸ್ಪರ್ಧೆ ಹಾಗೂ ಮಕ್ಕಳಿಗಾಗಿ ವಿವಿಧ ಆಟದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರು ಹಾಗೂ 25 ವರ್ಷಗಳಿಂದ ಕಾಂಗ್ರೆಸ್ ಕಾರ್ಯಕರ್ತರಾಗಿರುವ ಮಹಿಳಾ ಮುಖಂಡರನ್ನು ಸನ್ಮಾನಿಸಲಾಯಿತು. ಮಹಿಳೆಯರು ಫ್ಯಾಷನ್ ಶೋ ಮತ್ತು ವಿವಿಧ ನೃತ್ಯಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಸುನಿಧಿ ಗಣೇಶ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು.

ಮಹಿಳಾ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಶುಭ ಹಾರೈಸಿದರು. ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎನ್. ಎನ್. ಶ್ರೀನಿವಾಸಯ್ಯ, ಎಂ. ಜಯಗೋಪಾಲಗೌಡ, ಎನ್.ಕೆ. ಮಹೇಶ್‌ಕುಮಾರ್, ಮುಖಂಡರಾದ ಕೆ. ದಿಲೀಪ್‌ಕುಮಾರ್, ಕೆ. ಮಂಜುನಾಥ್, ಮೂರ್ತಿ, ಆನಂದ್ ಉಪಸ್ಥಿತರಿದ್ದರು.

## 'ನೊಂದ ಮಹಿಳೆಗೆ ಆಸರೆ ನೀಡಿ'

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿನಗರ:** 'ಸಮಾಜದಲ್ಲಿರುವ ನೊಂದ, ಅಶಕ್ತ ಮಹಿಳೆಯರಿಗೆ ಆಸರೆ ನೀಡಿ, ಧೈರ್ಯ ತುಂಬುವ ಕೆಲಸ ಮಾಡಬೇಕು' ಎಂದು ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಹೇಳಿದರು.

ಲಗ್ಗೆರೆಯಲ್ಲಿ ಆಶ್ರಯ ಮಹಿಳಾ ವೇದಿಕೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ಸ್ತ್ರೀ ಸಂಭ್ರಮ – 2025' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಗಂಡನಿಲ್ಲದ ಹೆಣ್ಣುಮಕ್ಕಳನ್ನು ಸಮಾಜ ಬಹಳ ಕೆಟ್ಟದಾಗಿ ನೋಡುತ್ತದೆ. ಜನರು ಅಪಪ್ರಚಾರ ಮಾಡುತ್ತಾರೆ. ನನ್ನ ವಿರುದ್ಧವೇ ಅಪಪ್ರಚಾರ ನಡೆಯುತ್ತಿದೆ. ಇದ್ಯಾವುದಕ್ಕೂ ಅಂಜದೇ, ಸಮಾಜ ಸೇವೆಗೆ ಬಂದಿದ್ದೇನೆ' ಎಂದರು.

ಕಾಂಗ್ರೆಸ್ ಮುಖಂಡ ಲಗ್ಗೆರೆ ನಾರಾಯಣಸ್ವಾಮಿ 'ಇತಿಹಾಸದಲ್ಲೂ ಹೆಣ್ಣಿನ ಮೇಲೆ ದಬ್ಬಾಳಿಕೆ ನಡೆದಿದೆ. ಆಗ ಮಹಿಳೆಯರು ಹೋರಾಟದ ಮೂಲಕ ನ್ಯಾಯ ಪಡೆದಿದ್ದಾರೆ' ಎಂದರು.

ಬಿಬಿಎಂಪಿ ವಿರೋಧ ಪಕ್ಷದ ಮಾಜಿ ನಾಯಕ ಬಿ.ಆರ್. ನಂಜುಂಡಪ್ಪ, ಬಿಬಿಎಂಪಿ ಮಾಜಿ ಸದಸ್ಯ ಎಚ್.ಎಸ್.ಸಿದ್ದೇಗೌಡ, ಪಾಲಿಕೆ ಮಾಜಿ ಸದಸ್ಯರಾದ ವೇಲುನಾಯ್ಕರ್, ಆಶಾಸುರೇಶ್, ಜಿ.ಮೋಹನ್ ಕುಮಾರ್, ರೂಪಲಿಂಗೇಶ್ ಮಾತನಾಡಿದರು. ಪಾಲಿಕೆ ಮಾಜಿ ಸದಸ್ಯೆ ಮಂಜುಳನಾರಾಯಣಸ್ವಾಮಿ ಸಮಾರಂಭದ ಅಧ್ಯಕ್ಷತೆ ವಹಿಸಿದರು. ಕಾರ್ಯಕ್ರಮದಲ್ಲಿ ನಟಿ ರೇಖಾದಾಸ್, ಮೈಸೂರು ಮಂಜುಳ, ಆರೋಗ್ಯ ಇಲಾಖೆಯ ಸೌಭಾಗ್ಯ, ರೂಪದರ್ಶಿ ಅರುಣ ಅಶೋಕ್, ಪೌರಕಾರ್ಮಿಕ ಮಹಿಳೆಯರಾದ ರಜಿಯಾ, ಮುನಿಯಮ್ಮ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ 250ಕ್ಕೂ ಹೆಚ್ಚು ಮಂದಿಗೆ ಬಹುಮಾನ ವಿತರಿಸಲಾಯಿತು.

ಲಗ್ಗೆರೆಯಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರಗಳ ಸಾಧಕಿಯರನ್ನು ಸನ್ಮಾನಿಸಲಾಯಿತು

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಮುಕ್ತಾಯವಾದ ಮಾತೃ ಕಪ್ ಎಸ್‌.ಎಂ.ಎನ್. ಸ್ಮಾರಕ ಮಹಿಳೆಯರ ರಾಜ್ಯಮಟ್ಟದ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ನೈಋತ್ಯ ರೈಲ್ವೆ ತಂಡ (ಎಡದಿಂದ), ನಿಂತವರು; ರುತ್ ಬ್ಲೆಸೆನ್, ಕೆ.ಸತ್ಯಾ, ಬಾಂಧವ್ಯ, ಎಸ್‌.ಸತ್ಯಾ, ಝುರೀನ್ ಸೋಮಯ್ಯ (ಕೋಚ್), ಮೋಹನಾ ಬಾಲಾ, ಸೂರ್ಯದರ್ಶಿನಿ, ಕುಳಿತವರು: ಅಮೃತಾ, ಶೋಭನಾ
ಚಿತ್ರ/ಎಸ್‌.ಕೆ.ದಿನೇಶ್

## ನೈರುತ್ಯ ರೈಲ್ವೆ ತಂಡಕ್ಕೆ ಮಾತೃ ಕಪ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನೈರತ್ಯ ರೈಲ್ವೆ ತಂಡವು ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಮಾತೃ ಕಪ್ ಎಸ್.ಎಂ.ಎನ್. ಸ್ಮಾರಕ ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿತು.

ಶನಿವಾರ ನಡೆದ ಫೈನಲ್‌ನಲ್ಲಿ ನೈರುತ್ಯ ತಂಡವು 75-66 (47-33) ರಿಂದ ಬೀಗಲ್ಸ್ ಬ್ಯಾಸ್ಕೆಟ್ ಬಾಲ್ ಕ್ಲಬ್ ವಿರುದ್ಧ ಜಯಿಸಿತು. ರೈಲ್ವೆ ತಂಡದ ಬಾಂಧವ್ಯ (23), ಸತ್ಯಾ (17) ಮತ್ತು ಸತಿಯಾ (17) ತಂಡದ ಗೆಲುವಿಗೆ ಬಲ ತುಂಬಿದರು. ಬೀಗಲ್ಸ್ ತಂಡದ ಸಂಜನಾ ರಮೇಶ್ (26), ಚಂದನಾ (13) ಹಾಗೂ ಮೇಖಲಾ (13) ಮಿಂಚಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಮೈಸೂರಿನ ಡಿವೈಇಎಸ್ ತಂಡವು 51-49 (27-30) ರಿಂದ ಮೌಂಟ್ಸ್ ಕ್ಲಬ್ ವಿರುದ್ಧ ರೋಚಕ ಜಯ ಸಾಧಿಸಿತು.

ವಿಜೇತ ತಂಡಕ್ಕೆ ₹75 ಸಾವಿರ, ರನ್ನರ್ಸ್ ಅಪ್ ತಂಡಕ್ಕೆ ₹50 ಸಾವಿರ, ಮೂರನೇ ಸ್ಥಾನಕ್ಕೆ ₹30 ಸಾವಿರ ಹಾಗೂ ನಾಲ್ಕನೇ ಸ್ಥಾನಕ್ಕೆ ₹15 ಸಾವಿರ ಪುರಸ್ಕಾರ ನೀಡಲಾಯಿತು.

ರೈಲ್ವೆ ತಂಡದ ಮೋಹನಾ ಬಾಲಾ ಟೂರ್ನಿಯ ಆಟಗಾರ್ತಿ ಹಾಗೂ ಬೀಗಲ್ಸ್ ತಂಡದ ಸಂಜನಾ ಎನ್ ಕುಮಾರ್ ಅವರಿಗೆ ಉದಯೋನ್ಮುಖ ಆಟಗಾರ್ತಿ ಪ್ರಶಸ್ತಿ ನೀಡಲಾಯಿತು.

ಸಮಾರೋಪ ಸಮಾರಂಭದಲ್ಲಿ ರಾಷ್ಟ್ರೀಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತ ಬಾಲಕಿಯರ ತಂಡಕ್ಕೆ ₹7.5 ಲಕ್ಷ; ಬೆಳ್ಳಿ ಗಳಿಸಿದ ಬಾಲಕರ ತಂಡಕ್ಕೆ ₹5 ಲಕ್ಷ ಹಾಗೂ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ 4ನೇ ಸ್ಥಾನ ಪಡೆದ ರಾಜ್ಯ ಪುರುಷರ ತಂಡಕ್ಕೆ ₹2 ಲಕ್ಷ ಬಹುಮಾನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕದ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಫಿಬಾ ಏಷ್ಯಾ ಮತ್ತು ಕೆಬಿಎ ಅಧ್ಯಕ್ಷ ಕೆ. ಗೋವಿಂದರಾಜ್, ಕನ್ನಡ ಸಿನಿಮಾ ನಟಿ ಅನುಪ್ರಭಾಕರ್ ಹಾಜರಿದ್ದರು.

## ಶಾಲೆಗೆ ಮಠದಿಂದ ಭೂಮಿ

ಪ್ರಜಾವಾಣಿ ವಾರ್ತೆ

**ಸರ್ಕಾರಿ ಶಾಲೆಗಳನ್ನು ಉಳಿಸಬೇಕು. ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು.**
**ಮಲ್ಲಿಕಾರ್ಜುನ ಸ್ವಾಮೀಜಿ,** ಸಿದ್ಧಲಿಂಗೇಶ್ವರ ಮಠ

**ಸಿರುಗುಪ್ಪ (ಬಳ್ಳಾರಿ ಜಿಲ್ಲೆ):** ತಾಲ್ಲೂಕಿನ ಕೆ.ಸೂಗೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಕಟ್ಟಡ ನಿರ್ಮಾಣಕ್ಕೆ ಸಿದ್ಧಲಿಂಗೇಶ್ವರ ಮಠದ ಮಠಾಧಿಪತಿ ಶಿವಯೋಗಿ ಮಲ್ಲಿಕಾರ್ಜುನ ಸ್ವಾಮೀಜಿ ಎರಡು ಎಕರೆ ಜಮೀನು ದಾನ ಮಾಡಿದ್ದಾರೆ.

ನಗರದ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಭೂಮಿಯನ್ನು ನೋಂದಣಿ ಮಾಡಿಸಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಗುರಪ್ಪ ಅವರಿಗೆ ಹಕ್ಕು ಪತ್ರ ಹಸ್ತಾಂತರಿಸಿದರು. ಕೆ.ಸೂಗೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು 2015ರಲ್ಲಿ ಉನ್ನತೀಕರಿಸಲಾಗಿತ್ತು. ಆದರೆ, ಹೊಸ ಕಟ್ಟಡ ನಿರ್ಮಿಸಲು ಜಾಗದ ಕೊರತೆ ಎದುರಾಗಿತ್ತು. ಇದಕ್ಕಾಗಿ ಶಿಕ್ಷಣ ಇಲಾಖೆಯು ಗ್ರಾಮದಲ್ಲಿ ಹಲವು ಬಾರಿ ಸಾರ್ವಜನಿಕ ಸಂಪರ್ಕ ಸಭೆ ಏರ್ಪಡಿಸಿದರೂ ಭೂಮಿ ನೀಡಲು ಯಾರೂ ಮುಂದೆ ಬಂದಿರಲಿಲ್ಲ.

'ಗ್ರಾಮದಿಂದ 2 ಕಿ.ಮೀ. ದೂರದಲ್ಲಿರುವ ಸರ್ಕಾರಿ ಜಾಗದಲ್ಲಿ ಶಾಲೆ ನಿರ್ಮಿಸಲು ನಿರ್ಧರಿಸಲಾಗಿತ್ತು. ಅದು ಮಕ್ಕಳಿಗೆ ದೂರವಾಗುತ್ತದೆ ಎಂಬ ಆಕ್ಷೇಪ ವ್ಯಕ್ತವಾದವು. ಇದನ್ನು ಅರಿತ ಮಲ್ಲಿಕಾರ್ಜುನ ಸ್ವಾಮೀಜಿ ಎರಡು ಎಕರೆ ಜಮೀನು ದಾನ ನೀಡಿದರು' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಗುರಪ್ಪ ಹೇಳಿದ್ದಾರೆ.

## ₹2 ಸಾವಿರ ಕೋಟಿ ಮೌಲ್ಯದ ಜಮೀನು ರಕ್ಷಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಸಜ್ಜೆಪಾಳ್ಯದಲ್ಲಿರುವ ಕೃಷ್ಣಪ್ಪ ರಂಗಮ್ಮ ಶಿಕ್ಷಣ (ಕೆಆರ್‌ಇ) ಟ್ರಸ್ಟ್‌ಗೆ ಸೇರಿದ ₹2 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಜಮೀನು ರಕ್ಷಿಸಬೇಕು. ಈ ಜಮೀನಿನ ಕಂದಾಯ ದಾಖಲೆಗಳಲ್ಲಿ ರಂಗಮ್ಮ ಅವರ ಹೆಸರನ್ನು ನಮೂದಿಸಬೇಕು ಎಂದು ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್ ಒತ್ತಾಯಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಟ್ರಸ್ಟಿ ಅಶೋಕ ಎಚ್.ಎನ್., 'ಸಜ್ಜೆಪಾಳ್ಯದ ಗ್ರಾಮದಲ್ಲಿರುವ 45 ಎಕರೆ 33 ಗುಂಟೆ ಜಮೀನಿನ ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯಗಳು ನ್ಯಾಯಾಲಯಗಳಲ್ಲಿ ಬಾಕಿ ಇವೆ. ರಾಜ್ಯ ಸರ್ಕಾರದ ನಿರ್ದೇಶನದಂತೆ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ಈ ಕುರಿತು ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ' ಎಂದು ತಿಳಿಸಿದರು.

'ಜಮೀನಿನ ಕಂದಾಯ ದಾಖಲೆಗಳಲ್ಲಿ ರಂಗಮ್ಮ ಅವರ ಹೆಸರನ್ನು ರದ್ದುಪಡಿಸಿ ಬಿ.ಎಂ. ಪುಟ್ಟಸ್ವಾಮಿ ಅವರ ವಾರಸುದಾರರ ಹೆಸರಿಗೆ ಖಾತೆ ಬದಲಾವಣೆ ಮಾಡಿದ ನೌಕರರ ವಿರುದ್ಧ ಸರ್ಕಾರ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ' ಎಂದು ಹೇಳಿದರು.

ಈ ಜಮೀನಿನ ಭೂ ಪರಿವರ್ತನೆಗಾಗಿ, ಬಡಾವಣೆ ನಕ್ಷೆ ಅನುಮೋದನೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಶುಲ್ಕ ಪಾವತಿಸಿದ್ದಾರೆ. ಇದಕ್ಕೆ ಬಿಡಿಎ ಮತ್ತು ಕಂದಾಯ ಇಲಾಖೆಯವರು ಅವಕಾಶ ನೀಡದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರನ್ನು ಒತ್ತಾಯಿಸಿದ್ದಾರೆ.

'ಮಿಕ್ಕ ಬಣ್ಣದ ಹಕ್ಕಿ' ಅತ್ಯುತ್ತಮ ಕನ್ನಡ ಚಿತ್ರ • 'ಪಿದಾಯಿ', 'ದಸ್ಕತ್' ಸಿನಿಮಾಗಳಿಗೂ ಪ್ರಶಸ್ತಿ

# ಚಿತ್ರೋತ್ಸವ: ಪ್ರಾಬಲ್ಯ ಮೆರೆದ ತುಳು ಚಿತ್ರಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದ ಕನ್ನಡ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಈ ಬಾರಿ ತುಳು ಭಾಷೆಯ ಚಿತ್ರಗಳು ಪ್ರಾಬಲ್ಯ ಮೆರೆದವು. ಒಟ್ಟು ಮೂರು ಪ್ರಶಸ್ತಿಗಳ ಪೈಕಿ ಎರಡು ಪ್ರಶಸ್ತಿಗಳನ್ನು ತುಳು ಚಿತ್ರಗಳೇ ಬಾಚಿಕೊಂಡವು.

ಮನೋಹರ ಕೆ. ನಿರ್ದೇಶನದ, ಪೃಥ್ವಿ ಕೊಣನೂರು ನಿರ್ಮಿಸಿದ 'ಮಿಕ್ಕ ಬಣ್ಣದ ಹಕ್ಕಿ' ಸಿನಿಮಾ ಕನ್ನಡ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆಯಿತು.

ತುಳು ಚಿತ್ರಗಳಾದ ಸಂತೋಷ್ ಮಾಡ ನಿರ್ದೇಶನದ, ಸುರೇಶ್ ಕೆ. ನಿರ್ಮಾಣದ 'ಪಿದಾಯಿ' ಹಾಗೂ ಅನೀಶ್ ಪೂಜಾರಿ ನಿರ್ದೇಶನದ, ರಾಘವೇಂದ್ರ ಕೆ. ನಿರ್ಮಾಣದ 'ದಸ್ಕತ್' ಸಿನಿಮಾಗಳು ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದವು. ವಿಜೇತ ಸಿನಿಮಾಗಳಿಗೆ ಕ್ರಮವಾಗಿ ₹10, ₹5 ಹಾಗೂ ₹2 ಲಕ್ಷ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಲಾಯಿತು. ಕೃಷ್ಣೇಗೌಡ ಅವರು ನಿರ್ದೇಶಿಸಿದ 'ಲಚ್ಚಿ' ನೆಟ್‌ಪ್ಯಾಕ್ ಜ್ಯೂರಿ ಪ್ರಶಸ್ತಿಗೆ ಭಾಜನವಾಯಿತು.

ಕನ್ನಡ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಒಟ್ಟು ಹದಿನಾಲ್ಕು ಸಿನಿಮಾಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದವು. ಎರಡು ತುಳು ಸಿನಿಮಾಗಳು ಪ್ರಶಸ್ತಿ ಪಡೆದಿರುವುದು ಇದೇ ಮೊದಲು ಎನ್ನುತ್ತಾರೆ ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್.ವಿದ್ಯಾಶಂಕರ್.

ವಾರ್ತಾ ಇಲಾಖೆಯ ಸುಲೋಚನಾ ಸಭಾಂಗಣದಲ್ಲಿ ಶನಿವಾರ ನಡೆದ ಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್, ನಟಿ ಅರುಂಧತಿ ನಾಗ್, ನಟ, ಚಿತ್ರೋತ್ಸವದ ರಾಯಭಾರಿ, ನಟ ಕಿಶೋರ್ ಕುಮಾರ್ ಜಿ. ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

ಭಾರತೀಯ ಚಿತ್ರಗಳನ್ನು ಪ್ರತಿನಿಧಿಸುವ 'ಚಿತ್ರಭಾರತಿ' ಸ್ಪರ್ಧಾ ವಿಭಾಗದಲ್ಲಿ ಅರಣ್ಯ ಸಹಾಯ್ ನಿರ್ದೇಶನದ 'ಹ್ಯೂಮನ್ಸ್ ಇನ್ ದಿ ಲೂಪ್' ಹಿಂದಿ ಸಿನಿಮಾ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆಯಿತು. ಅರ್ಫಾಜ್ ಅಯುಬ್ ನಿರ್ದೇಶನದ ಮಲಯಾಳ ಸಿನಿಮಾ 'ಲೆವೆಲ್ ಕ್ರಾಸ್' ದ್ವಿತೀಯ ಹಾಗೂ ಅಭಿಲಾಷ್ ಶರ್ಮಾ ನಿರ್ದೇಶನದ ಮಗಹೀ ಭಾಷೆಯ ಸಿನಿಮಾ 'ಸ್ವಾಹ' ತೃತೀಯ ಅತ್ಯುತ್ತಮ ಚಿತ್ರ ಬಹುಮಾನ ಪಡೆಯಿತು. 'ಏಷಿಯನ್ ಸಿನಿಮಾ' ಸ್ಪರ್ಧಾ ವಿಭಾಗದಲ್ಲಿ ರಾಹಾ ಆಮೀರ್‌ಫಾಝ್ಲಿ ಹಾಗೂ ಅಲಿರೆಝಾ ಘಸೆಮಿ ನಿರ್ದೇಶನದ 'ಇನ್ ದಿ ಲ್ಯಾಂಡ್ ಆಫ್ ಬ್ರದರ್ಸ್' ಸಿನಿಮಾ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆಯಿತು. ಎರಾನ್ ರಿಕ್ಲಿಸ್ ನಿರ್ದೇಶನದ 'ರೀಡಿಂಗ್ ಲೊಲಿಟ ಇನ್ ಟೆಹ್ರಾನ್' ಚಿತ್ರ ಹಾಗೂ ಮಕ್‌ಸುದ್ ಹುಸ್ಸೈನ್ ನಿರ್ದೇಶನದ 'ಸಭಾ' ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದವು.

'ಈ ವರ್ಷದ ಚಿತ್ರೋತ್ಸವದಲ್ಲಿ ಶೇ 30 ರಿಂದ 40 ವೀಕ್ಷಕರು ಹೆಚ್ಚು ಭಾಗವಹಿಸಿದ್ದಾರೆ. ನೇರವಾಗಿ ಹೇಳುವುದು ನಮ್ಮ ಒಳ್ಳೆಯದಕ್ಕೆ. ಮುಂದೆ ಹೊಗಳಿ, ಹಿಂದೆ ತೆಗಳುವುದು ಅಪಾಯಕಾರಿ. ಇದನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು' ಎಂದರು ಸಾಧುಕೋಕಿಲ.

**ಸಿದ್ದರಾಮಯ್ಯನಂಥ ನಾಯಕರು ಅವಶ್ಯಕ:** 'ರಾಜ್‌ಕುಮಾರ್ ಅವರ ಹೆಸರು ಕೇವಲ ಚಪ್ಪಾಳೆಗಷ್ಟೇ ಸೀಮಿತವಾಗುತ್ತಿದೆ. ಅವರ ಆದರ್ಶಗಳನ್ನು ನೋಡಬೇಕಿದೆ. 'ಬೇಡರ ಕಣ್ಣಪ್ಪ' ದೇವರಿಗೆ ತನ್ನ ಆಹಾರವಾದ ಮಾಂಸ ಕೊಟ್ಟವನು. ಭಕ್ತಿಯನ್ನು ಹೇಳುತ್ತಲೇ ಧರ್ಮದ ಸರಿ ತಪ್ಪುಗಳನ್ನು ಕಣ್ಣಪ್ಪ ಒರೆಗೆ ಹಚ್ಚಿ, ಕಟ್ಟಾ ಸಂಪ್ರದಾಯಸ್ಥರು ಸ್ವಇಚ್ಛೆಯಿಂದ ಇವನು ಸರಿ ಅನ್ನುವ ರೀತಿ ಸಮಾನತೆಗೆ ಮುಖ ಮಾಡಲು ದೂಡಿದ ನಾಯಕ ಕಣ್ಣಪ್ಪ. 'ಮಾಂಸ ತಿಂದು ನಾನು ದೇವಸ್ಥಾನಕ್ಕೆ ಹೋಗುತ್ತೇನೆ. ಏನು ತಪ್ಪು? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಟ್ಟಿತನದ ಹೇಳಿಕೆ ನೀಡಿದ್ದರು. ಸತ್ಯವನ್ನು ಧೈರ್ಯವಾಗಿ ಹೇಳುವುದಕ್ಕೆ, ನಮ್ಮ ಮೂಢನಂಬಿಕೆಗಳನ್ನು ಒರೆಗೆ ಹಚ್ಚಿ ತಿದ್ದುವುದಕ್ಕೆ ಈ ಥರದ ನಾಯಕರು ತುಂಬಾ ಅವಶ್ಯಕ' ಎಂದು ನಟ ಕಿಶೋರ್ ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಬಿ.ಬಿ.ಕಾವೇರಿ, ಇಲಾಖೆಯ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್, ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್.ವಿದ್ಯಾಶಂಕರ್ ಉಪಸ್ಥಿತರಿದ್ದರು.

ಮನೋಹರ ಕೆ. ನಿರ್ದೇಶನದ, ಪೃಥ್ವಿ ಕೊಣನೂರು ನಿರ್ಮಾಣದ 'ಮಿಕ್ಕ ಬಣ್ಣದ ಹಕ್ಕಿ' ಸಿನಿಮಾ ಪ್ರಥಮ ಬಹುಮಾನ ಪಡೆಯಿತು. ನಟ ಕಿಶೋರ್ ಕುಮಾರ್ ಜಿ., ನಟಿ ಅರುಂಧತಿ ನಾಗ್ ಹಾಗೂ ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರಶಸ್ತಿ ಪತ್ರ ವಿತರಿಸಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಬಿ.ಬಿ.ಕಾವೇರಿ ಇದ್ದರು –ಪ್ರಜಾವಾಣಿ ಚಿತ್ರ

**ಸಣ್ಣ ಬಜೆಟ್ ಸಿನಿಮಾಗಳಿಗೆ ಸೂಕ್ತ ರೀತಿಯಲ್ಲಿ ಚಿತ್ರಮಂದಿರಗಳು ದೊರೆಯಬೇಕಿದೆ. ಆಯಾ ಮಾತೃಭಾಷೆಯಲ್ಲಿ ನಿರ್ಮಾಣವಾಗುವ ಸಿನಿಮಾಗಳಿಗೂ ಅದಕ್ಕೇ ಆದ ವೇದಿಕೆ ಹಾಗೂ ಸ್ಫೂರ್ತಿ ತುಂಬುವ ಕೆಲಸವನ್ನು ಸರ್ಕಾರಗಳು ಮಾಡಬೇಕು**

**ಸಂತೋಷ್ ಲಾಡ್,** ಕಾರ್ಮಿಕ ಸಚಿವ

**ಕನ್ನಡ ಚಿತ್ರರಂಗದ ಖ್ಯಾತ ಕಲಾವಿದರು, ತಂತ್ರಜ್ಞರ ಇತಿಹಾಸ ಕೃತಿಗಳ ಮೂಲಕ ಶಾಶ್ವತವಾಗಬೇಕು. ಅವರ ಬಗ್ಗೆ ಪಠ್ಯ, ಡಿಜಿಟಲ್ ಗ್ರಂಥಾಲಯ ಆಗಬೇಕು. ಸ್ಮಾರಕ ನಿರ್ಮಾಣ, ರಸ್ತೆಗೆ ಹೆಸರಿಟ್ಟರೆ ಅವು ಸ್ಥಾವರವಾಗುತ್ತದೆ. ಆದರೆ ಜಂಗಮಕ್ಕಳಿವಿಲ್ಲ**

**ಕಿಶೋರ್,** ನಟ

### ಶಬಾನಾ ಆಜ್ಮಿಗೆ ಜೀವಮಾನ ಸಾಧನೆ ಪ್ರಶಸ್ತಿ

ಬಹುಭಾಷಾ ನಟಿ ಶಬಾನಾ ಆಜ್ಮಿ ಅವರು ಈ ವರ್ಷದ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾದರು. ಅವರ ಪರವಾಗಿ ನಟಿ ಅರುಂಧತಿ ನಾಗ್ ಪ್ರಶಸ್ತಿ ಸ್ವೀಕರಿಸಿದರು. 70ರ ದಶಕದಲ್ಲಿ 'ಕನ್ನೇಶ್ವರ ರಾಮ' ಚಿತ್ರದ ಮೂಲಕ ಚಂದನವನಕ್ಕೆ ಪದಾರ್ಪಣೆ ಮಾಡಿದ್ದ ಶಬಾನಾ ಅವರು ದಕ್ಷಿಣ ಭಾರತದ ಚಿತ್ರಗಳು ಹಾಗೂ ಹಿಂದಿ ಭಾಷೆಯ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಸುಮಾರು 50 ವರ್ಷಗಳ ಅವರ ಕಲಾಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

### ಪೃಥ್ವಿ ಕೊಣನೂರು ಸ್ಫೂರ್ತಿ

ಪೃಥ್ವಿ ಕೊಣನೂರು ಅವರ 'ರೈಲ್ವೆ ಚಿಲ್ಡ್ರನ್'ನಿಂದ ನನ್ನ ಸಿನಿಪಯಣ ಆರಂಭವಾಯಿತು. ನಟನಿಂದ ನಿರ್ದೇಶಕನಾದೆ. 'ಹದಿನೇಳೆಂಟು' ಚಿತ್ರದಲ್ಲಿ ಸಹಾಯಕ ನಿರ್ದೇಶಕನಾಗಿದ್ದೆ. ಅವರು ನನಗೆ ಸ್ಫೂರ್ತಿ. ಹಲವು ಅಂತರ-ರಾಷ್ಟ್ರೀಯ ಚಿತ್ರೋತ್ಸವಗಳಿಗೆ ಸಿನಿಮಾಗಳು ಹೋದರೂ ಇಲ್ಲಿ ಬಂದ ಪ್ರಶಸ್ತಿ ಎಲ್ಲವುದಕ್ಕಿಂತ ಮಿಗಿಲು. ನನ್ನ ಈ ಸಿನಿಮಾ ರಾಜ್ಯದ ಎಲ್ಲಾ ಶಾಲಾ ಮಕ್ಕಳನ್ನು ತಲುಪಬೇಕು. ನಾನು ಆರ್.ಸಿ. ಕಾಲೇಜಿನಲ್ಲಿ ಎಂ.ಕಾಂ ಓದುತ್ತಿದ್ದೇನೆ, ಮುಂದೆ ಸಿನಿಮಾ ಬರವಣಿಗೆ ಹಾಗೂ ನಟನೆ ಮುಂದುವರಿಸಲಿದ್ದೇನೆ.

**ಮನೋಹರ ಕೆ.,** 'ಮಿಕ್ಕಬಣ್ಣದ ಹಕ್ಕಿ' ನಿರ್ದೇಶಕ

### ತುಳು ಸಿನಿಮಾಗಳಿಗೆ ಸ್ಫೂರ್ತಿ

ತುಳು ಚಿತ್ರರಂಗಕ್ಕೆ 50 ವರ್ಷ ತುಂಬಿದೆ. ಇಷ್ಟು ವರ್ಷಗಳಲ್ಲಿ ತುಳು ಚಿತ್ರರಂಗದ ಅದ್ಭುತ ಸಾಧನೆ ಇದು. ಬೆಂಗಳೂರು ಚಿತ್ರೋತ್ಸವವು ನಮಗೆ ಬೆಂಬಲವಾಗಿ ನಿಂತಿದೆ. ಮಹಿಳಾ ಸಬಲೀಕರಣದ ಕುರಿತ ನಮ್ಮ ಸಿನಿಮಾಗೆ ಮಹಿಳಾ ದಿನಾಚರಣೆ ಸಂದರ್ಭದಲ್ಲೇ ಪ್ರಶಸ್ತಿ ಬಂದಿದೆ. ಮತ್ತಷ್ಟು ಒಳ್ಳೆಯ ವಿಷಯಗಳಿರುವ ತುಳು ಸಿನಿಮಾಗಳು ಬರಲು ಈ ಪ್ರಶಸ್ತಿ ಸಹಾಯವಾಗಲಿದೆ.

**ಸಂತೋಷ್ ಮಾಡ,** 'ಪಿದಾಯಿ' ನಿರ್ದೇಶಕ

### ಸಿನಿಮಾಗೆ ಭಾಷೆಯ ಗಡಿ ಇಲ್ಲ

ನಾವು ಪ್ರಶಸ್ತಿಯನ್ನು ನಿರೀಕ್ಷಿಸಿದ್ದೆವು. ಆರು ವರ್ಷದ ಸಿನಿಪಯಣದಲ್ಲಿ ಇದು ನಮ್ಮ ಮೊದಲ ತುಳು ಸಿನಿಮಾ. ಚಿತ್ರೋತ್ಸವದಲ್ಲಿ ಸಿನಿಮಾ ಹೌಸ್‌ಫುಲ್ ಪ್ರದರ್ಶನ ಕಂಡಿತ್ತು. ಸಿನಿಮಾಗೆ ಭಾಷೆಯ ಗಡಿ ಇಲ್ಲ. ಜನರು ಅದನ್ನು ಭಾವನಾತ್ಮಕವಾಗಿ ನೋಡುತ್ತಾರೆ ಎನ್ನುವುದಕ್ಕೆ ತುಳು ಸಿನಿಮಾಗಳಿಗೆ ಸಿಕ್ಕಿರುವ ಪ್ರಶಸ್ತಿಯೇ ಸಾಕ್ಷಿ.

**ಅನೀಶ್ ಪೂಜಾರಿ,** 'ದಸ್ಕತ್' ನಿರ್ದೇಶಕ

ಬಾರ್‌ನಲ್ಲಿ ನಡೆದಿದ್ದ ಕೃತ್ಯ: ಸೋಲದೇವನಹಳ್ಳಿ ಠಾಣೆ ಪೊಲೀಸರ ಕಾರ್ಯಾಚರಣೆ

# ರೌಡಿಶೀಟರ್ ಕೊಲೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೆಸರಘಟ್ಟ ಮುಖ್ಯರಸ್ತೆಯ ಕೊಡಗಿ ತಿರುಮಲಪುರದ ಬಾರ್‌ನಲ್ಲಿ ನಡೆದಿದ್ದ ರೌಡಿಶೀಟರ್ ಜಯರಾಮ್(40) ಕೊಲೆ ಪ್ರಕರಣದ ಸಂಬಂಧ ನಾಲ್ವರು ಆರೋಪಿಗಳನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಲಹಂಕದ ಮುನಿರಾಜು, ರಾಜೇಶ್ ಅಲಿಯಾಸ್ ಬಬ್ಲಿ, ಯತೀಶ್ ಗೌಡ ಹಾಗೂ ವಿನಯ್ ಬಂಧಿತರು. ಮಾರ್ಚ್ 4ರಂದು ರಾತ್ರಿ ಸುಮಾರು 8.30ರ ಸುಮಾರಿಗೆ ಬಾರ್‌ನಲ್ಲಿ ಮದ್ಯ ಸೇವಿಸುತ್ತಿದ್ದ ಜಯರಾಮ್‌ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು.

ಈ ಸಂಬಂಧ ಜಯರಾಮ್ ಕುಟುಂಬಸ್ಥರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆರೋಪಿಗಳ ಬಂಧನಕ್ಕೆ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು. ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಮೊಬೈಲ್ ಲೊಕೇಷನ್ ಆಧರಿಸಿ ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಯಲಹಂಕ ನ್ಯೂ ಟೌನ್ ಪೊಲೀಸ್ ಠಾಣೆಯ ರೌಡಿ ಶೀಟರ್ ಆಗಿದ್ದ ಜಯರಾಮ್, 2018ನೇ ಸಾಲಿನಲ್ಲಿ ನಡೆದಿದ್ದ ಯಲಹಂಕದ ಕಿರಣ್ ಎಂಬಾತನ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದ್ದ. ನಂತರ, ಜಾಮೀನು ಪಡೆದು ಜೈಲಿನಿಂದ ಬಿಡುಗಡೆ ಆಗಿದ್ದ. ಚಿಕ್ಕಬೊಮ್ಮಸಂದ್ರದಲ್ಲಿ ಕೋಳಿ ಅಂಗಡಿ ಇಟ್ಟುಕೊಂಡಿದ್ದ ಎಂದು ಮೂಲಗಳು ತಿಳಿಸಿವೆ.

'ಫೆಬ್ರುವರಿಯಲ್ಲಿ ಮುನಿರಾಜ್ ಹಾಗೂ ಜಯರಾಮ್ ಮಧ್ಯೆ ಗಲಾಟೆ ನಡೆದಿತ್ತು. ಇಬ್ಬರ ಮಧ್ಯೆ ದ್ವೇಷ ಮೂಡಿತ್ತು. ಜಯರಾಮ್ ಮೇಲೆ ಸೇಡು ತೀರಿಸಿಕೊಳ್ಳಲು ಮುನಿರಾಜ್ ಕಡೆಯವರು ಕೊಲೆಗೆ ಸಂಚು ರೂಪಿಸಿದ್ದರು. ಮಾರ್ಚ್ 4ರಂದು ಬಾರ್‌ನಲ್ಲಿ ಮದ್ಯ ಸೇವಿಸುತ್ತಾ ಕುಳಿತಿದ್ದ ಮಾಹಿತಿ ತಿಳಿದು ಸ್ಥಳಕ್ಕೆ ಬಂದು ಕೊಲೆ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

## ಬ್ಯಾಂಕ್ ಉದ್ಯೋಗಿ ಆತ್ಮಹತ್ಯೆ

**ಬೆಂಗಳೂರು:** ಖಾಸಗಿ ಬ್ಯಾಂಕ್‌ವೊಂದರ ಉದ್ಯೋಗಿ, ತಲಘಟ್ಟಪುರದ ನಿವಾಸಿ ವಿವೇಕ್ ಸಮದರ್ಶಿ (35) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈ ಸಂಬಂಧ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಾರ್ಚ್ 6ರ ರಾತ್ರಿ ತಲಘಟ್ಟಪುರದ ತಮ್ಮ ಫ್ಲ್ಯಾಟ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಘಟನೆಗೆ ಕಾರಣ ತಿಳಿದು ಬಂದಿಲ್ಲ. ಅವರ ಪತ್ನಿ ಮೋನಿಷಾ ಅವರು ದೂರು ನೀಡಿದ್ದು ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

'ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ನೀಡುತ್ತಿದ್ದ ಕಿರುಕುಳದಿಂದ ವಿವೇಕ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದಾಗಿ ಕುಟುಂಬಸ್ಥರು ಆರೋಪಿಸಿ ದೂರು ನೀಡಿದ್ದಾರೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಬಿಹಾರದ ವಿವೇಕ್ ಸಮದರ್ಶಿ ಐದು ವರ್ಷಗಳಿಂದ ಕೋರಮಂಗಲದಲ್ಲಿರುವ ಖಾಸಗಿ ಬ್ಯಾಂಕ್‌ನ ಸಾಲ ವಿತರಣಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಗುರುವಾರ ಸಂಜೆ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದ ಅವರು, ಕೊಠಡಿಗೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಕೆಲ ಕ್ಷಣಗಳ ಮೊದಲು ಮಲಗುವ ಕೋಣೆಯ ಪಕ್ಕದಲ್ಲಿರುವ ಕೋಣೆಯಲ್ಲಿ ಕುಳಿತಿದ್ದ ಪತ್ನಿಗೆ ವಿಡಿಯೊ ಕರೆ ಮಾಡಿದ್ದರು. 'ಗುಡ್ ಬೈ... ಮತ್ತೆ ಯಾವತ್ತೂ ಸಿಗುವುದಿಲ್ಲ' ಎಂದು ಹೇಳಿದ್ದರು. ಇದರಿಂದ ಗಾಬರಿಗೊಂಡ ಪತ್ನಿ, ಪತಿಯ ಸ್ನೇಹಿತರು ಹಾಗೂ ಸ್ಥಳೀಯರಿಗೆ ವಿಷಯ ತಿಳಿಸಿದ್ದರು. ಅವರು ಬಂದಾಗ ವಿವೇಕ್ ನೇಣು ಹಾಕಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

**ಅಪರಾಧ ಸುದ್ದಿ**

## ಬೈಕ್‌ನಲ್ಲಿ ತೆರಳುವಾಗ ಅಸಭ್ಯ ವರ್ತನೆ: ದಂಡ ವಸೂಲಿ

**ಬೆಂಗಳೂರು:** ಬೈಕ್‌ನಲ್ಲಿ ತೆರಳುವಾಗ ಅಸಭ್ಯವಾಗಿ ವರ್ತಿಸಿದ್ದವರನ್ನು ನಗರ ಸಂಚಾರ ಪೊಲೀಸರು ಪತ್ತೆಹಚ್ಚಿ ದಂಡ ವಸೂಲಿ ಮಾಡಿದ್ದಾರೆ.

ಸಂಚಾರ ನಿಯಮ ಉಲ್ಲಂಘಿಸಿ ಮೂವರು ಬೈಕ್ ಸಂಚಾರ ಮಾಡಿದ್ದಲ್ಲದೇ ಸಾರ್ವಜನಿಕವಾಗಿ ಅಸಭ್ಯವಾಗಿ ವರ್ತಿಸಿದ್ದ ದ್ವಿಚಕ್ರ ವಾಹನ ಸವಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಮಾಧ್ಯಮದಲ್ಲಿ ಸಾರ್ವಜನಿಕರು ಆಗ್ರಹಿಸಿದ್ದರು.

ದ್ವಿಚಕ್ರ ವಾಹನದಲ್ಲಿ ಇಬ್ಬರು ಯುವಕರು ಹಾಗೂ ಯುವತಿ ರಾಗಿಗುಡ್ಡ ಬಸ್ ನಿಲ್ದಾಣದ ಕಡೆಯಿಂದ ಮೆಟ್ರೊ ನಿಲ್ದಾಣದ ಕಡೆಗೆ ಹೊರಟಿದ್ದರು. ಈ ವೇಳೆ ಯುವಕ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ. ಆತನ ಹಿಂದೆ ಯುವಕ ಮತ್ತು ಯುವತಿ ಕುಳಿತಿದ್ದರು. ದ್ವಿಚಕ್ರ ವಾಹನ ಚಾಲನೆಯಲ್ಲಿ ಇರುವಾಗಲೇ ಮಧ್ಯದಲ್ಲಿ ಕುಳಿತಿದ್ದ ಯುವಕ ಮತ್ತು ಯುವತಿ ಪರಸ್ಪರ ಚುಂಬಿಸಿಕೊಂಡು ಅಸಭ್ಯವಾಗಿ ವರ್ತಿಸಿದ್ದರು. ಈ ದೃಶ್ಯವನ್ನು ದ್ವಿಚಕ್ರ ವಾಹನ ಸವಾರರೊಬ್ಬರು, ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಮಾಧ್ಯಮ ದಲ್ಲಿ ಹಾಕಿದ್ದರು. ಅದನ್ನು ಆಧರಿಸಿ ಪೊಲೀಸರು ಕಾರ್ಯಾಚರಣೆ ನಡೆಸಿ ದಂಡ ವಿಧಿಸಿದ್ದಾರೆ. ರಾಗಿಗುಡ್ಡ ಮೆಟ್ರೊ ನಿಲ್ದಾಣದ ಬಳಿ ಫೆ.7ರ ರಾತ್ರಿ ಈ ಘಟನೆ ನಡೆದಿತ್ತು.

## ಅಪಘಾತ: ಟೈಲರ್ ಸಾವು

**ಬೆಂಗಳೂರು:** ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಖಾಸಗಿ ಬಸ್ ಹಾಗೂ ಸ್ಕೂಟರ್ ಮಧ್ಯೆ ಡಿಕ್ಕಿ ಸಂಭವಿಸಿ ಟೈಲರ್ ಮೃತಪಟ್ಟಿದ್ದಾರೆ. ಬೊಮ್ಮನಹಳ್ಳಿ ನಿವಾಸಿ ಶಂಕರ್ (45) ಮೃತಪಟ್ಟವರು.

'ಶನಿವಾರ ರಾತ್ರಿ 8ರ ಸುಮಾರಿಗೆ ಶಂಕರ್ ಅವರು ಕನಕಪುರ ರಸ್ತೆಯ ಶ್ರೀನಿವಾಸ್ ಮೆಡಿಕಲ್ ಸ್ಟೋರ್ ಎದುರು ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಹಿಂದಿನಿಂದ ಖಾಸಗಿ ಬಸ್, ಸ್ಕೂಟರ್‌ಗೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಸ್ಕೂಟರ್‌ನಿಂದ ಕೆಳಕ್ಕೆ ಬಿದ್ದಿದ್ದ ಅವರು, ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಖಾಸಗಿ ಬಸ್ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವಾಗಿದೆ. ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಹೆಬ್ಬಾಳದ ಪಶುವೈದ್ಯಕೀಯ ಕಾಲೇಜಿನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಡಾ.ರಾಘವೇಂದ್ರ ಭಟ್ಟ ಮಾತನಾಡಿದರು. ಪಶುಸಂಗೋಪನಾಸಚಿವ ಸಚಿವ ಕೆ. ವೆಂಕಟೇಶ್ ಉಪಸ್ಥಿತರಿದ್ದರು

## ಪಶುವೈದ್ಯಕೀಯ ಕಾಲೇಜು ಮೇಲ್ದರ್ಜೆಗೇರಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದಲ್ಲಿರುವ ಪಶುವೈದ್ಯಕೀಯ ಕಾಲೇಜುಗಳನ್ನು ಮೇಲ್ದರ್ಜೆಗೇರಿಸಲು ₹25 ಕೋಟಿ ಅನುದಾನ ನೀಡುವಂತೆ ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ(ಐಸಿಎಆರ್) ಉಪ ಮಹಾನಿರ್ದೇಶಕ (ಪ್ರಾಣಿ ವಿಜ್ಞಾನ) ಡಾ.ರಾಘವೇಂದ್ರ ಭಟ್ಟ ಒತ್ತಾಯಿಸಿದರು.

ಜಾನುವಾರು, ಕೋಳಿ ಮತ್ತು ಸಾಕುಪ್ರಾಣಿಗಳ ಆರೋಗ್ಯ, ಪೋಷಣೆ ಹಾಗೂ ಸೂಕ್ತ ಉತ್ಪಾದನೆಗೆ ಇರುವ ಸವಾಲುಗಳು ಮತ್ತು ಆದ್ಯತೆಗಳು ಕುರಿತ ರಾಷ್ಟ್ರೀಯ ವೈಜ್ಞಾನಿಕ ಸಮಾವೇಶ ಮತ್ತು 22ನೇ ರಾಷ್ಟ್ರೀಯ ಪಶು ವೈದ್ಯಕೀಯ ವಿಜ್ಞಾನ ವಿದ್ವನ್ಮಂಡಲಿ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕರ್ನಾಟಕದಲ್ಲಿ ಖಾಸಗಿ ಪಶುವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಅವಕಾಶ ನೀಡಬಾರದು. ಪಶುವೈದ್ಯಕೀಯ ವೃತ್ತಿಯ ಗುಣಮಟ್ಟ ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

ಬೀದರ್ ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಕೆ.ಸಿ. ವೀರಣ್ಣ ಮಾತನಾಡಿ, 'ಈ ಸಮಾವೇಶವು ಮೇವಿನ ಕೊರತೆ, ಜಾನುವಾರುಗಳಲ್ಲಿ ರೋಗ ಹರಡುವಿಕೆಯನ್ನು ತಡೆಗಟ್ಟುವ ಕುರಿತು ಚರ್ಚಿಸಲು ಉತ್ತಮ ವೇದಿಕೆಯಾಗಿದೆ. ಪ್ರಸ್ತುತ ಪಶುವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಮಾನವ ಸಂಪನ್ಮೂಲದ ಕೊರತೆ ಇದೆ. ಮೂರು ತಿಂಗಳೊಳಗೆ ನೇಮಕಾತಿ ಮಾಡಬೇಕು' ಎಂದು ಒತ್ತಾಯಿಸಿದರು.

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರು ಪಶುವೈದ್ಯಕೀಯ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಪರಿಗಣಿಸಿ ಎಸ್.ಕೆ. ರಂಜನ್ ಅವರಿಗೆ ಡಾ.ಸಿ.ಎಂ. ಸಿಂಗ್ ಪ್ರಶಸ್ತಿ ಪ್ರದಾನ ಮಾಡಿದರು.

## 'ಸಮಾನಾಂತರ ಜಲಾಶಯ: ಶೀಘ್ರ ನಾಯ್ಡು ಭೇಟಿ'

ಪ್ರಜಾವಾಣಿ ವಾರ್ತೆ

**ಕಲಬುರಗಿ:** 'ತುಂಗಭದ್ರಾ ನದಿಯ ಸುಮಾರು 25 ಟಿಎಂಸಿ ಅಡಿ ನೀರು ಪ್ರತಿ ವರ್ಷ ಆಂಧ್ರ ಪ್ರದೇಶಕ್ಕೆ ಹರಿದು ಹೋಗುತ್ತಿದೆ. ಹೀಗಾಗಿ ಕೊಪ್ಪಳ ಜಿಲ್ಲೆಯ ನವಲಿ ಸಮಾನಾಂತರ ಜಲಾಶಯ ನಿರ್ಮಾಣ ಕುರಿತು ಚರ್ಚಿಸಲು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರ ಸಮಯ ಕೇಳಿದ್ದೇನೆ' ಎಂದು ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಶನಿವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಾಂತ್ರಿಕ ಸಲಹೆಗಾರರಾಗಿರುವ ನಿವೃತ್ತ ಎಂಜಿನಿಯರ್ ಕನ್ನಯ್ಯ ನಾಯ್ಡು ಅವರೂ ಜಲಾಶಯ ನಿರ್ಮಾಣದ ಬಗ್ಗೆ ಮಾಹಿತಿ ಹಂಚಿಕೊಳ್ಳಲಿದ್ದಾರೆ' ಎಂದರು.

'ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸುವುದರ ಜೊತೆಗೆ ಪ್ರಮುಖ ನೀರಾವರಿ ಯೋಜನೆಗಳಿಗೆ ₹ 22 ಸಾವಿರ ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ' ಎಂದರು.

**ಅನ್ಯಾಯವಿಲ್ಲ:** 'ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ಕೆಕೆಆರ್‌ಡಿಬಿಯಿಂದ ಅನುದಾನ ನೀಡುವುದರ ಜೊತೆಗೆ ವಿವಿಧ ಇಲಾಖೆಯಿಂದಲೂ ಅನುದಾನ ನೀಡಲಾಗಿದೆ. ಪ್ರಸಕ್ತ ವರ್ಷವೂ ಮಂಡಳಿಗೆ ₹5,000 ಕೋಟಿ ಅನುದಾನ ಘೋಷಿಸಲಾಗಿದೆ. ಹಾಗೆ ನೋಡಿದರೆ ನೀವು (ಕಲ್ಯಾಣ ಕರ್ನಾಟಕ) ಮುಂದೆ ಇದ್ದೀರಿ. ನಿಮಗೆ ಹೆಚ್ಚಿನ ಪಾಲು ಕೊಟ್ಟಿದ್ದನ್ನು ನೋಡಿ ನಮ್ಮವರು (ಕನಕಪುರ) ನನ್ನೊಂದಿಗೆ ಜಗಳ ಶುರು ಮಾಡಿದ್ದಾರೆ. ಹೀಗಾಗಿ, ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

## ಪತ್ನಿ, ಮಾವನ ಮೇಲೆ ಹಲ್ಲೆ

**ಬೆಂಗಳೂರು:** ಹಣ ತರುವಂತೆ ಒತ್ತಾಯಿಸಿ ಪತ್ನಿ ಹಾಗೂ ಮಾವನ ಮೇಲೆ ಖಾರದ ಪುಡಿ ಎರಚಿ ಹಲ್ಲೆ ಮಾಡಿದ್ದ ಆರೋಪದ ಅಡಿ ಪತಿ ವಿರುದ್ಧ ಪೀಣ್ಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆಂಧ್ರಪ್ರದೇಶದ ಬ್ಯಾಂಕ್ ನೌಕರ ಪುಲಿ ಸಾಯಿಕುಮಾರ್ ವಿರುದ್ಧ ಪ್ರಕರಣ ದಾಖಲಾಗಿದೆ. ಮಹಿಳೆ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸಹಾಯಕ ಪ್ರಾಧ್ಯಾಪಕಿ ಆಗಿರುವ ರಮ್ಯಶ್ರೀ ಅವರಿಗೆ 2021ರಲ್ಲಿ ಪುಲಿ ಸಾಯಿಕುಮಾರ್ ಅವರ ಪರಿಚಯವಾಗಿತ್ತು. ಬಳಿಕ ಇಬ್ಬರೂ ಮದುವೆ ಆಗಿದ್ದರು. ದಂಪತಿಗೆ ಎರಡು ವರ್ಷದ ಮಗುವಿದೆ. ಠಾಣಾ ವ್ಯಾಪ್ತಿಯ ಬಡಾವಣೆಯಲ್ಲಿ ದಂಪತಿ ನೆಲಸಿದ್ದಾರೆ.

'ತುರ್ತು ಹಣ ಬೇಕಿದ್ದು ತಂದೆಯಿಂದ ಹಣ ಕೊಡಿಸುವಂತೆ ಸಾಯಿಕುಮಾರ್ ಒತ್ತಾಯಿಸಿದ್ದ. ಹಣ ತರಲು ರಮ್ಯಶ್ರೀ ಅವರು ನಿರಾಕರಿಸಿದ್ದರು. ಇದರಿಂದ ದಂಪತಿ ಮಧ್ಯೆ ಗಲಾಟೆ ನಡೆದಿತ್ತು' ಎಂದು ಮೂಲಗಳು ತಿಳಿಸಿವೆ.

'ಹಣ ಕೊಡಿಸದೇ ಇದ್ದರೆ ಕೊಲೆ ಮಾಡಿ ಜೈಲಿಗೆ ಹೋಗುವುದಾಗಿ ಪತಿ ಬೆದರಿಸಿ ಚಾಕು ತೋರಿಸಿದ್ದ. ಮನೆಯಲ್ಲಿದ್ದ ರಮ್ಯಶ್ರೀ ಅವರ ತಂದೆ ಗಲಾಟೆ ಬಿಡಿಸಿ ಸಮಾಧಾನ ಮಾಡಲು ಪ್ರಯತ್ನಿಸಿದ್ದರು. ಆಗ ಸಾಯಿಕುಮಾರ್, ಅಡುಗೆ ಮನೆಯಲ್ಲಿದ್ದ ಖಾರದಪುಡಿ ಎರಚಿ ಹಲ್ಲೆ ಮಾಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ. ಎರಡು ವರ್ಷದಿಂದಲೂ ಹಣಕ್ಕಾಗಿ ಗಲಾಟೆ ಮಾಡಿದ್ದ. ಆಗಲೂ ಒಪ್ಪಿರಲಿಲ್ಲ. ಹಲ್ಲೆ ನಡೆಸಿದ್ದ. ಗಲಾಟೆ ಸಂಬಂಧ 2023ರಲ್ಲಿ ಆರ್.ಆರ್. ನಗರ ಪೊಲೀಸರಿಗೆ ದೂರು ನೀಡಿದ್ದೆ ಎಂಬುದಾಗಿ ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

## ₹30 ಲಕ್ಷ ವಂಚನೆ: ಪಿಡಿಒ ವಿರುದ್ಧ ಎಫ್‌ಐಆರ್

**ತುಮಕೂರು:** ಸಹಾಯಕ ಎಂಜಿನಿಯರ್ ಕೆಲಸ ಕೊಡಿಸುವುದಾಗಿ ನಂಬಿಸಿ ₹30 ಲಕ್ಷ ವಂಚಿಸಿದ ಆರೋಪದ ಮೇರೆಗೆ ಉತ್ತರ ಕನ್ನಡ ಜಿಲ್ಲೆ ಕಿರವತ್ತಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪಿ.ಯೋಗೇಂದ್ರ, ಅವರ ಸ್ನೇಹಿತ ಬೆಂಗಳೂರಿನ ಇಲಿಯಾಜ್ ಅಹ್ಮದ್ ಎಂಬುವರ ವಿರುದ್ಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಎಸ್.ಎಸ್.ಪುರಂ ನಿವಾಸಿ, ಗುತ್ತಿಗೆದಾರ ಎ.ಪಿ.ಸಂಜಯ್‌ಗೌಡ ನೀಡಿದ ದೂರಿನ ಮೇರೆಗೆ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

'2022ರಲ್ಲಿ ಸಂಬಂಧಿ ಚಿಕ್ಕತಿಮ್ಮಯ್ಯ ಮೂಲಕ ಯೋಗೇಂದ್ರ ಪರಿಚಯವಾಯಿತು. ಸಹಾಯಕ ಎಂಜಿನಿಯರ್ ಹುದ್ದೆಗೆ ಕಲಬುರಗಿಯಲ್ಲಿ ಲಿಖಿತ ಪರೀಕ್ಷೆ ಬರೆದಿದ್ದೆ. ಈ ಬಗ್ಗೆ ತಿಳಿದಿದ್ದ ಯೋಗೇಂದ್ರ, ನನಗೆ ದೊಡ್ಡ ಅಧಿಕಾರಿಗಳ ಪರಿಚಯವಿದೆ. ₹30 ಲಕ್ಷ ಕೊಟ್ಟರೆ ಎಂಜಿನಿಯರ್ ಕೆಲಸ ಕೊಡಿಸುತ್ತೇನೆ. ನಾನು ಸರ್ಕಾರಿ ಕೆಲಸದಲ್ಲಿದ್ದು, ನನ್ನ ಸ್ನೇಹಿತ ಇಲಿಯಾಜ್‌ಗೆ ಹಣ ವರ್ಗಾವಣೆ ಮಾಡುವಂತೆ ಎರಡು ಬ್ಯಾಂಕ್ ಖಾತೆಯ ವಿವರ ನೀಡಿದ್ದರು. ಅದರಂತೆ ಹಣ ವರ್ಗಾಯಿಸಿದೆ' ಎಂದು ಸಂಜಯ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಇದಕ್ಕೆ ಸಾಕ್ಷಿಯಾಗಿ ಇಲಿಯಾಜ್ 2 ಚೆಕ್‌ಗಳನ್ನು ಚಿಕ್ಕತಿಮ್ಮಯ್ಯ ಮುಖಾಂತರ ನನಗೆ ತಲುಪಿಸಿದ್ದರು. ಸಹಾಯಕ ಎಂಜಿನಿಯರ್ ಪರೀಕ್ಷೆಯ ಆಯ್ಕೆಪಟ್ಟಿಯಲ್ಲಿ ನನ್ನ ಹೆಸರು ಇರಲಿಲ್ಲ. ಯೋಗೇಂದ್ರ ಅವರನ್ನು ವಿಚಾರಿಸಿದಾಗ ಮೇಲಧಿಕಾರಿಗಳ ಎಡವಟ್ಟಿನಿಂದ ಕೆಲಸ ಆಗಿಲ್ಲ. 3 ತಿಂಗಳಲ್ಲಿ ನಿಮ್ಮ ಹಣ ವಾಪಸ್ ಕೊಡಿಸುವುದಾಗಿ ಭರವಸೆ ನೀಡಿದ್ದರು. ಈವರೆಗೂ ಹಣ ವಾಪಸ್ ಕೊಟ್ಟಿಲ್ಲ. ಈ ಇಬ್ಬರು ಇದೇ ರೀತಿಯಲ್ಲಿ ಬೇರೆಯವರಿಗೆ ವಂಚಿಸಿರುವುದು ತಿಳಿದು ಬಂದಿದೆ ಎಂದು ಆರೋಪಿಸಿದ್ದಾರೆ.

## ನಗರದಲ್ಲಿ ಇಂದು

**ಗ್ಲಾಕೋಮಾ ಜಾಗೃತಿಗಾಗಿ ಸೈಟ್ ಸೇವರ್ ರನ್:** ಚಾಲನೆ: ಅರ್ಜುನ್ ದೇವಯ್ಯ, ಆಯೋಜನೆ: ನಾರಾಯಣ ನೇತ್ರಾಲಯ, ಸ್ಥಳ: ಜಾರಕಬಂಡೆ ಅರಣ್ಯ, ರಾಮಗೊಂಡನಹಳ್ಳಿ, ಬೆಳಿಗ್ಗೆ 6.30

**ವಧು-ವರರ ಸಮಾವೇಶ, ವಾರ್ಷಿಕೋತ್ಸವ:** ಆಯೋಜನೆ: ಶ್ರೀನಿವಾಸ ಬಲಿಜ ಸಂಘ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9

**ಸೌಜನ್ಯ ಕೊಲೆ ವಿರುದ್ಧ ಧ್ವನಿ ಎತ್ತೋಣ:** ಆಯೋಜನೆ: ಸಮಾನ ಮನಸ್ಕರು, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

**10ನೇ ಘಟಿಕೋತ್ಸವ:** ಅತಿಥಿ: ಶೋಭಾ ಕರಂದ್ಲಾಜೆ, ಘಟಿಕೋತ್ಸವ ಭಾಷಣ: ಟಿ.ಜಿ. ಸೀತಾರಾಮ್, ಅಧ್ಯಕ್ಷತೆ: ಎಚ್.ಎನ್. ಸುಬ್ರಹ್ಮಣ್ಯ, ಆಯೋಜನೆ: ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ನ್ಯಾಷನಲ್ ಕಾಲೇಜಿನ ಆವರಣ, ಬೆಳಿಗ್ಗೆ 10

**ಜಗದೀಶಶರ್ಮಾ ಸಂಪ ಅವರ 'ಕುರುಕ್ಷೇತ್ರ' ಪುಸ್ತಕ ಬಿಡುಗಡೆ:** ಗೌರೀಶ್ ಅಕ್ಕಿ, ಗಜಾನನ ಶರ್ಮ, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

**ವಜ್ರ ಮಹೋತ್ಸವ ಸಮಾರಂಭದ ಉದ್ಘಾಟನೆ:** ಥಾವರಚಂದ್ ಗೆಹಲೋತ್, 'ತ್ಯಾಗರಾಜ ವಜ್ರಶ್ರೀ' ಸ್ಮರಣ ಸಂಚಿಕೆ ಬಿಡುಗಡೆ: ಆರ್. ಅಶೋಕ, 'ಬ್ಯಾಂಕಿನ ಸಾಕ್ಷ್ಯಚಿತ್ರ' ಬಿಡುಗಡೆ: ಕೆ. ಷಡಕ್ಷರಿ, ಅತಿಥಿಗಳು: ಎನ್. ರವಿಕುಮಾರ್, ಸತೀಶ್ ಮರಾಠೆ, 'ಶ್ರೀ ತ್ಯಾಗರಾಜ' ರಾಜ್ಯ ಪ್ರಶಸ್ತಿ ಪ್ರದಾನ: ಬಿ.ವೈ. ವಿಜಯೇಂದ್ರ, ಸಿ.ಕೆ. ರಾಮಮೂರ್ತಿ, ಅಧ್ಯಕ್ಷತೆ: ಎಂ.ಆರ್. ವೆಂಕಟೇಶ್, ಆಯೋಜನೆ: ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್, ಸ್ಥಳ: ಎ.ಪಿ.ಎಸ್. ಕಾಲೇಜು ಆಟದ ಮೈದಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

**'ಮಹಾಸಲಿಲಂ' ಉಪನ್ಯಾಸ:** ಆರ್.ಎನ್. ಅಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30

**ಸಾಮೂಹಿಕ ಸತ್ಯನಾರಾಯಣ ಪೂಜಾ ಸಮೇತ ಮಹಿಳಾ ದಿನಾಚರಣೆ:** ವಿದ್ಯಾರ್ಥಿನಿಲಯದ ವಿಸ್ತರ್ಣಾ ಕಟ್ಟದ ಉದ್ಘಾಟನೆ: ದಿನೇಶ್ ಗುಂಡೂರಾವ್, ಸಮಾರಂಭದ ಉದ್ಘಾಟನೆ: ಎಚ್.ಎಂ. ರೇವಣ್ಣ, ಅಧ್ಯಕ್ಷತೆ: ಭಾಗ್ಯಲಕ್ಷ್ಮಿ ಮುರಳಿ, ಅತಿಥಿಗಳು: ಡಾ. ನಾಗಲಕ್ಷ್ಮೀ ಚೌಧರಿ, ಬಿ.ಎಲ್. ಸುಜಾತ ರಾಥೋಡ್, ಸನ್ಮಾನಿತರು: ಜಯಮಾಲಾ, ಅನಿತಾ ಪೂಜಾರಿ, ರೀನಾ ಸುವರ್ಣ, ಅಮಿತಾ ಆನಂದ್, ವಿದ್ಯಾಶ್ರೀ ಅಂಚನ್, ಜಾನಕಿ ಪೂಜಾರ್ತಿ, ಆಯೋಜನೆ: ಬಿಲ್ಲವ ಅಸೋಸಿಯೇಷನ್, ಸ್ಥಳ: ದೇವಕಿ ಆನಂದ ಸುವರ್ಣ ಕನ್ವನ್ಷನ್ ಹಾಲ್, ಬಿಲ್ಲವ ಭವನ, ಬನ್ನೇರುಘಟ್ಟ ರಸ್ತೆ, ಹುಳಿಮಾವು, ಬೆಳಿಗ್ಗೆ 11.30

**ದೃಶ್ಯ ನಾಟಕೋತ್ಸವ:** ಅತಿಥಿಗಳು: ಕೆ.ಎ. ದಯಾನಂದ್, ಕೆ.ವಿ. ನಾಗರಾಜಮೂರ್ತಿ, ಚಂದ್ರಶೇಖರ್, ಶ್ರೀನಿವಾಸ್ ಜಿ. ಕಪ್ಪಣ್ಣ, ಗಣೇಶ್ ಶೆಣೈ, ರಂಗ ಗೌರವ: ವಿಜಯಾ, ಟಿ.ಎಸ್. ನಾಗಾಭರಣ, ಸುರೇಶ್ ಅನಗಳ್ಳಿ, 'ಸುಪ್ತ', ಬಟರ್‌ಫ್ಲೈ', 'ಲಾಸ್ಟ್ ಆರ್ಡರ್', 'ಮತ್ತೊಮ್ಮೆ ಸಿಗಬೇಡ', 'ಖುಷ್ ಖುಷಿಯಾಗಿ' ಕಿರು ಚಿತ್ರಗಳ ಪ್ರದರ್ಶನ, 'ತಾಜಮಹಲಿನ ಟೆಂಡರ್' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3ರಿಂದ

**26ನೇ ವರ್ಷದ ಸಪ್ತಸ್ವರ ಸಂಗೀತೋತ್ಸವ:** ಉದ್ಘಾಟನೆ: ವಿ. ಹರಿಕೃಷ್ಣ, ಅಧ್ಯಕ್ಷತೆ: ಕೆ.ಎನ್. ರಮೇಶ್, ಗೌರವ ಸಮರ್ಪಣೆ: ಕೆ. ಪ್ರಿಯಕೃಷ್ಣ, ಮಹಾಲಿಂಗೇಗೌಡ, ಅತಿಥಿಗಳು: ಎಚ್. ಮಂಜುನಾಥ್ ಬಾಬು, ಕೆ. ವೆಂಕಟೇಶ್, ಮಹೇಂದ್ರ ಮುನೋತ್, ಬಿ.ಎನ್. ರಾಜಶೇಖರ್, ಆಯೋಜನೆ: ವಿಜಯ ಮ್ಯೂಸಿಕ್ ಸ್ಕೂಲ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9ರಿಂದ

**ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ:** ರು. ಬಸಪ್ಪ, ಅಧ್ಯಕ್ಷತೆ: ಕೆ.ವಿ. ರಾಜೇಶ್ವರಿ, ಅತಿಥಿಗಳು: ನಂಜುಂಡಸ್ವಾಮಿ ಬಿ.ಎ., ಉಷಾ ಬಸಪ್ಪ, ವಿ. ಮಲ್ಲಿಕಾರ್ಜುನಯ್ಯ, ಪ್ರಶಸ್ತಿ ಸ್ವೀಕರಿಸುವವರು: ಪ್ರಕಾಶ್ ಕಂಬತ್ತಳ್ಳಿ, ಕೆ. ರಾಜಕುಮಾರ್, ಜೋಗಿಲ ಸಿದ್ಧರಾಜು, ಗೀತಾ ಲೋಕೇಶ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

**ಸಂಗೀತ ಕಛೇರಿ:** ಗಾಯನ: ಸುಂದರರಾಜನ್, ತಬಲಾ: ವಿಶ್ವನಾಥ್ ನಾಕೋಡ್, ಮೃದಂಗ: ಮಯೂರಂ ಜೆ. ಶಂಕರ್, ಹಾರ್ಮೋನಿಯಂ: ಗೌರವ್ ಗಡಿಯಾರ್, ತಾಲ: ಪುನೀತ್ ರಣಪುರ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಸಂಜೆ 4.30ರಿಂದ

**ಮಹಿಳಾ ದಿನಾಚರಣೆ:** ಉದ್ಘಾಟನೆ: ಎಚ್.ಎಲ್. ಸೀತಾದೇವಿ, ಮಾಲಿನಿ ಎನ್., ಸಹನಾ ಭಟ್, 'ಮಹಿಳೆ ಮತ್ತು ಮಾಧ್ಯಮ' ಉಪನ್ಯಾಸ: ಗಾಯಿತ್ರಿ ಚಂದ್ರಶೇಖರ್, 'ವಿಪ್ರ ವಿಕಾಸ ಮಹಿಳಾ ರತ್ನ' ಪ್ರಶಸ್ತಿ: ಜಯಲಕ್ಷ್ಮಿ ಸಂಪತ್ ಕುಮಾರ್, 'ವಿಪ್ರ ವಿಕಾಸ ಮಹಿಳಾ ಸಾಧಕಿ' ಪ್ರಶಸ್ತಿ: ವಾಣಿ ಕೌಶಿಕ್, ರೇವತಿ ಮುರಳಿ, ಕೆ. ವಿಜಯಲಕ್ಷ್ಮಿ, ವಾರುಣಿ ಪಿ. ಕಟ್ಟಿ, ನಳಿನಿ ಶಿವಶಂಕರ್, ಬಿ.ಕೆ. ರಮೇಶ್, ಚೇತನ ಶ್ರೀಧರ್, ಆಯೋಜನೆ: ವಿಕಾಸ, ವಿಪ್ರ ಫೋಟೊ ಮತ್ತು ವಿಡಿಯೊಗ್ರಾಫರ್ಸ್ ಅಸೋಸಿಯೇಷನ್, ಸ್ಥಳ: ಹೊ.ನಾ. ಹಿರಿಯಣ್ಣಸ್ವಾಮಿ ಸಭಾಂಗಣ, ನಾಲ್ಕನೇ ಮಹಡಿ, ಗಾಯಿತ್ರಿ ಭವನ, ಎ.ಕೆ.ಬಿ.ಎಂ.ಎಸ್. ಬನಶಂಕರಿ ಎರಡನೇ ಹಂತ, ಸಂಜೆ 4.30

**ಬಾಗಲಕೋಟೆ ಹೋಳಿ ಹಲಗೆ ಮೇಳ:** ಸ್ಥಳ: ಸರ್ದಾರ್ ಪಟೇಲ್ ಮೈದಾನ, ವಿದ್ಯಾವರ್ಧಕ ಶಾಲೆಯ ಹತ್ತಿರ, ಒಂದನೇ ಬ್ಲಾಕ್, ರಾಜಾಜಿನಗರ, ಸಂಜೆ 6.30

**'ಟೆಂಡರ್ ವಂಡರ್ ಇಟಿಸಿ ಇಟಿಸಿ' ಪ್ರದರ್ಶನ:** ನಿರ್ದೇಶನ: ಕರ್ತೃ ಗಿರೀಶ್, ಆಯೋಜನೆ: ವೈಖರಿ ಥಿಯೇಟರ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 7

ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿnagaradalli_indu@prajavani.co.in

ಬೆಂಗಳೂರು ವಿ.ವಿ ಮರುನಾಮಕರಣ ವಿವಾದ • ವಿಪಕ್ಷಗಳ ಟೀಕೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನೆ

# ‘ಮನಮೋಹನ ಸಿಂಗ್ ಹೆಸರಿಟ್ಟರೆ ಸಮಸ್ಯೆ ಏನು’

ಪ್ರಜಾವಾಣಿ ವಾರ್ತೆ

‘ಬ್ರ್ಯಾಂಡ್ ಬೆಂಗಳೂರು’ ಯೋಜನೆಯನ್ನು ಜಾರಿಗೆ ತಂದೇ ತರುತ್ತೇವೆ. ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಹಣವನ್ನೂ ನಿಗದಿಪಡಿಸಿದ್ದು, ಸಿದ್ದರಾಮಯ್ಯನವರು ನಗರಕ್ಕೆ ನೀಡಿದ್ದಾರೆ
**ಡಿ.ಕೆ.ಶಿವಕುಮಾರ್**, ಉಪ ಮುಖ್ಯಮಂತ್ರಿ

**ಬೆಂಗಳೂರು:** ‘ಬಿಜೆಪಿ ಸರ್ಕಾರ ಯಾವ ರಾಜ್ಯದ ಸಂಸ್ಥೆ-ಸ್ಮಾರಕಗಳಿಗೆ ದೀನ ದಯಾಳ್ ಅವರ ಹೆಸರು ಇಟ್ಟಿದ್ದಾರೆ. ಆಗ ಇಲ್ಲದ ಸಮಸ್ಯೆ, ಈಗ ಮನಮೋಹನ ಸಿಂಗ್ ಅವರ ಹೆಸರು ಇಡುವಾಗ ಏಕೆ ಬರುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡುವಾಗ ಅವರು ಈ ಮಾತು ಹೇಳಿದರು. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಹೆಸರು ಇಡುವುದಾಗಿ ಬಜೆಟ್‌ನಲ್ಲಿ ಘೋಷಿಸಿರುವುದಕ್ಕೆ ಟೀಕೆ ವ್ಯಕ್ತವಾಗುತ್ತಿದೆ ಎಂದು ಸುದ್ದಿಗಾರರು ಪ್ರಸ್ತಾಪಿಸಿದಾಗ, ‘ಅವರಿಗೆ ಇನ್ನೂ ಮನಸ್ಸನ್ನೇ ಸಿಗಬೇಕಿದೆ’ ಎಂದರು.

‘ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೇಲ್ಸೇತುವೆ, ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ, ನೆಲಮಂಗಲ ಮೇಲ್ಸೇತುವೆಗಳಿಗೆ ಅನುಮೋದನೆ ನೀಡಿದ್ದು ಮನಮೋಹನಸಿಂಗ್. ಅವರ ಹೆಸರು ಇಟ್ಟರೆ ತಪ್ಪೇನು’ ಎಂದು ಪ್ರಶ್ನಿಸಿದರು.

‘ದೇಶದ ಜನರಿಗೆ ಆಹಾರ ಭದ್ರತಾ ಕಾಯ್ದೆ, ನರೇಗಾ ಯೋಜನೆ, ಶಿಕ್ಷಣದ ಹಕ್ಕು, ಮಾಹಿತಿ ಹಕ್ಕು, ನಗರಾಭಿವೃದ್ಧಿ ಯೋಜನೆ, ಆಶಾ ಕಾರ್ಯಕ್ರಮ ಎಲ್ಲವನ್ನೂ ನೀಡಿದವರು ಅವರು. ತಾವು ಏನು ಮಾಡಿದ್ದೇವೆ ಎಂಬುದನ್ನು ಬಿಜೆಪಿಯವರು ರಾಜ್ಯದ ಜನರಿಗೆ ಹೇಳಲಿ’ ಎಂದರು.

ಬಜೆಟ್ ಕುರಿತು ವಿರೋಧ ಪಕ್ಷಗಳ ನಾಯಕರ ಟೀಕೆಯ ಬಗ್ಗೆ ಪ್ರಶ್ನಿಸಿದಾಗ, ‘ಎಲ್ಲ ರಾಜ್ಯಗಳಿಗೂ ಮಾದರಿಯಾಗುವಂತಹ ಬಜೆಟ್ ಅನ್ನು ಸಿದ್ದರಾಮಯ್ಯ ನೀಡಿದ್ದಾರೆ. ವಿರೋಧ ಪಕ್ಷದವರಿಗೆ ಹೇಳಲು ಏನೂ ಇಲ್ಲ. ಹೀಗಾಗಿ ಸುಮ್ಮನೆ ಟೀಕೆ ಮಾಡುತ್ತಿದ್ದಾರೆ’ ಎಂದರು.

‘ಬೆಂಗಳೂರಿನಲ್ಲಿ ಡಬ್ಬಲ್ ಡೆಕ್ಕರ್ ಮೆಟ್ರೊ-ಮೇಲ್ಸೇತುವೆ, ರಾಜಕಾಲುವೆ ಇಕ್ಕೆಲದಲ್ಲಿ ರಸ್ತೆ, ಸುರಂಗ ಮಾರ್ಗ ನಿರ್ಮಿಸಲಿದ್ದೇವೆ. ಇದಕ್ಕಿಂತ ಇನ್ನೇನು ನೀಡಬೇಕು’ ಎಂದರು.

## ‘ಜೆಲುಸಿಲ್, ಇನೊ ಕಳಿಸುತ್ತೇವೆ’

ಸಿದ್ದರಾಮಯ್ಯ ಅವರು ದಾಖಲೆಯ ಬಜೆಟ್ ಮಂಡಿಸಿದ್ದಾರೆ. ಮಹಿಳೆಯರಿಗೆ ಒಟ್ಟು ₹92,000 ಕೋಟಿ ಅನುದಾನ ಒದಗಿಸಿದ್ದಾರೆ. ಇಷ್ಟು ಒಳ್ಳೆಯ ಬಜೆಟ್ ನೀಡಿರುವುದನ್ನು ನೋಡಿ ವಿರೋಧ ಪಕ್ಷಗಳ ನಾಯಕರಿಗೆ ತಡೆದುಕೊಳ್ಳಲು ಆಗುತ್ತಿಲ್ಲ. ಹೀಗಾಗಿ ಅವರು ಹೊಟ್ಟೆ ಉರಿದುಕೊಳ್ಳುತ್ತಿದ್ದಾರೆ. ಅವರ ಈ ಸಮಸ್ಯೆ ಕಡಿಮೆ ಮಾಡಲು ಜೆಲುಸಿಲ್ ಸಿರಪ್, ಮಾತ್ರೆ, ಇನೊ ಎಲ್ಲವನ್ನೂ ಸಂಗ್ರಹಿಸಿದ್ದೇವೆ. ಇದನ್ನು ಅವರಿಗೆ ಕಳುಹಿಸಿ ಕೊಡುತ್ತೇವೆ. ಅವರ ಹೊಟ್ಟೆಯುರಿ ಶಮನವಾಗಲಿ. ಈ ಔಷಧಗಳು ಸಾಲದಿದ್ದರೆ ಹೇಳಲಿ, ಇನ್ನಷ್ಟು ಕಳುಹಿಸುತ್ತೇವೆ.
**ಸೌಮ್ಯ ರೆಡ್ಡಿ**, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ

ಸೌಮ್ಯಾ ರೆಡ್ಡಿ

## ‘ಮುಸ್ಲಿಮರಿಗೆ ಈದ್ ಕಾ ಬಿರಿಯಾನಿ’

ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಮುಸ್ಲಿಮರಿಗೆ ‘ಈದ್ ಕಾ ಬಿರಿಯಾನಿ’ ನೀಡಿದ್ದಾರೆ. ಸಿಖ್ಖರು, ಜೈನರು, ಬೌದ್ಧ ಮತ್ತು ಕ್ರೈಸ್ತ ಧರ್ಮೀಯರಿಗೆ ನೆಕ್ಕಲು ಉಪ್ಪಿನಕಾಯಿ ನೀಡಿದ್ದಾರೆ. ಬಿರಿಯಾನಿ ತಿನ್ನುತ್ತಿರುವವರು ಮುಸಲ್ಮಾನರು ಮಾತ್ರ. 16ನೇ ಬಜೆಟ್ ಮಂಡಿಸಿದ್ದಾರೆ ಎಂದು ಎದೆ ತಟ್ಟಿಕೊಳ್ಳುತ್ತಾರೆ. ಮುಸ್ಲಿಮರಿಗೆ 16 ಹೊಸ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಉರ್ದು ಶಾಲೆಗಳನ್ನು ನಿರ್ಮಿಸಲು, ವಕ್ಫ್ ಆಸ್ತಿಗಳಲ್ಲಿ ಕಟ್ಟಡ ನಿರ್ಮಿಸಲು ನೂರಾರು ಕೋಟಿ ನೀಡಿದ್ದಾರೆ. ದಲಿತರಿಗೆ, ಹಿಂದುಳಿದವರಿಗೆ ಏನೂ ನೀಡಿಲ್ಲ. ಇದರಲ್ಲಿ ಸಾಮಾಜಿಕ ನ್ಯಾಯ ಎಲ್ಲಿದೆ?
**ನಿಖಿಲ್ ಕುಮಾರಸ್ವಾಮಿ**, ಜೆಡಿಎಸ್ ಯುವ ಘಟಕದ ಅಧ್ಯಕ್ಷ

ನಿಖಿಲ್ ಕುಮಾರಸ್ವಾಮಿ

## ‘ದಲಿತರಿಗೆ ಅನ್ಯಾಯ: ಜನಾಂದೋಲನ’

**ಬೆಂಗಳೂರು:** ‘ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ದಲಿತರಿಗೆ ಅನ್ಯಾಯ ಮಾಡಿದ್ದಾರೆ. ಈ ಅನ್ಯಾಯದ ವಿರುದ್ಧ ಜನಾಂದೋಲನ ನಡೆಸುತ್ತೇವೆ. ಬೆಂಗಳೂರಿನಲ್ಲಿ 5 ಲಕ್ಷ ಜನ ಸೇರಿಸಿ, ಸರ್ಕಾರದ ಈ ನೀತಿಯ ವಿರುದ್ಧ ಸಮಾವೇಶ ನಡೆಸುತ್ತೇವೆ’ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಶಾಸಕರ ಭವನದಲ್ಲಿ ಶನಿವಾರ ಆಯೋಜಿಸಿದ್ದ ಬಿಜೆಪಿಯ ದಲಿತ ನಾಯಕರ ಸಭೆಯಲ್ಲಿ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆಯ (ಎಸ್‌ಸಿಎಸ್‌ಪಿ, ಟಿಎಸ್‌ಪಿ) ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಅವಕಾಶ ಮಾಡಿಕೊಂಡಿದ್ದಾರೆ. ಇದರ ವಿರುದ್ಧ ಹೋರಾಡದೆ ವಿಧಿಯಿಲ್ಲ’ ಎಂದರು.

ಸಭೆಯಲ್ಲಿ ಇದಕ್ಕೆ ಒಮ್ಮತ ವ್ಯಕ್ತವಾಯಿತು. ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬೆಂಗಳೂರಿನಲ್ಲಿ ಸಮಾವೇಶ ನಡೆಸಬೇಕು ಎಂದು ತೀರ್ಮಾನಿಸಲಾಗಿದೆ. ಈ ಸಂಬಂಧ ರಾಜ್ಯವ್ಯಾಪ್ತಿ ಪ್ರವಾಸ ನಡೆಸಿ, ಜನರನ್ನು ಒಗ್ಗೂಡಿಸುತ್ತೇವೆ. ಇದಕ್ಕಾಗಿ 10 ತಂಡಗಳನ್ನು ರಚಿಸಲಿದ್ದೇವೆ’ ಎಂದರು.

ಸಿದ್ದರಾಮಯ್ಯ ಅವರು ದಲಿತರ ವಿರುದ್ಧ ದಲಿತರನ್ನೇ ಎತ್ತಿಕಟ್ಟುತ್ತಿದ್ದಾರೆ. ಈ ಮೂಲಕ ದಲಿತ ಸಮುದಾಯಗಳ ಒಗ್ಗಟ್ಟನ್ನು ಒಡೆಯುತ್ತಿದ್ದಾರೆ
**ಛಲವಾದಿ ನಾರಾಯಣಸ್ವಾಮಿ**, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಸಿದ್ದರಾಮಯ್ಯ ಅವರು ಮೋಸಗಾರ. ದಲಿತರಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿ ತೋರಿಸೋದು ₹42,000 ಕೋಟಿ. ಕೊಡೋದು ₹7,500 ಕೋಟಿ ಮಾತ್ರ
**ಗೋವಿಂದ ಕಾರಜೋಳ**, ಬಿಜೆಪಿ ಸಂಸದ

## ‘ಬಜೆಟ್‌ನಲ್ಲಿ ಕೊಟ್ಟಿದ್ದಕ್ಕಲ್ಲ, ಕೊಡದಿದ್ದಕ್ಕೆ ತಕರಾರು’

ಪ್ರಜಾವಾಣಿ ವಾರ್ತೆ

ಶ್ರೀರಾಮುಲು

**ಬಳ್ಳಾರಿ:** ‘ಬಜೆಟ್‌ನಲ್ಲಿ ಕೊಟ್ಟಿರುವುದಕ್ಕಲ್ಲ, ಕೊಡದಿರುವುದರ ಬಗ್ಗೆ ನನಗೆ ತಕರಾರಿದೆ. ಯಾರಿಗೆ ಏನೂ ಸಿಕ್ಕಿಲ್ಲವೋ, ಅವರ ಪರ ನಾನು ಮಾತನಾಡುವೆ’ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

‘ಹಲಾಲ್ ಬಜೆಟ್’ ಎಂದು ಬಿಜೆಪಿಯವರು ಟೀಕಿಸಿರುವ ಬಗ್ಗೆ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಪಕ್ಷದ ನಾಯಕರ ಟೀಕೆ ವೈಯಕ್ತಿಕವಾದದ್ದು. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ, ಎಲ್ಲರಿಗೂ ಎಲ್ಲವೂ ಸಿಗಬೇಕು ಎಂಬ ಅಭಿಪ್ರಾಯ ನನ್ನದು. ಒಟ್ಟಾರೆ, ಎಲ್ಲರಿಗೂ ಅನುಕೂಲವಾಗಬೇಕು’ ಎಂದರು.

‘ನಾನು ಬಿಜೆಪಿ ನಾಯಕನಾಗಿ ಮಾತನಾಡುತ್ತಿಲ್ಲ. ಬದಲಿಗೆ, ನನ್ನ ಪ್ರಕಾರ ರಾಜ್ಯದ ಎಲ್ಲಾ ಸಮುದಾಯಗಳೂ ಒಂದೇ. ಹಿಂದುಳಿದವರು, ಪರಿಶಿಷ್ಟರು, ಮಹಿಳೆಯರು, ರೈತರು ಸೇರಿ ಯಾರನ್ನೂ ನಾವು ಉಪೇಕ್ಷಿಸಬಾರದು’ ಎಂದರು.

‘ಕಲ್ಯಾಣ ಕರ್ನಾಟಕದಲ್ಲಿ ಎಲ್ಲ ಜಾತಿ, ಧರ್ಮಗಳಿವೆ. ರಾಜಕೀಯವಾಗಿ ನೋಡಿದಾಗ, ಎಲ್ಲರನ್ನೂ ಒಟ್ಟಿಗೆ ಒಯ್ಯಬೇಕಾಗುತ್ತದೆ. ಹಾಗೆಂದು, ಈ ಬಜೆಟ್‌ನ್ನು ನಾನು ಸಮರ್ಥಿಸುವುದಿಲ್ಲ’ ಎಂದರು.

‘ನಾನು ಪಕ್ಷದ ರಾಷ್ಟ್ರೀಯ ನಾಯಕರ ಸಂಪರ್ಕದಲ್ಲಿದ್ದು, ದೂರವಾಣಿಯಲ್ಲಿ ಆಗಾಗ ಚರ್ಚಿಸುತ್ತೇನೆ. ರಾಜ್ಯಕ್ಕೆ ಬಂದ ಅಮಿತ್ ಶಾ ಅವರನ್ನು ಭೇಟಿಯಾಗುವ ಅವಕಾಶ ಸಿಕ್ಕಿಲ್ಲ. ಅವರನ್ನು ದೆಹಲಿಯಲ್ಲಿ ಭೇಟಿಯಾಗುವೆ’ ಎಂದರು.

# ಪೆಂಟಾವಲೆಂಟ್ ಲಸಿಕೆ ಪಡೆದ ಮಗು ಸಾವು

ಪ್ರಜಾವಾಣಿ ವಾರ್ತೆ

**ತುಮಕೂರು:** ಶಿರಾ ತಾಲ್ಲೂಕಿನ ಮಾಗೋಡು ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಗುರುವಾರ ಪೆಂಟಾವಲೆಂಟ್ ಲಸಿಕೆ ಪಡೆದ ನಂತರ ಮಗುವೊಂದು ಮೃತಪಟ್ಟಿದೆ. ಲಸಿಕೆಯಿಂದಲೇ ಮಗು ಸಾವನ್ನಪ್ಪಿದೆ ಎಂದು ಪೋಷಕರು ಆರೋಪಿಸಿದ್ದಾರೆ.

ಕೀರ್ತನಾ ಮತ್ತು ಲಕ್ಷ್ಮಿಕಾಂತ್ ದಂಪತಿಯ ಐದು ತಿಂಗಳ ಮಗುವಿಗೆ ಪೆಂಟಾವಲೆಂಟ್ ಲಸಿಕೆ ಹಾಕಿಸಲಾಗಿತ್ತು. ಮಧ್ಯಾಹ್ನದ ನಂತರ ಮಗುವಿನ ಆರೋಗ್ಯದಲ್ಲಿ ಏರುಪೇರಾಗಿದೆ. ಕೂಡಲೇ ಶಿರಾ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿನ ವೈದ್ಯರು ಪರೀಕ್ಷೆ ನಡೆಸಿ ಮಗುವನ್ನು ತುಮಕೂರು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದರು.

ಗುರುವಾರ ರಾತ್ರಿ ನಗರದ ಶ್ರೀದೇವಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದ ಮಗು ಮಧ್ಯರಾತ್ರಿ ಸಾವನ್ನಪ್ಪಿದೆ. ಶುಕ್ರವಾರ ಸಂಜೆ ಮಗುವಿನ ಮೃತದೇಹವನ್ನು ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಯಿತು. ಮರಣೋತ್ತರ ಪರೀಕ್ಷೆಯ ನಂತರ ಶನಿವಾರ ಮಗುವಿನ ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಗಿದೆ.

‘ಒಂದು ಡೋಸ್‌ನಲ್ಲಿ ಆರು ಜನರಿಗೆ ಲಸಿಕೆ ನೀಡಲಾಗಿದೆ. ಅದರಲ್ಲಿ ಒಂದು ಮಗುವಿಗೆ ವಾಂತಿ,ಭೇದಿಯಾಗಿದೆ. ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಸಾವನ್ನಪ್ಪಿದೆ. ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಎಫ್‌ಎಸ್‌ಎಲ್ ವರದಿ ಬಂದ ನಂತರ ಖಚಿತ ಮಾಹಿತಿ ಸಿಗಲಿದೆ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಡಿ.ಎಂ.ಚಂದ್ರಶೇಖರ್ ಪ್ರತಿಕ್ರಿಯಿಸಿದ್ದಾರೆ.

### ಸಾವಿನ ಬಳಿಕವೂ ಚಿಕಿತ್ಸೆ ನಾಟಕ: ಆರೋಪ

ಲಸಿಕೆ ಪಡೆದ ನಂತರ ಮಗುವಿನ ಆರೋಗ್ಯದಲ್ಲಿ ಸಮಸ್ಯೆಯಾಯಿತು. ಶಿರಾ ಆಸ್ಪತ್ರೆ, ಶ್ರೀದೇವಿ ಆಸ್ಪತ್ರೆಯಲ್ಲೂ ಸರಿಯಾಗಿ ಚಿಕಿತ್ಸೆ ನೀಡಲಿಲ್ಲ. ಶ್ರೀದೇವಿ ಆಸ್ಪತ್ರೆಯಲ್ಲಿ ಮಗು ಮೃತಪಟ್ಟ ನಂತರವೂ ಔಷಧಿ ತರಿಸಿಕೊಂಡಿದ್ದಾರೆ. ಸಕಾಲಕ್ಕೆ ಮೃತದೇಹ ಹಸ್ತಾಂತರಿಸದೇ ವಿಳಂಬ ಮಾಡಿದ್ದಾರೆ ಎಂದು ಪೋಷಕರು ದೂರಿದ್ದಾರೆ.

# ಭಾಷಾ ಭಾರತಿ ಪ್ರಾಧಿಕಾರದ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ 2022 ಹಾಗೂ 2023ನೇ ಸಾಲಿನ ವಾರ್ಷಿಕ ಮತ್ತು ಅನುವಾದ ಪ್ರಶಸ್ತಿಗಳ ಪ್ರದಾನ ಸಮಾರಂಭ ನಗರದಲ್ಲಿ ಶನಿವಾರ ನಡೆಯಿತು.

ಪ್ರೊ.ಎಚ್.ಎಸ್. ರಾಘವೇಂದ್ರ ರಾವ್, ವಿನಯ್ ಚೈತನ್ಯ, ನಟರಾಜ್ ಹುಳಿಯಾರ್, ದು.ಸರಸ್ವತಿ ಮತ್ತು ಎಚ್.ಎಂ. ಕುಮಾರಸ್ವಾಮಿ ಅವರು 2023ನೇ ಸಾಲಿನ ಹಾಗೂ ಆರ್.ಕೆ. ಕುಲಕರ್ಣಿ, ಕರೀಗೌಡ ಬೀಚನಹಳ್ಳಿ, ರಾಜೇಂದ್ರ ಚೆನ್ನಿ, ಬೋಡೆ ರಿಯಾಜ್ ಅಹ್ಮದ್, ಬಸು ಬೇವಿನಗಿಡದ ಅವರು 2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಸ್ವೀಕರಿಸಿದರು.

ಕೆ.ಆರ್. ಮೈತ್ರೇಯಿ, ಜಯಶ್ರೀ ಭಟ್, ಬಿ.ಆರ್. ಜಯರಾಮರಾಜೇ ಅರಸ್, ವಿಕ್ರಮ ವಿಸಾಜಿ, ಎಂ.ಜಿ. ಶುಭಮಂಗಳ ಅವರು 2022ನೇ ಸಾಲಿನ ಹಾಗೂ ಸುಕನ್ಯಾ ಕನಾರಳ್ಳಿ, ಶ್ರೀಧರ ಹೆಗ್ಗೋಡು, ವಿಕಾಸ್ ಆರ್. ಮೌರ್ಯ, ಸುಬ್ಬಯ್ಯ ಜಿ.ಭಾಗ್ವತ್, ಗದುಗಿನ ತೋಂಟದ ಸಿದ್ದರಾಮ ಸ್ವಾಮೀಜಿ ಅವರು 2023ನೇ ಸಾಲಿನ ಪುಸ್ತಕ ಅನುವಾದ ಪ್ರಶಸ್ತಿ ಸ್ವೀಕರಿಸಿದರು.

ಸಾಹಿತಿ ಕೆ.ಮರುಳಸಿದ್ದಪ್ಪ ಪ್ರಶಸ್ತಿ ಪ್ರದಾನ ಮಾಡಿದರು. ಈಶ್ವರ ಮಿರ್ಜಿ, ಚಿತ್ತಯ್ಯ ಪೂಜಾರ್, ಗುರುನಾಥ್, ಚನ್ನಪ್ಪ ಕಟ್ಟಿ, ಕರಿಯಪ್ಪ ಮಾಳಗಿ, ಜಿ.ಎಸ್.ಮಂಜನಾಥ್, ಎಂ.ಎಸ್. ಶೇಖರ್, ಬಿ.ಎಲ್ ರಾಜು, ಎಸ್. ಗಂಗಾಧರಯ್ಯ ಉಪಸ್ಥಿತರಿದ್ದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಚಿತ್ರದುರ್ಗದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಗದುಗಿನ ತೋಂಟದ ಸಿದ್ದರಾಮ ಸ್ವಾಮೀಜಿ ಬಿ.ಆರ್. ಜಯರಾಮರಾಜೇ ಅರಸ್, ವಿಕ್ರಮ ವಿಸಾಜಿ, ಜಯಶ್ರೀ ಭಟ್, ವಿಕಾಸ್ ಮೌರ್ಯ, ಸುಬ್ಬಯ್ಯ ಜಿ.ಭಾಗ್ವತ್ ಅವರು ಪುಸ್ತಕ ಅನುವಾದ ಪ್ರಶಸ್ತಿ ಸ್ವೀಕರಿಸಿದರು

# ವೀರಣ್ಣ, ಸಬಿಹಾ ಸೇರಿ ಐವರಿಗೆ ‘ಗೌರವ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ


ಸಿ. ವೀರಣ್ಣ

ಸಬಿಹಾ ಭೂಮಿಗೌಡ

ಶ್ರೀರಾಮ ಇಟ್ಟಣ್ಣವರ

ಜಾಣಗೆರೆ ವೆಂಕಟರಾಮಯ್ಯ

ಎ.ಎಂ. ಮದರಿ

**ಬೆಂಗಳೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿಯ 2023ರ ‘ವಾರ್ಷಿಕ ಗೌರವ ಪ್ರಶಸ್ತಿ’ಗೆ ಸಾಹಿತಿಗಳಾದ ಸಿ. ವೀರಣ್ಣ (ಬೆಂಗಳೂರು), ಶ್ರೀರಾಮ ಇಟ್ಟಣ್ಣವರ (ಬಾಗಲಕೋಟೆ), ಜಾಣಗೆರೆ ವೆಂಕಟರಾಮಯ್ಯ (ತುಮಕೂರು), ಎ.ಎಂ. ಮದರಿ (ಕೊಪ್ಪಳ) ಹಾಗೂ ಸಬಿಹಾ ಭೂಮಿಗೌಡ (ಮಂಗಳೂರು) ಆಯ್ಕೆಯಾಗಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರಶಸ್ತಿ ಪಟ್ಟಿ ಬಿಡುಗಡೆ ಮಾಡಿದ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ‘ಈ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಬಹುಮಾನ ಒಳಗೊಂಡಿದೆ’ ಎಂದು ತಿಳಿಸಿದರು.

‘2023ರ ‘ಸಾಹಿತ್ಯ ಶ್ರೀ’ ಪ್ರಶಸ್ತಿಗೆ ಎಂ.ಎಸ್. ಶೇಖರ್ (ಮೈಸೂರು), ಜಿ.ಎನ್. ಮೋಹನ್ (ಬೆಂಗಳೂರು), ಟಿ.ಎಸ್. ವಿವೇಕಾನಂದ (ತುಮಕೂರು), ಜಯಶ್ರೀ ಕಂಬಾರ (ಬೆಳಗಾವಿ), ಪ್ರೊ. ನಿಜಲಿಂಗಪ್ಪ ಯಮನಪ್ಪ ಮಟ್ಟಿಹಾಳ (ಧಾರವಾಡ), ಬಾಲಗುರುಮೂರ್ತಿ (ಕೋಲಾರ), ಪ್ರೊ. ಶಿವಗಂಗಾ ರುಮ್ಮಾ (ಕಲಬುರಗಿ), ರೀಟಾ ರೀನಿ (ಬೆಂಗಳೂರು), ಕಲೀಮ್ ಉಲ್ಲಾ (ಶಿವಮೊಗ್ಗ) ಹಾಗೂ ವೆಂಕಟಗಿರಿ ದಳವಾಯಿ (ಬಳ್ಳಾರಿ) ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹ 25 ಸಾವಿರ ಒಳಗೊಂಡಿದೆ’ ಎಂದರು.

‘2022ರ ಪುಸ್ತಕ ಬಹುಮಾನಕ್ಕೆ ವಿಮರ್ಶಕರ ಅಭಿಪ್ರಾಯ ಆಧರಿಸಿ 18 ಕೃತಿಗಳನ್ನು ಆಯ್ಕೆ ಮಾಡಲಾಗಿದೆ. ಈ ಬಹುಮಾನವು ತಲಾ ₹ 25 ಸಾವಿರ ನಗದು ಬಹುಮಾನ ಒಳಗೊಂಡಿದೆ. 2022ರ ವಿವಿಧ ದತ್ತಿ ಬಹುಮಾನಗಳಿಗೆ ಒಂಬತ್ತು ಕೃತಿಗಳು ಆಯ್ಕೆಯಾಗಿವೆ. ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 24ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ’ ಎಂದು ತಿಳಿಸಿದರು.

### 2022ರ ಪುಸ್ತಕ ಬಹುಮಾನ ಪುರಸ್ಕೃತರು

| ಪ್ರಕಾರ | ಕೃತಿಯ ಹೆಸರು | ಲೇಖಕ |
|---|---|---|
| ಕಾವ್ಯ | ವಿಷ್ಣುಕ್ರಾಂತಿ ಮತ್ತು ಇತರ ಪದ್ಯಗಳು | ರಾಮು ಮೈಸೂರು |
| ಪ್ರಥಮ ಸಂಕಲನ | ಬಾಳ ನೌಕೆಗೆ ಬೆಳಕಿನ ದೀಪ | ರೇವಣಸಿದ್ದಪ್ಪ ಜಿ.ಆರ್. |
| ಕಾದಂಬರಿ | ಬಯಲ ಬೆರಗು | ಸುಮಂಗಲಾ ಎಸ್. ಮಮ್ಮಿಗಟ್ಟಿ |
| ಸಣ್ಣಕತೆ | ಬುದ್ಧನ ಕಿವಿ | ದಯಾನಂದ |
| ನಾಟಕ | ಮಾಯಾದಂಡ | ಬಿದರಹಳ್ಳಿ ನರಸಿಂಹಮೂರ್ತಿ |
| ಲಲಿತ ಪ್ರಬಂಧ | ಡಾರ್ಕ್ ಹ್ಯೂಮರ್ | ಶ್ರೀಹರ್ಷ ಸಾಲಿಮಠ |
| ಪ್ರವಾಸ ಸಾಹಿತ್ಯ | ಗಿಂಡಿಯಲ್ಲಿ ಗಂಗೆ | ಚಿಂತಾಮಣಿ ಕೊಡ್ಲೆಕೆರೆ |
| ಜೀವನ ಚರಿತ್ರೆ/ಆತ್ಮಕಥೆ | ನಾನು ಹಿಂದೂ ರಾಮಯ್ಯ | ಪಿ. ರಾಮಯ್ಯ |
| ಸಾಹಿತ್ಯ ವಿಮರ್ಶೆ | ಕುಯಿಲು | ಚನ್ನಪ್ಪ ಕಟ್ಟಿ |
| ಮಕ್ಕಳ ಸಾಹಿತ್ಯ | ಮಗಳಿಗೆ ಹೇಳಿದ ಕಥೆಗಳು | ಸಂತೆಬೆನ್ನೂರು ಫೈಜ್ನಟ್ರಾಜ್ |
| ವಿಜ್ಞಾನ ಸಾಹಿತ್ಯ | ಬೆಳೆ ರೋಗಗಳು, ಕೀಟಗಳು ಮತ್ತು ಅವುಗಳ ನಿರ್ವಹಣೆ | ಸುಕನ್ಯಾ ಸೂನಗಹಳ್ಳಿ |
| ಮಾನವಿಕ | ಸಂವಿಧಾನ ಮತ್ತು ವಚನಗಳು | ಎಚ್.ಎನ್. ನಾಗಮೋಹನದಾಸ್ |
| ಸಂಶೋಧನೆ | ನಿರೂಪಣೆಯಾಚೆಗೆ | ಶೈಲಜಾ ಇಂ. ಹಿರೇಮಠ |
| ಅನುವಾದ-1 (ಭಾರತೀಯ ಭಾಷೆಯಿಂದ ಕನ್ನಡಕ್ಕೆ ಅನುವಾದ) | ಡಾ. ಅಂಬೇಡ್ಕರ್ ಸಹವಾಸದಲ್ಲಿ | ಅನಿಲ ಸಿ. ಹೊಸಮನಿ |
| ಅಂಕಣ ಬರಹ/ ವೈಚಾರಿಕ ಬರಹ | ಕರಿಡಬ್ಬಿ | ರಾಜಾರಾಂ ತಲ್ಲೂರು |
| ಸಂಕೀರ್ಣ | ಟಿಪ್ಪೂ ಮಾನ್ಯತೆ ಸಿಗದ ಸುಲ್ತಾನ್ ಅಂದು-ಇಂದು | ಪಿ.ವಿ. ನಂಜರಾಜ ಅರಸ್ |
| ಲೇಖಕರ ಮೊದಲ ಸ್ವತಂತ್ರ ಕೃತಿ | ದೀಡೆಕರೆ ಜಮೀನು | ಮಲ್ಲಿಕಾರ್ಜುನ ಶೆಲ್ಲಿಕೇರಿ |
| ಅನುವಾದ-2 (ಕನ್ನಡದಿಂದ ಭಾರತೀಯ ಭಾಷೆಗೆ ಅನುವಾದ) | ಚಾರು ವಸಂತ | ಪೈಯನೂರು ಕುನ್ಹಿರಾಮನ್ ಮತ್ತು ಮೋಹನ ಕುಂಟಾರ್ |

### 2022ರ ದತ್ತಿ ಬಹುಮಾನ ಪುರಸ್ಕೃತರು

| ಪ್ರಕಾರ | ದತ್ತಿನಿಧಿ ಬಹುಮಾನ | ಕೃತಿಯ ಹೆಸರು | ಲೇಖಕರು |
|---|---|---|---|
| ಕಾದಂಬರಿ | ಚದುರಂಗ ದತ್ತಿನಿಧಿ ಬಹುಮಾನ | ಬೆಳಗಿನೊಳಗು ಮಹಾದೇವಿಯಕ್ಕ | ಎಚ್.ಎಸ್. ಅನುಪಮಾ |
| ಲಲಿತ ಪ್ರಬಂಧ | ವಿ. ಸೀತಾರಾಮಯ್ಯ ಸೋದರಿ ಇಂದಿರಾ ದತ್ತಿ ಬಹುಮಾನ | ಕಡಲು ನೋಡಲು ಹೋದವಳು | ಫಾತಿಮಾ ರಲಿಯಾ |
| ಜೀವನಚರಿತ್ರೆ | ಸಿಂಪಿ ಲಿಂಗಣ್ಣ ದತ್ತಿನಿಧಿ ಬಹುಮಾನ | ಮಾತಂಗಿ ಮಾಣಿಕ್ಯ | ಶಾರದಾ ವಿ. ಮೂರ್ತಿ |
| ಸಾಹಿತ್ಯ ವಿಮರ್ಶೆ | ಪಿ. ಶ್ರೀನಿವಾಸರಾವ್ ದತ್ತಿನಿಧಿ ಬಹುಮಾನ | ಕಣ್ಣಂಚಿನ ಕಿಟಕಿ | ವಿನಯಾ ನಂದಿಹಾಳ |
| ಅನುವಾದ-1 | ಎಲ್. ಗುಂಡಪ್ಪ ಮತ್ತು ಶಾರದಮ್ಮ ದತ್ತಿನಿಧಿ ಬಹುಮಾನ | ದೇಹವೇ ದೇಶ | ವಿಕ್ರಮ ವಿಸಾಜಿ |
| ಲೇಖಕರ ಮೊದಲ ಸ್ವತಂತ್ರ ಕೃತಿ | ಮಧುರಚೆನ್ನ ದತ್ತಿನಿಧಿ ಬಹುಮಾನ | ಪರಿಣಯ ಪ್ರಪಂಚ | ಸುಶ್ರುತ್ ಜೆ.ಆರ್. |
| ವೈಚಾರಿಕ/ ಅಂಕಣ ಬರಹ | ಬಿ.ವಿ. ವೀರಭದ್ರಪ್ಪ ದತ್ತಿನಿಧಿ ಬಹುಮಾನ | ಇಸ್ಕೂಲು | ಅಕ್ಷತಾ ಕೃಷ್ಣಮೂರ್ತಿ |
| ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ | ಅಮೆರಿಕನ್ನಡ ದತ್ತಿನಿಧಿ ಬಹುಮಾನ | ಕವಿರಾಜಮಾರ್ಗ ಆ್ಯಂಡ್ ದಿ ಕನ್ನಡ ವರ್ಲ್ಡ್ | ಕೃಷ್ಣಮೂರ್ತಿ ಚಂದರ್ |
| ದಾಸ ಸಾಹಿತ್ಯ | ಜಲಜಾ ಶ್ರೀಪತಿ ಆಚಾರ್ಯ ಗಂಗೂರ್ ದತ್ತಿನಿಧಿ ಬಹುಮಾನ | ಸುಜ್ಞಾನ ಅಡಿಗೆ | ಶ್ರೀಧರ ಹೆಗಡೆ ಭದ್ರನ್ |

## ‘ವಿಪಕ್ಷ ನಾಯಕ ಸ್ಥಾನಕ್ಕೆ ಅಶೋಕ ಯೋಗ್ಯರಲ್ಲ’

**ಕೆಂಗೇರಿ:** ‘ಸಂಪೂರ್ಣ ಅಧ್ಯಯನ ಮಾಡದೆ ಬಜೆಟ್ ಕುರಿತು ಹೇಳಿಕೆ ನೀಡಿರುವ ಆರ್. ಅಶೋಕ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಯೋಗ್ಯರಲ್ಲ’ ಎಂದು ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಜೆಪಿಗರಿಗೆ ಅಧ್ಯಯನದ ಕೊರತೆಯಿದೆ. 197 ಪುಟಗಳ ಬಜೆಟ್ ಪ್ರತಿಯನ್ನು ಸಂಪೂರ್ಣವಾಗಿ ಪರಾಮರ್ಶಿಸದೆ ಹೇಳಿಕೆ ನೀಡುತ್ತಿದ್ದಾರೆ’ ಎಂದು ಟೀಕಿಸಿದರು.

‘ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ವರ್ಗದವರನ್ನು ಮೇಲೆತ್ತುವ ಗುರಿಯೊಂದಿಗೆ ಬಜೆಟ್ ಮಂಡಿಸಲಾಗಿದೆ. ಅಧ್ಯಯನದ ಕೊರತೆಯಿಂದ ವಿಪಕ್ಷ ನಾಯಕ ಹಲಾಲ್ ಬಜೆಟ್ ಎಂದು ಆರೋಪಿಸುತ್ತಿದ್ದಾರೆ. ಬಿಜೆಪಿಗರಿಗೆ ಜನರ ಭಾವನೆಯನ್ನು ಕೆರಳಿಸುವುದೇ ಕಾಯಕವಾಗಿದೆ’ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

## ಮೂವರು ಯುವಕರು ನೀರುಪಾಲು

ಪ್ರಜಾವಾಣಿ ವಾರ್ತೆ

**ಹೂವಿನಹಡಗಲಿ (ವಿಜಯನಗರ ಜಿಲ್ಲೆ):** ತಾಲ್ಲೂಕಿನ ಮದಲಗಟ್ಟಿ ಬಳಿ ತುಂಗಭದ್ರಾ ನದಿಯಲ್ಲಿ ಶನಿವಾರ ಸಂಜೆ ಈಜಲು ತೆರಳಿದ್ದ ಗದಗ ಜಿಲ್ಲೆ ಶಿರಹಟ್ಟಿಯ ಗುರುನಾಥ ಬಡಿಗೇರ (28), ಶರಣಪ್ಪ ಬಡಿಗೇರ (24), ಮಹೇಶ ಬಡಿಗೇರ (26) ನೀರುಪಾಲಾಗಿದ್ದಾರೆ. ತೀವ್ರ ಹುಡುಕಾಟ ನಡೆಸಿದರೂ ಮೂವರು ಪತ್ತೆಯಾಗಲಿಲ್ಲ.

‘ಶರಣಪ್ಪ ಅವರ ಜನ್ಮದಿನಾಚರಣೆಗೆ ಐವರು ಸ್ನೇಹಿತರು ಕಾರಿನಲ್ಲಿ ಶಿರಹಟ್ಟಿಯಿಂದ ಮದಲಗಟ್ಟಿಗೆ ಬಂದಿದ್ದರು. ಆಗ ಸ್ನಾನಕ್ಕೆ ಮೂವರು ನದಿಗೆ ಇಳಿದಿದ್ದರು. ಮುಳುಗುತ್ತಿದ್ದ ಶರಣಪ್ಪ ರಕ್ಷಣೆಗೆ ಕೂಗಿಕೊಂಡಾಗ, ಪಕ್ಕದಲ್ಲೇ ಇದ್ದ ಗುರುನಾಥ ಮತ್ತು ಮಹೇಶ ರಕ್ಷಣೆಗೆ ಮುಂದಾಗಿದ್ದಾರೆ. ದಡದಲ್ಲಿದ್ದ ಇನ್ನಿಬ್ಬರು ಸ್ನೇಹಿತರು ರಕ್ಷಣೆಗಾಗಿ ಸ್ಥಳೀಯರ ನೆರವು ಕೋರಿದ್ದಾರೆ. ಅಷ್ಟರೊಳಗೆ ಮೂವರು ನದಿಯಲ್ಲಿ ಕೊಚ್ಚಿ ಹೋಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸದ್ಯ ಶೋಧ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದ್ದು, ಭಾನುವಾರ ಬೆಳಿಗ್ಗೆ ಮತ್ತೆ ಹುಡುಕಾಟ ನಡೆಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## 11 ದಿನಗಳ ಬಳಿಕ ಉಡುಪಿಯಲ್ಲಿ ಪತ್ತೆ
# ಪರೀಕ್ಷೆ ಭಯ: ಮನೆ ಬಿಟ್ಟಿದ್ದ ವಿದ್ಯಾರ್ಥಿ

ಪ್ರಜಾವಾಣಿ ವಾರ್ತೆ

**ಬಂಟ್ವಾಳ/ಉಡುಪಿ:** ದಕ್ಷಿಣ ಕನ್ನಡ ಜಿಲ್ಲೆಯ ಫರಂಗಿಪೇಟೆ ಕಿದೆಬೆಟ್ಟು ಎಂಬಲ್ಲಿಂದ ಫೆ. 25ರಿಂದ ನಾಪತ್ತೆಯಾಗಿದ್ದ ದ್ವಿತೀಯ ಪಿಯುಸಿ ವಿದ್ಯಾರ್ಥಿ ಉಡುಪಿಯ ಡಿ-ಮಾರ್ಟ್ ಮಳಿಗೆಯಲ್ಲಿ ಶನಿವಾರ ಪತ್ತೆಯಾಗಿದ್ದಾನೆ.

‘ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಡಿ-ಮಾರ್ಟ್‌ಗೆ ಬಂದಿದ್ದ ವಿದ್ಯಾರ್ಥಿಯನ್ನು ಅಲ್ಲಿನ ಸಿಬ್ಬಂದಿ ಗುರುತಿಸಿ, ಮಾಹಿತಿ ನೀಡಿದರು. ಬಳಿಕ ಆತನನ್ನು ಕರೆತರಲಾಗಿದೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್. ತಿಳಿಸಿದರು.

**ಪರೀಕ್ಷಾ ಭಯದಿಂದ ಮನೆ ತೊರೆದಿದ್ದ:** ‘ಮಂಗಳೂರಿನ ಪದವಿ ಪೂರ್ವ ಕಾಲೇಜೊಂದರಲ್ಲಿ ದ್ವಿತೀಯ ಪಿ.ಯು. ಓದುತ್ತಿದ್ದ ವಿದ್ಯಾರ್ಥಿ ಪರೀಕ್ಷಾ ಭಯದಿಂದ ಮನೆ ತೊರೆದಿದ್ದಾನೆ. ಮೈಸೂರು, ಬೆಂಗಳೂರು ಸೇರಿದಂತೆ ಅನೇಕ ಕಡೆ ಸುತ್ತಾಡಿ, ಶನಿವಾರ ಉಡುಪಿಗೆ ಬಂದಿದ್ದ. ಆತನ ಪತ್ತೆಗೆ ಕೋರಿ ಪೋಷಕರು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿರುವುದರಿಂದ ಆತನನ್ನು ಹೈಕೋರ್ಟ್ ಮುಂದೆ ಹಾಜರುಪಡಿಸಬೇಕಾಗುತ್ತದೆ. ಸದ್ಯಕ್ಕೆ ಆತನನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಲಿದ್ದೇವೆ. ಸಮಿತಿಯ ನಿರ್ದೇಶನದಂತೆ ಮುಂದಿನ ಕ್ರಮವಹಿಸಲಿದ್ದೇವೆ’ ಎಂದು ಅವರು ತಿಳಿಸಿದರು.

ವಿದ್ಯಾರ್ಥಿ ಪತ್ತೆಯಾದ ಬಗ್ಗೆ ಪ್ರತಿಕ್ರಿಯಿಸಿದ ಡಿ-ಮಾರ್ಟ್ ವ್ಯವಸ್ಥಾಪಕರು, ‘ಸಾಮಾಜಿಕ ಮಾಧ್ಯಮದಲ್ಲಿ ಆತನ ಫೋಟೊ ನೋಡಿದ್ದೆವು. ಈ ಕಾರಣಕ್ಕೆ ಆತನನ್ನು ಗುರುತಿಸಿ ಪೊಲೀಸರಿಗೆ ಮಾಹಿತಿ ನೀಡಿದೆವು’ ಎಂದರು.

ಫರಂಗಿಪೇಟೆಯ ವೀರಾಂಜನೇಯ ದೇವಸ್ಥಾನಕ್ಕೆ ಹೋಗುವುದಾಗಿ ಹೇಳಿ ಫೆ.25ರಂದು ಸಂಜೆ ಮನೆಯಿಂದ ಹೋಗಿದ್ದ ವಿದ್ಯಾರ್ಥಿ ಬಳಿಕ ಮನೆಗೆ ಮರಳಿರಲಿಲ್ಲ. ಮನೆಯವರು ಹಾಗೂ ಸ್ಥಳೀಯರು ಹುಡುಕಾಡಿದಾಗ ಊರಿನ ರೈಲ್ವೆ ಹಳಿಯಲ್ಲಿ ಆತನ ಮೊಬೈಲ್ ಮತ್ತು ಚಪ್ಪಲಿಗಳು ದೊರೆತಿದ್ದವು. ಮಾದಕ ದ್ರವ್ಯ ವ್ಯಸನಿಗಳು ಆತನನ್ನು ಅಪಹರಿಸಿರಬಹುದು ಎಂಬ ಸಂಶಯ ವ್ಯಕ್ತವಾಗಿತ್ತು. ಆತ ಕಾಣೆಯಾದ ಬಗ್ಗೆ ಪೋಷಕರು ಪೊಲೀಸರಿಗೆ ದೂರು ನೀಡಿದ್ದರು.

ಕಾಣೆಯಾದ ವಿದ್ಯಾರ್ಥಿಯನ್ನು ಪತ್ತೆ ಹಚ್ಚಬೇಕು ಎಂದು ಆಗ್ರಹಿಸಿ ಫರಂಗಿಪೇಟೆಯಲ್ಲಿ ಅಂಗಡಿ ಮುಂಗಟ್ಟು ಬಂದ್ ಮಾಡಿ ಈಚೆಗೆ ಪ್ರತಿಭಟನೆ ನಡೆಸಲಾಗಿತ್ತು. ಈ ಬೆಳವಣಿಗೆ ಬಳಿಕ ಪಶ್ಚಿಮ ವಲಯ ಡಿಐಜಿ ಅಮಿತ್ ಸಿಂಗ್, ಎಸ್.ಪಿ ಯತೀಶ್ ಎನ್. ಅವರು ಫರಂಗಿಪೇಟೆಗೆ ಧಾವಿಸಿ ತನಿಖೆಗೆ ಮಾರ್ಗದರ್ಶನ ಮಾಡಿದ್ದರು. ರೈಲ್ವೆ ಪೊಲೀಸ್ ಜೊತೆಗೆ ಸೇರಿಯೂ ಹುಡುಕಾಟ ನಡೆಸಿದ್ದರು. ಇಷ್ಟಾಗಿಯೂ ವಿದ್ಯಾರ್ಥಿ ಪತ್ತೆಯಾಗದೇ ಇದ್ದುದರಿಂದ ಪೋಷಕರು ಹೈಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು. ಈ ವಿದ್ಯಾರ್ಥಿ ನಾಪತ್ತೆಯಾದ ವಿಚಾರದ ಬಗ್ಗೆ ವಿಧಾನ ಮಂಡಲ ಅಧಿವೇಶನದಲ್ಲೂ ಚರ್ಚೆಯಾಗಿತ್ತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಣೆ

# 20 ಸಾಧಕಿಯರಿಗೆ ‘ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಶನಿವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ 20 ಮಹಿಳೆಯರು ಹಾಗೂ ಆರು ಸಂಸ್ಥೆಗಳಿಗೆ 2024–25ನೇ ಸಾಲಿನ ‘ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು, ಸಾಧಕಿಯರು ಹಾಗೂ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸಿದ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಮಹಿಳೆಯರ ಅಭಿವೃದ್ಧಿ ವಿಭಾಗದಲ್ಲಿ ಡಾ. ವೀಣಾ ಎಸ್. ಭಟ್ (ಭದ್ರಾವತಿ), ಪೂಜಾ ಮಲ್ಲಪ್ಪ ಬೇವೂರ (ಗದಗ), ಪ್ರೇಮಾ ಎಚ್. (ಉಡುಪಿ), ರಶ್ಮಿ ಎಸ್. ಆರ್. (ಹಾಸನ), ನಾಜೀಮಾ ಎಸ್. (ಶಿವಮೊಗ್ಗ), ಸುವರ್ಣ (ಬೆಂಗಳೂರು), ಮಂಜುಳಾ (ಮಂಡ್ಯ), ಅದಿತಿ ಪರಪ್ಪ ಕ್ಷಾತ್ರತೇಜ (ಧಾರವಾಡ), ಕಲಾ ಕ್ಷೇತ್ರದಲ್ಲಿ ವೇದಾರಾಣಿ ದಾಸನೂರ (ಧಾರವಾಡ), ಉಷಾ ಬಸಪ್ಪ (ಬೆಂಗಳೂರು), ರಜನಿ ಎಲ್. ಕರಿಗಾರ (ರಾಣೆಬೆನ್ನೂರು), ಎ.ಎಸ್. ಪದ್ಮಾವತಿ (ಭದ್ರಾವತಿ) ಹಾಗೂ ಪೂಜಾ ರಘುನಂದನ್ (ಹಾಸನ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಾಹಿತ್ಯ ಕ್ಷೇತ್ರದಲ್ಲಿ ರಿಶಲ್ ಬ್ರಿಟ್ಟಿ ಫರ್ನಾಂಡಿಸ್ (ಮಂಗಳೂರು), ಸಂಗೀತಾ ಎಂ. ಹಿರೇಮಠ (ಕಲಬುರಗಿ), ಕಸ್ತೂರಿ ಡಿ. ಪತ್ತಾರ್ (ಕೊಪ್ಪಳ), ಕ್ರೀಡಾ ಕ್ಷೇತ್ರದಲ್ಲಿ ಗಾಯತ್ರಿ (ಉತ್ತರ ಕನ್ನಡ), ಅಮೂಲ್ಯಾ (ಹಾವೇರಿ), ಶಿಕ್ಷಣ ಕ್ಷೇತ್ರದಲ್ಲಿ ಲಲಿತಾ ಸಿ. ಕರಿಮನಿ (ಗದಗ) ಹಾಗೂ ವೀರ ಮಹಿಳೆ ಕ್ಷೇತ್ರದಲ್ಲಿ ವಿಶಾಲಾಕ್ಷಿ ಕರಡ್ಡಿ (ಕಲಬುರಗಿ) ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಹಿಳೆಯರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಜನಚಿಂತನ ಪಟ್ಟಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ (ಚಿಕ್ಕಮಗಳೂರು), ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ (ಬೆಂಗಳೂರು), ಶ್ರೀ ದಾನೇಶ್ವರಿ ಮಹಿಳಾ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ (ಬಾಗಲಕೋಟೆ), ಚೇತನಾ ಸೇವಾ ಸಂಸ್ಥೆ (ಉತ್ತರ ಕನ್ನಡ), ರುಚಿ ಟ್ರಸ್ಟ್ (ಯಾದಗಿರಿ) ಹಾಗೂ ನವಶ್ರೀ ಕಲಾಚೇತನ ಸಂಸ್ಥೆ (ಹುಬ್ಬಳ್ಳಿ-ಧಾರವಾಡ) ಪ್ರತಿನಿಧಿಗಳು ‘ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ’ ಸ್ವೀಕರಿಸಿದರು.

ಪ್ರಶಸ್ತಿಯು ಸಂಸ್ಥೆಗಳಿಗೆ ತಲಾ ₹50 ಸಾವಿರ ಹಾಗೂ ವ್ಯಕ್ತಿಗಳಿಗೆ ತಲಾ ₹25 ಸಾವಿರ ನಗದು ಒಳಗೊಂಡಿದೆ.

ಶಾಸಕ ಉದಯ್ ಗರುಡಾಚಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪದ್ಮಾವತಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ, ಮಾಜಿ ಶಾಸಕಿ ಸೌಮ್ಯಾ ರೆಡ್ಡಿ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣ ಗೌಡ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಶಮ್ಲಾ ಇಕ್ಬಾಲ್, ನಿರ್ದೇಶಕ ರಾಘವೇಂದ್ರ ಟಿ., ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಪುಷ್ಪಲತಾ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಾಧಕಿಯರಿಗೆ ‘ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪದ್ಮಾವತಿ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ, ರಾಘವೇಂದ್ರ ಟಿ. ಇದ್ದರು
ಪ್ರಜಾವಾಣಿ ಚಿತ್ರ

ಮಹಿಳೆ ಸ್ವಾಭಿಮಾನದ ಪ್ರತೀಕ. ಆಕೆ ಎಲ್ಲ ಕ್ಷೇತ್ರಗಳಲ್ಲೂ ದಾಪುಗಾಲಿಡುತ್ತಿದ್ದು, ತನ್ನ ಸ್ವಾಭಿಮಾನಕ್ಕೆ ಧಕ್ಕೆಯಾದರೆ ಹೋರಾಟ ನಡೆಸಬೇಕಾಗುವುದು ಅನಿವಾರ್ಯ
**ಲಕ್ಷ್ಮೀ ಹೆಬ್ಬಾಳಕರ**, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

### ಸ್ತ್ರೀಶಕ್ತಿ ಗುಂಪು, ಒಕ್ಕೂಟಗಳಿಗೆ ಪ್ರಶಸ್ತಿ

ಮಹಿಳೆಯರ ಅಭಿವೃದ್ಧಿಗಾಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 3 ಸ್ತ್ರೀಶಕ್ತಿ ಗುಂಪುಗಳು ಹಾಗೂ 3 ಸ್ತ್ರೀ ಶಕ್ತಿ ಒಕ್ಕೂಟಗಳಿಗೂ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು. ಆದಿಶಕ್ತಿ ಮಹಿಳಾ ಸ್ತ್ರೀಶಕ್ತಿ ಸ್ವಸಹಾಯ ಸಂಘ (ಗದಗ), ಐಶ್ವರ್ಯ ಸ್ತ್ರೀಶಕ್ತಿ ಸ್ವಸಹಾಯ ಸಂಘ (ಬೆಳಗಾವಿ) ಹಾಗೂ ಶ್ರೀ ಶಾರದಾ ಸ್ತ್ರೀಶಕ್ತಿ ಸ್ವಸಹಾಯ ಸಂಘವು (ಬೆಂಗಳೂರು ಗ್ರಾಮಾಂತರ) ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದಿದ್ದು, ಸಂಘದ ಪ್ರತಿನಿಧಿಗಳು ಪ್ರಶಸ್ತಿ ಸ್ವೀಕರಿದರು.

ಅತ್ಯುತ್ತಮ ತಾಲ್ಲೂಕು ಒಕ್ಕೂಟ ಪ್ರಶಸ್ತಿಯನ್ನು ಸ್ತ್ರೀಶಕ್ತಿ ಮಹಿಳಾ ಬ್ಲಾಕ್ ಸೊಸೈಟಿ (ಬೆಂಗಳೂರು), ಸಹನ ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿ (ಚಿಕ್ಕಬಳ್ಳಾಪುರ) ಹಾಗೂ ಶ್ರೀ ಬನಶಂಕರಿ ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿ (ಬಾಗಲಕೋಟೆ) ಪಡೆದಿವೆ.

ಅತ್ಯುತ್ತಮ ಸ್ತ್ರೀಶಕ್ತಿ ಗುಂಪಿಗೆ ನೀಡುವ ‘ಯಶೋಧರಮ್ಮ ದಾಸಪ್ಪ ವಿಭಾಗೀಯ ಮಟ್ಟದ ಪ್ರಶಸ್ತಿ’ಯನ್ನು ಪಾರ್ವತಿ ಸ್ತ್ರೀಶಕ್ತಿ ಸ್ವಸಹಾಯ ಸಂಘ (ಚಿತ್ರದುರ್ಗ), ಶ್ರೀ ಗೌತಮ ಬುದ್ಧ ಮಹಿಳಾ ಸ್ತ್ರೀಶಕ್ತಿ ಸ್ವಸಹಾಯ ಸಂಘ (ಮೈಸೂರು), ನೀಲಾಂಬಿಕೆ ಸ್ತ್ರೀಶಕ್ತಿ ಸ್ವಸಹಾಯ ಸಂಘ (ಬಾಗಲಕೋಟೆ) ಹಾಗೂ ಶ್ರೀ ಶಕ್ತಿ ಮಲ್ಲಿಕಾರ್ಜುನ ಮಹಿಳಾ ಸ್ವಸಹಾಯ ಸಂಘಕ್ಕೆ (ಕಲಬುರಗಿ) ಪ್ರದಾನ ಮಾಡಲಾಯಿತು.

## ನಿಖಿಲ್‌ಗೆ ಹೊಸ ಜವಾಬ್ದಾರಿ: ದೇವೇಗೌಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನಿಖಿಲ್ ಕುಮಾರಸ್ವಾಮಿ ಅವರಿಗೆ ಹೊಸ ಜವಾಬ್ದಾರಿ ನೀಡುತ್ತಿದ್ದೇವೆ. ಅವರು ರಾಜ್ಯದ ಉದ್ದಗಲಕ್ಕೂ ಓಡಾಡಿ ಪಕ್ಷವನ್ನು ಕಟ್ಟಬೇಕು. ಮಹಿಳಾ ಸಮಾವೇಶಗಳನ್ನು ನಡೆಸಬೇಕು’ ಎಂದು ಜೆಡಿಎಸ್ ಮುಖ್ಯಸ್ಥ ಎಚ್.ಡಿ.ದೇವೇಗೌಡ ಹೇಳಿದರು.


ಎಚ್.ಡಿ. ದೇವೇಗೌಡ

ಪಕ್ಷದ ಕಚೇರಿಯಲ್ಲಿ ಶನಿವಾರ ಆಯೋಜಿಸಲಾಗಿದ್ದ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಪಕ್ಷದ ವತಿಯಿಂದ ಕನಿಷ್ಠ 50 ಮಹಿಳಾ ಸಮಾವೇಶಗಳನ್ನು ನಡೆಸಬೇಕು. ಅದಕ್ಕೆ ಬೇಕಿರುವ ಹಣವನ್ನು ಭಿಕ್ಷೆ ಬೇಡಿಯಾದರೂ ತರುತ್ತೇವೆ. ಸಮಾವೇಶ ನಡೆಸಬೇಕು’ ಎಂದು ನಿಖಿಲ್ ಅವರನ್ನು ಉದ್ದೇಶಿಸಿ ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳಾ ಸಬಲೀಕರಣಕ್ಕೆ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ನಾವೂ ಮಹಿಳಾ ಸಬಲೀಕರಣಕ್ಕೆ ದುಡಿಯಬೇಕು. ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಪಕ್ಷದಿಂದ 80 ಮಹಿಳೆಯರು ಚುನಾವಣೆಗೆ ನಿಲ್ಲಬೇಕು’ ಎಂದರು.

ಮಧ್ಯಪ್ರದೇಶ, ರಾಜಸ್ಥಾನದಲ್ಲಿ ಉತ್ಪಾದನೆ ಹೆಚ್ಚಳ • ತಗ್ಗಿದ ಚಿಲ್ಲರೆ ಧಾರಣೆ • ಗ್ರಾಹಕರು ನಿರಾಳ

# ಹೆಚ್ಚಿದ ಆವಕ: ಬೆಳ್ಳುಳ್ಳಿ ದರ ಕುಸಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ಬೆಲೆ ಇಳಿಕೆಯಾಗಿದ್ದು, ಗ್ರಾಹಕರು ನಿರಾಳರಾಗಿದ್ದಾರೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಬೆಳ್ಳುಳ್ಳಿ ಚಿಲ್ಲರೆ ದರವು ಕೆ.ಜಿಗೆ ₹500 ದಾಟಿತ್ತು. ಇದರಿಂದ ಗ್ರಾಹಕರ ಜೇಬಿಗೆ ಹೊರೆಯಾಗಿತ್ತು. ಸದ್ಯ ಇಲ್ಲಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸಗಟು ದರ ಕೆ.ಜಿಗೆ ₹50ರಿಂದ ₹100 ಇದ್ದರೆ, ಚಿಲ್ಲರೆ ದರವು ಕೆ.ಜಿಗೆ ₹120ರಿಂದ ₹140 ಇದೆ.

ದೇಶದ ಒಟ್ಟು ಬೆಳ್ಳುಳ್ಳಿ ಉತ್ಪಾದನೆ ಪೈಕಿ ಮಧ್ಯಪ್ರದೇಶದಲ್ಲಿ ಶೇ 70ರಷ್ಟು ಉತ್ಪಾದನೆಯಾಗುತ್ತದೆ. ಉಳಿದಂತೆ ರಾಜಸ್ಥಾನ, ಗುಜರಾತ್ ಮತ್ತು ಉತ್ತರ ಪ್ರದೇಶದಲ್ಲಿ ರೈತರು ಹೆಚ್ಚಾಗಿ ಬೆಳೆಯುತ್ತಾರೆ.

ಕಳೆದ ವರ್ಷ ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಮಳೆಯಿಂದಾಗಿ ಬೆಳೆ ಹಾನಿಗೀಡಾಗಿತ್ತು. ಈ ಬಾರಿ ಅಲ್ಲಿ ಉತ್ಪಾದನೆ ಹೆಚ್ಚಿದೆ. ಇದರಿಂದ ಕರ್ನಾಟಕದ ಮಾರುಕಟ್ಟೆಗಳಿಗೆ ಆವಕ ಹೆಚ್ಚಾಗುತ್ತಿದೆ. ಹಾಗಾಗಿ, ಬೆಳ್ಳುಳ್ಳಿ ದರ ಇಳಿಕೆಯಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಸದ್ಯ ಮಧ್ಯಪ್ರದೇಶದಲ್ಲಿ ಕೊಯ್ಲು ಶುರುವಾಗಿದೆ. ಅಲ್ಲಿಂದ ಬೆಂಗಳೂರಿನ ಯಶವಂತಪುರದ ಎಪಿಎಂಸಿಗೆ ಪ್ರತಿದಿನ 8 ಸಾವಿರದಿಂದ 10 ಸಾವಿರ ಚೀಲ (ಪ್ರತಿ ಚೀಲ 50 ಕೆ.ಜಿ) ಬೆಳ್ಳುಳ್ಳಿ ಆವಕ ಆಗುತ್ತದೆ. ಇಲ್ಲಿಂದ ಮಂಡ್ಯ, ಮೈಸೂರು, ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗೂ ಪೂರೈಕೆಯಾಗುತ್ತದೆ. ಅಲ್ಲದೆ, ನೆರೆಯ ತಮಿಳುನಾಡಿಗೂ ರವಾನೆಯಾಗುತ್ತದೆ.

'ಕಳೆದ ವರ್ಷ ರಾಜಸ್ಥಾನದಲ್ಲಿ ಮಳೆಯಿಂದಾಗಿ ಹೆಚ್ಚು ಬೆಳೆ ನಷ್ಟವಾಗಿತ್ತು. ಈ ಬಾರಿ ಅಲ್ಲಿನ ಸರ್ಕಾರ ಅಂದಾಜಿಸಿದ್ದಕ್ಕಿಂತಲೂ ಮೂರು ಪಟ್ಟು ಹೆಚ್ಚು ಉತ್ಪಾದನೆಯಾಗಿದೆ. ಸದ್ಯ ಮಧ್ಯಪ್ರದೇಶದಿಂದ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಂಗಳೂರಿನ ಮಾರುಕಟ್ಟೆಗೆ ಬೆಳ್ಳುಳ್ಳಿ ಆವಕವಾಗುತ್ತಿದೆ. ಇದರಿಂದ ಬೆಲೆ ಇಳಿಕೆಯಾಗಿದೆ' ಎಂದು ಗುಜರಾತ್ ಟ್ರೇಡರ್ಸ್‌ನ ವರ್ತಕ ಜುಬೇರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಳ್ಳುಳ್ಳಿ ಬೆಳೆಯುವ ರಾಜ್ಯಗಳಲ್ಲಿ ಈ ಬಾರಿ ಉತ್ಪಾದನೆ ಹೆಚ್ಚಿದ್ದು, ಪೂರೈಕೆಯಲ್ಲಿ ವ್ಯತ್ಯಯ ಆಗುವುದಿಲ್ಲ. ಹಾಗಾಗಿ, ಸಗಟು ಮತ್ತು ಚಿಲ್ಲರೆ ಬೆಲೆಯು ಸ್ಥಿರವಾಗಿರಲಿದೆ' ಎಂದು ಹೇಳಿದರು.

### ಬಾಂಗ್ಲಾಕ್ಕೆ ರಫ್ತು ಶುರು

ಭಾರತದಲ್ಲಿ ಬೆಳೆಯುವ ಬೆಳ್ಳುಳ್ಳಿಯು ಬಾಂಗ್ಲಾದೇಶ, ಮಲೇಷ್ಯಾ, ವಿಯೆಟ್ನಾಂ ಹಾಗೂ ಶ್ರೀಲಂಕಾಕ್ಕೂ ರಫ್ತಾಗುತ್ತದೆ. ಪ್ರಸ್ತುತ ಮಧ್ಯಪ್ರದೇಶದಿಂದ ಬಾಂಗ್ಲಾಕ್ಕೆ ರಫ್ತು ಆರಂಭವಾಗಿದೆ. ಉತ್ಪಾದನೆ ಹೆಚ್ಚಿರುವುದರಿಂದ ಇದು ದೇಶೀಯ ಮಾರುಕಟ್ಟೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎನ್ನುತ್ತಾರೆ ವ್ಯಾಪಾರಿಗಳು.



ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ರಾಶಿ

### ಅನ್ನದಾತರ ನೆಮ್ಮದಿಗೆ ಬರಸಿಡಿಲು

**ವಿಜಯಪುರ:** ಕಳೆದ ಮುಂಗಾರು ಹಂಗಾಮಿನಡಿ ಕ್ವಿಂಟಲ್ ಬೆಳ್ಳುಳ್ಳಿಗೆ ₹35 ಸಾವಿರ ದರ ಇತ್ತು. ಹಾಗಾಗಿ, ಹಿಂಗಾರಿನಲ್ಲಿಯೂ ರೈತರು ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಮಾಡಿದ್ದರು. ಇದೀಗ ಕೊಯ್ಲು ಆರಂಭವಾಗಿದೆ.

ಪ್ರಸ್ತುತ ಕ್ವಿಂಟಲ್‌ಗೆ ₹7 ಸಾವಿರದಿಂದ ₹8 ಸಾವಿರ ದರವಿದೆ. ಧಾರಣೆ ಇಳಿಕೆ ಆಗಿರುವುದರಿಂದ ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ.

ನಿಡಗುಂದಿಯ ಮುದ್ದೇಬಿಹಾಳ ಆವರಣದಲ್ಲಿ ಬೆಳ್ಳುಳ್ಳಿ ಮಾರಾಟ ಕೇಂದ್ರವಾಗಿದೆ. ಪ್ರತಿ ಬುಧವಾರ ಮತ್ತು ಶನಿವಾರ ಇಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳ್ಳುಳ್ಳಿ ವಹಿವಾಟು ನಡೆಯುತ್ತದೆ. ಕನಿಷ್ಠ 500ರಿಂದ 1,000 ಕ್ವಿಂಟಲ್‌ವರೆಗೆ ಆವಕವಾಗುತ್ತದೆ.

ನೆರೆಯ ಬಾಗಲಕೋಟೆ, ಗದಗ, ಹುಬ್ಬಳ್ಳಿ, ದಾವಣಗೆರೆ ಸೇರಿ ವಿವಿಧೆಡೆಯಿಂದ ಸಗಟು ವ್ಯಾಪಾರಿಗಳು ಇಲ್ಲಿಗೆ ಬಂದು ಖರೀದಿಸುತ್ತಾರೆ. ಅಲ್ಲದೆ, ಜಿಲ್ಲೆಯ ರೈತರು ನೆರೆಯ ಜಿಲ್ಲೆಗಳ ಮಾರುಕಟ್ಟೆಗೆ ಒಯ್ದು ಮಾರುತ್ತಾರೆ.

'2.5 ಎಕರೆಯಲ್ಲಿ ಸುಮಾರು ₹1.5 ಲಕ್ಷ ಖರ್ಚು ಮಾಡಿ ಜವಾರಿ ಬೆಳ್ಳುಳ್ಳಿ ಬಿತ್ತನೆ ಮಾಡಿದ್ದೆ, 40 ಕ್ವಿಂಟಲ್‌ಗೂ ಅಧಿಕ ಇಳುವರಿ ಬಂದಿತ್ತು. ಜನವರಿಯಲ್ಲಿ ಗದಗ, ಹಾವೇರಿ, ದಾವಣಗೆರೆ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿದ್ದೆ, ಆಗ ಕ್ವಿಂಟಲ್‌ಗೆ ₹14 ಸಾವಿರದಿಂದ ₹18 ಸಾವಿರದವರೆಗೆ ದರ ಸಿಕ್ಕಿತ್ತು. ಈಗ ಇಳಿಕೆಯಾಗಿದೆ' ಎನ್ನುತ್ತಾರೆ ಬಸವನ ಬಾಗೇವಾಡಿ ತಾಲ್ಲೂಕಿನ ಕಣಕಾಲ ಗ್ರಾಮದ ರೈತ ಶ್ರೀಶೈಲ ದಿನ್ನಿ.

**ಸ್ಥಳೀಯ ಮಾರುಕಟ್ಟೆಗೆ ಹೊರ ರಾಜ್ಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಬೆಳ್ಳುಳ್ಳಿ ಆವಕವಾಗುತ್ತಿದೆ. ಇದರಿಂದ ರಾಜ್ಯದ ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ**

**ಶ್ರೀಶೈಲ ದಿನ್ನಿ,** ರೈತ, ಕಣಕಾಲ, ಬಸವನ ಬಾಗೇವಾಡಿ ತಾಲ್ಲೂಕು

**ಹಾವೇರಿ ಮಾರುಕಟ್ಟೆಯಲ್ಲಿ ಹೈಬ್ರಿಡ್ ದಪ್ಪ ಬೆಳ್ಳುಳ್ಳಿ ದರ ಕ್ವಿಂಟಲ್‌ಗೆ ₹6,000 ಇದೆ. ಜವಾರಿ ಬೆಳ್ಳುಳ್ಳಿಗೆ ₹7,000 ದರ ಇದೆ**

**ಶಿವಪ್ಪ ಬನ್ನಿಹಟ್ಟಿ,** ವರ್ತಕ, ಹಾವೇರಿ

### ಜವಾರಿ ಬೆಳ್ಳುಳ್ಳಿ ಬೆಲೆ ಇಳಿಕೆ

**ಹುಬ್ಬಳ್ಳಿ:** ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಗುಡಿಗೇರಿ, ಕಳಸ, ಪಶುಪತಿಹಳ್ಳಿ, ಹರ್ಲಾಪುರ, ಸಂಕ್ಲಿಪುರ ಮತ್ತು ಸುಲ್ತಾನ್‌ಪುರ ಭಾಗದ 100 ಹೆಕ್ಟೇರ್‌ನಲ್ಲಿ ಬೆಳ್ಳುಳ್ಳಿ ಬೆಳೆಯಲಾಗಿದೆ.

'ಗದಗ ಮಾರುಕಟ್ಟೆಯಲ್ಲಿ ಜವಾರಿ ಬೆಳ್ಳುಳ್ಳಿ ದರವು ಕ್ವಿಂಟಲ್‌ಗೆ ₹6 ಸಾವಿರದಿಂದ ₹7 ಸಾವಿರ ಇದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಕ್ವಿಂಟಲ್‌ಗೆ ₹25 ಸಾವಿರ ಬೆಲೆ ಇತ್ತು. ಹೈಬ್ರಿಡ್ ಬೆಳ್ಳುಳ್ಳಿ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಆಗುತ್ತಿದೆ. ಇದರಿಂದ ಜವಾರಿ ಬೆಳ್ಳುಳ್ಳಿ ದರ ಕಡಿಮೆಯಾಗಿದೆ' ಎಂದು ಕುಂದಗೋಳ ತಾಲ್ಲೂಕಿನ ಗುಡಿಗೇರಿಯ ಬೆಳೆಗಾರ ಗಂಗಾಧರ ಗಿರಿಮಲ್ಲ 'ಪ್ರಜಾವಾಣಿ'ಗೆ ತಿಳಿಸಿದರು.

ಹುಬ್ಬಳ್ಳಿಯ ಅಮರಗೋಳದ ಎಪಿಎಂಸಿ ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ಸಗಟು ದರ ಇಳಿದಿದೆ. ಜವಾರಿ ಬೆಳ್ಳುಳ್ಳಿ ದರ ಕೆ.ಜಿಗೆ ₹80ರಿಂದ ₹100 ಇದ್ದರೆ, ಹೈಬ್ರಿಡ್ ಬೆಳ್ಳುಳ್ಳಿ ದರ ಕೆ.ಜಿ ₹60ಕ್ಕೆ ಇಳಿದಿದೆ. ಎರಡು ತಿಂಗಳ ಹಿಂದೆ ಜವಾರಿ ಬೆಳ್ಳುಳ್ಳಿ ದರ ₹100ರಿಂದ ₹120 ಹಾಗೂ ಹೈಬ್ರಿಡ್ ಬೆಳ್ಳುಳ್ಳಿ ಬೆಲೆಯು ₹60ರಿಂದ ₹80 ಇತ್ತು.

### ಬೆಳೆಗಾರರಿಗೆ ಬೇಸರ

**ಹಾವೇರಿ:** ಜಿಲ್ಲೆಯ ವಿವಿಧೆಡೆ ರೈತರು ಬೆಳ್ಳುಳ್ಳಿ ಬೆಳೆದಿದ್ದಾರೆ. ಆದರೆ, ದರ ಕುಸಿತಗೊಂಡಿರುವುದು ಅವರಲ್ಲಿ ಬೇಸರ ಮೂಡಿಸಿದೆ.

ಹಾವೇರಿ ಮಾರುಕಟ್ಟೆ ಮತ್ತು ರಾಣೆಬೆನ್ನೂರು ಎಪಿಎಂಸಿ ಉಪ ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ವಹಿವಾಟು ನಡೆಯುತ್ತದೆ. ಎರಡು ತಿಂಗಳ ಹಿಂದೆ ಹೈಬ್ರಿಡ್ ಬೆಳ್ಳುಳ್ಳಿ ದರವು ಕ್ವಿಂಟಲ್‌ಗೆ ₹34 ಸಾವಿರದಿಂದ ₹37 ಸಾವಿರ ಇತ್ತು. ಈಗ ಕ್ವಿಂಟಲ್‌ಗೆ ₹3 ಸಾವಿರದಿಂದ ₹3,500ಕ್ಕೆ ಇಳಿದಿದೆ.

### ಒಂದು ಕ್ವಿಂಟಲ್‌ಗೆ ₹6 ಸಾವಿರ

**ಗದಗ:** ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ರಾಮಗೇರಿ, ಬಸಾಪುರ, ಮಾಗಡಿ, ಯಳವತ್ತಿ, ಯತ್ನಳ್ಳಿ, ಮಾಡಳ್ಳಿ ಭಾಗದಲ್ಲಿ ಸುಮಾರು 200 ಎಕರೆಯಲ್ಲಿ ಬೆಳ್ಳುಳ್ಳಿ ಬೆಳೆಯಲಾಗಿದೆ. ಪ್ರತಿ ವರ್ಷ ಇಷ್ಟೇ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ' ಎಂಬುದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಶಶಿಕಾಂತ ಕೋಟಿಮನಿ ಅವರ ವಿವರಣೆ.

'ಜಿಲ್ಲೆಯಲ್ಲಿ ಎರಡು ತಿಂಗಳ ಹಿಂದೆ ಬೆಳ್ಳುಳ್ಳಿ ದರ ಕ್ವಿಂಟಲ್‌ಗೆ ₹30 ಸಾವಿರದಿಂದ ₹40 ಸಾವಿರ ಇತ್ತು. ಸದ್ಯ ₹5 ಸಾವಿರದಿಂದ ₹6 ಸಾವಿರ ಇದೆ. ಇನ್ನು ಎರಡು ವಾರ ಕಳೆದರೆ ಮತ್ತೆ ದರ ಏರಿಕೆಯಾಗಬಹುದು' ಎನ್ನುತ್ತಾರೆ ವ್ಯಾಪಾರಿ ಮಾಳಗಿಮನಿ.

# ಮಹಿಳಾ ಉದ್ಯಮಿಗಳಿಗೆ 'ಅಸ್ಮಿತಾ' ಸಾಲ

**ಮುಂಬೈ (ಪಿಟಿಐ):** ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) ಮಹಿಳಾ ಉದ್ಯಮಿಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲು 'ಅಸ್ಮಿತಾ' ಯೋಜನೆಗೆ ಚಾಲನೆ ನೀಡಿದೆ.

ಇದರಡಿ ಯಾವುದೇ ಭದ್ರತೆ ಇಲ್ಲದೆ (ಅಡಮಾನರಹಿತ) ಸಾಲ ದೊರೆಯಲಿದೆ. ಮಹಿಳಾ ಸಬಲೀಕರಣದ ದೃಷ್ಟಿಯಿಂದ ಇದನ್ನು ಜಾರಿಗೊಳಿಸಲಾಗುತ್ತಿದೆ ಎಂದು ಬ್ಯಾಂಕ್ ತಿಳಿಸಿದೆ.

ದೇಶದಲ್ಲಿ ವ್ಯಾಪಾರ ಚಟುವಟಿಕೆಗಳಿಗೆ ಕಡಿಮೆ ಸಂಖ್ಯೆಯಲ್ಲಿ ಮಹಿಳೆಯರಿಗೆ ಸಾಲ ಸೌಲಭ್ಯ ದೊರೆಯುತ್ತಿದೆ ಎಂದು ಟ್ರಾನ್ಸ್ ಯೂನಿಯನ್ ಸಿಬಿಲ್ ಸಂಸ್ಥೆಯ ವರದಿ ಹೇಳಿದೆ. ಉದ್ದಿಮೆ ಸ್ಥಾಪನೆಯ ಉದ್ದೇಶಕ್ಕೆ ಸಾಲ ಪಡೆಯುವ ಮಹಿಳೆಯರ ಸಂಖ್ಯೆ ಶೇ 3ರಷ್ಟಿದೆ. ಶೇ 42ರಷ್ಟು ಮಹಿಳೆಯರು ವೈಯಕ್ತಿಕ ಸಾಲ ಮತ್ತು ಗೃಹೋಪಯೋಗಿ ವಸ್ತುಗಳ ಖರೀದಿಗೆ ಸಾಲ ಪಡೆಯುತ್ತಾರೆ. ಶೇ 38ರಷ್ಟು ಸ್ತ್ರೀಯರು ಚಿನ್ನದ ಮೇಲೆ ಸಾಲ ಪಡೆಯುತ್ತಾರೆ ಎಂದು ಹೇಳಿದೆ.

'ಹೊಸ ಯೋಜನೆಯಡಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಮುನ್ನಡೆಸುವ ಮಹಿಳೆಯರಿಗೆ ಸಾಲ ಸೌಲಭ್ಯ ಕಲ್ಪಿಸಲಾಗುತ್ತದೆ. ಡಿಜಿಟಲ್ ಹಾಗೂ ಬ್ಯಾಂಕ್‌ನಲ್ಲಿ ಸ್ವಯಂಪ್ರೇರಿತವಾಗಿ ಅರ್ಜಿ ಸಲ್ಲಿಸಿ ಸಾಲ ಪಡೆಯಬಹುದಾಗಿದೆ' ಎಂದು ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ತಿಳಿಸಿದ್ದಾರೆ.

ಅಲ್ಲದೆ, ಮಹಿಳೆಯರಿಗಾಗಿಯೇ ಬ್ಯಾಂಕ್‌ನಿಂದ 'ನಾರಿ ಶಕ್ತಿ' ಹೆಸರಿನ ರುಪೇ ಪ್ಲಾಟಿನಂ ಡೆಬಿಟ್ ಕಾರ್ಡ್ ಅನ್ನು ಬಿಡುಗಡೆ ಮಾಡಲಾಗಿದೆ.

# ವೃದ್ಧೆಗೆ ಗಾಲಿಕುರ್ಚಿ ನಿರಾಕರಿಸಿದ ಏರ್ ಇಂಡಿಯಾ

**ನವದೆಹಲಿ (ಪಿಟಿಐ):** ದೆಹಲಿ ವಿಮಾನ ನಿಲ್ದಾಣದಲ್ಲಿ ವೃದ್ಧೆಯೊಬ್ಬರಿಗೆ ಏರ್ ಇಂಡಿಯಾ ಕಂಪನಿಯ ಸಿಬ್ಬಂದಿ ಗಾಲಿಕುರ್ಚಿ ನಿರಾಕರಿಸಿರುವುದು ವರದಿಯಾಗಿದ್ದು, ಈ ಕುರಿತು ಆಕೆಯ ಮೊಮ್ಮಗಳು 'ಎಕ್ಸ್'ನಲ್ಲಿ ನೋವು ತೋಡಿಕೊಂಡಿದ್ದಾರೆ.

ಮಾರ್ಚ್ 4ರಂದು ಬೆಂಗಳೂರಿಗೆ ಪ್ರಯಾಣಿಸಲು ತನ್ನ ಮೊಮ್ಮಗಳೊಟ್ಟಿಗೆ ವೃದ್ಧೆ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. 82 ವರ್ಷದ ಅವರಿಗೆ ಅನುಕೂಲವಾಗಲೆಂದು ಗಾಲಿಕುರ್ಚಿ ಬುಕಿಂಗ್ ಮಾಡಲಾಗಿತ್ತು. ಆದರೆ, ವಿಮಾನದ ಸಿಬ್ಬಂದಿ ಗಾಲಿಕುರ್ಚಿ ಅಥವಾ ಅಗತ್ಯ ನೆರವು ಕಲ್ಪಿಸಲಿಲ್ಲ. ವಿಮಾನ ಹತ್ತಲು ನಡೆದು ಹೋಗುವಾಗ ಅವರು ಕುಸಿದು ಬಿದ್ದರು ಎಂದು ಹೇಳಲಾಗಿದೆ.

'ಈ ಕುರಿತು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಮತ್ತು ಏರ್ ಇಂಡಿಯಾಕ್ಕೂ ದೂರು ಸಲ್ಲಿಸಲಾಗಿದೆ. ಈ ಬಗ್ಗೆ ಯಾವ ಕ್ರಮಕೈಗೊಳ್ಳಲಾಗುತ್ತದೆ ಎಂಬುದನ್ನು ಎದುರು ನೋಡುತ್ತಿದ್ದೇನೆ' ಎಂದು ಮೊಮ್ಮಗಳು ತಿಳಿಸಿದ್ದಾರೆ.

**ಆರೋಪ ನಿರಾಕರಣೆ:** ಈ ಪ್ರಕರಣ ಕುರಿತು ತನಿಖೆ ನಡೆಸಲಾಗಿದೆ. ವಿಮಾನ ಪ್ರಯಾಣ ಆರಂಭಕ್ಕೂ 90 ನಿಮಿಷ ಮೊದಲು ಗಾಲಿಕುರ್ಚಿ ನೀಡುವಂತೆ ಮನವಿ ಸಲ್ಲಿಸಲಾಗಿದೆ. ಪ್ರಯಾಣಿಕರ ದಟ್ಟಣೆ ಹೆಚ್ಚಿರುವ ವೇಳೆ ಕೋರಿಕೆ ಮಂಡಿಸಲಾಗಿದೆ. 15 ನಿಮಿಷದೊಳಗೆ ಗಾಲಿಕುರ್ಚಿ ಕಲ್ಪಿಸಲು ಸಾಧ್ಯವಾಗಿಲ್ಲ. ಆದರೆ, ಒಂದು ಗಂಟೆ ವಿಳಂಬ ಮಾಡಲಾಗಿದೆ ಎಂಬ ಆರೋಪವು ಸತ್ಯಕ್ಕೆ ದೂರವಾದುದು ಎಂದು ಏರ್ ಇಂಡಿಯಾ ಕಂಪನಿ ಸ್ಪಷ್ಟನೆ ನೀಡಿದೆ.


**KARNATAKA STATE ELECTRONICS DEVELOPMENT CORPORATION LTD.,** KEONICS ISO 9001 : 2008

(A Government of Karnataka Enterprises)

Floor No 1, No 59, Kumara Park West Extension, Railway Parallel Road, Seshadri Puram, Bangalore 560020. Ph: +91-80-22225645 | info@keonics.com | www.keonics.in

**RECRUITMENT NOTIFICATION FOR APPOINTMENT OF INDIVIDUAL CONSULTANTS**

KEONICS (a Government of Karnataka undertaking) was established in 1976 to promote rapid growth of electronics in Karnataka. Currently, KEONICS is into Information Technology (IT) services, IT manpower services, IT upskilling services and IT infrastructure development. KEONICS is transforming its service delivery mechanism and process to offer premium IT services in the G2G space. To champion this transformation and its continued operations, KEONICS is recruiting the following Individual Consultants on contract basis for a period of two (2) years. Remuneration will be as per industry standards.

| Sl. No. | Designation & Number of Posts | Minimum Educational Qualification | Minimum Experience |
|---|---|---|---|
| 1 | Procurement Consultant (01 post) | • BSc / BE / B.Tech / M.Tech / MCA / MBA • Degree /Diploma /Certification in Public Procurement | • 10 years of total experience • 5 years of public procurement experience in Govt departments/PSU • Knowledge of the KTPP Acts, Rules and Karnataka e-Procurement portal • Detailed job description can be found in www.keonics.com |
| 2 | Contract Mgmt. Consultant (01 post) | • BSc / BE / B.Tech / M.Tech / MCA / MBA • Degree /Diploma /Certification in Contract Management | • 10 years of total experience • 5 years of contract management and SLA management experience in Govt departments/PSU • Knowledge of the KTPP Acts, Rules and Karnataka eProcurement portal • Detailed job description can be found in www.keonics.com |
| 3 | Financial Consultant (01 post) | • BCom /BBM / MBA from a recognized University / Institute | • 20 years of total experience with 10 years of work experience in a senior position in State Accounts Department or Indian Audit and Accounts Department with adequate experience in commercial and public sector / government organization handling finance, planning, budgeting, preparation of financial statements, Audit, etc • Maximum Age: 62 Years as on the date of advertisement • Detailed job description can be found in www.keonics.com |

Eligible candidates for the above positions are invited to submit their applications via email to the Managing Director, KEONICS, by 15th March 2025. Applications should include a detailed Curriculum Vitae, self-attested copies of qualifications, and with relevant proof of experience. Applicants are requested to send their signed application in PDF format to **info@keonics.com.**

**Sd/- Managing Director, KEONICS, Bengaluru**


# ಸುಂಕ ಕಡಿತಕ್ಕೆ ಭಾರತ ಒಪ್ಪಿದೆ: ಟ್ರಂಪ್

**ಒಂದನೇ ಪುಟದಿಂದ...**

'ಆರ್ಥಿಕ ಮತ್ತು ವ್ಯಾಪಾರದ ದೃಷ್ಟಿಯಿಂದ ವಿಶ್ವದ ಬಹುತೇಕ ದೇಶಗಳು ನಮ್ಮ ದೇಶವನ್ನು ಸುಲಿಗೆ ಮಾಡಿವೆ. ಕೆನಡಾ, ಮೆಕ್ಸಿಕೊ, ಭಾರತ ಸೇರಿದಂತೆ ಕೆಲ ದೇಶಗಳು ನಮ್ಮ ಮೇಲೆ ಅತ್ಯಧಿಕ ಸುಂಕ ವಿಧಿಸಿವೆ. ಭಾರತದಲ್ಲಂತೂ ನಾವು ಏನನ್ನೂ ಮಾರಲು ಸಾಧ್ಯವಿಲ್ಲದಂತಾಗಿದೆ. ಈ ಮೂಲಕ ಅದು ನಮ್ಮ ಬಹುತೇಕ ಉತ್ಪನ್ನಗಳನ್ನು ನಿರ್ಬಂಧಿಸಿದಂತಿದೆ. ಹೀಗಾಗಿ ನಾವು ಭಾರತದ ಜತೆಗೆ ಅತಿ ಕಡಿಮೆ ವ್ಯವಹಾರ ನಡೆಸುತ್ತೇವೆ' ಎಂದು ಅವರು ಹೇಳಿದರು.

ಅಮೆರಿಕಕ್ಕೆ ಭೇಟಿ ನೀಡಿದ್ದ ಭಾರತದ ವಾಣಿಜ್ಯ ಸಚಿವ ಪೀಯೂಷ್ ಗೋಯೆಲ್ ಅವರು ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲುಟ್ನಿಕ್ ಅವರ ಜತೆ ಮಾತುಕತೆ ನಡೆಸಿದ ಬೆನ್ನಲ್ಲೇ ಟ್ರಂಪ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

ಏ. 2ರಿಂದ ಭಾರತದ ಉತ್ಪನ್ನಗಳ ಮೇಲೆ ಪ್ರತಿ ಸುಂಕ ಹಾಕುವುದಾಗಿ ಅವರು ಗುರುವಾರವೂ ಹೇಳಿದ್ದರು.

**'ರಷ್ಯಾದ ರಕ್ಷಣಾ ಸಾಮಗ್ರಿ ಖರೀದಿ ನಿಲ್ಲಿಸಬೇಕು':** 'ಭಾರತವು ಅಮೆರಿಕದ ಸರಕುಗಳ ಮೇಲಿನ ಸುಂಕವನ್ನು ಇಳಿಸುವ ಜೊತೆಗೆ, ರಷ್ಯಾದ ರಕ್ಷಣಾ ಉಪಕರಣಗಳನ್ನು ಖರೀದಿಸುವುದನ್ನು ನಿಲ್ಲಿಸಬೇಕು' ಎಂದು ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲುಟ್ನಿಕ್ ಹೇಳಿದ್ದಾರೆ.

'ಇಂಡಿಯಾ ಟುಡೆ' ಸುದ್ದಿವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾಗಿ ರಾಯಿಟರ್ಸ್ ವರದಿ ಮಾಡಿದೆ.

'ಹಲವು ದಶಕಗಳಿಂದ, ಭಾರತವು ರಷ್ಯಾದಿಂದ ಭಾರಿ ಪ್ರಮಾಣದಲ್ಲಿ ರಕ್ಷಣಾ ಉಪಕರಣಗಳನ್ನು ಖರೀದಿಸುತ್ತಾ ಬಂದಿದೆ. ಈಗ ಈ ಖರೀದಿಯನ್ನು ನಿಲ್ಲಿಸಿ, ಅಮೆರಿಕ ಉತ್ಪಾದಿಸುವ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಭಾರತ ಖರೀದಿಸಬೇಕು' ಎಂದು ಹೋವರ್ಡ್ ಹೇಳಿದ್ದಾರೆ.

### 'ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ'

ಜೈರಾಮ್

**ನವದೆಹಲಿ:** 'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಯಾವುದಕ್ಕೆ ಒಪ್ಪಿಗೆ ಸೂಚಿಸಿದೆ? ಭಾರತದ ರೈತರು ಮತ್ತು ಉತ್ಪಾದಕರ ಹಿತದ ಜತೆ ರಾಜೀ ಮಾಡಿಕೊಂಡಿದೆಯೇ? ಈ ಕುರಿತು ಪ್ರಧಾನಿ ಅವರು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

ಭಾರತವು ಸುಂಕ ಕಡಿತಕ್ಕೆ ಸಮ್ಮತಿಸಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರುವ ವಿಡಿಯೊವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಅವರು, 'ವಾಣಿಜ್ಯ ಸಚಿವ ಪೀಯೂಷ್ ಗೋಯೆಲ್ ಅವರು ಅಮೆರಿಕದ ಜತೆ ವ್ಯಾಪಾರ ಕುರಿತು ಮಾತುಕತೆ ನಡೆಸಲು ವಾಷಿಂಗ್ಟನ್‌ಗೆ ಭೇಟಿ ನೀಡಿದ ಬೆನ್ನಲ್ಲೇ ಟ್ರಂಪ್ ಅವರು ಹೀಗೆ ಹೇಳಿದ್ದಾರಲ್ಲ...' ಎಂದು ಹೇಳಿದ್ದಾರೆ.

ಸಂಸತ್ತಿನ ಅಧಿವೇಶನ ಇದೇ 10ರಿಂದ ಪುನರಾರಂಭವಾಗಲಿದೆ. ಹೀಗಾಗಿ ಪ್ರಧಾನಿ ಅವರು ಈ ವಿಷಯ ಕುರಿತು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

### ದ್ವಿಪಕ್ಷೀಯ ಒಪ್ಪಂದಕ್ಕೆ ಒತ್ತು: ಭಾರತ

**ನವದೆಹಲಿ (ಪಿಟಿಐ):** 'ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಅಡಿಯಲ್ಲಿ ಸುಂಕ ಮತ್ತು ಇತರ ಅಡೆತಡೆಗಳನ್ನು ಕಡಿಮೆ ಮಾಡುವ ಮೂಲಕ ಭಾರತವು ಅಮೆರಿಕದ ಜತೆಗೆ ಆಳವಾದ ವ್ಯಾಪಾರ ಸಂಬಂಧ ಹೊಂದಲು ಬಯಸುತ್ತದೆ' ಎಂದು ಭಾರತ ತಿಳಿಸಿದೆ.

ಅಮೆರಿಕಕ್ಕೆ ಭೇಟಿ ನೀಡಿರುವ ವಾಣಿಜ್ಯ ಸಚಿವ ಪೀಯೂಷ್ ಗೋಯೆಲ್ ಅವರು ಎರಡೂ ದೇಶಗಳ ನಡುವಿನ ಬಹು ವಲಯಗಳ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

**ಸಂಕ್ಷಿಪ್ತ ಸುದ್ದಿ**

### ಸ್ಪೈಸ್‌ಜೆಟ್ ವಿರುದ್ಧ ದಿವಾಳಿ ಪ್ರಕ್ರಿಯೆಗೆ ಅರ್ಜಿ

**ನವದೆಹಲಿ (ಪಿಟಿಐ):** ಸ್ಪೈಸ್‌ಜೆಟ್ ವಿಮಾನಯಾನ ಕಂಪನಿ ವಿರುದ್ಧ ದಿವಾಳಿ ಪ್ರಕ್ರಿಯೆ ಆರಂಭಿಸಲು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ) ಅರ್ಜಿ ಸಲ್ಲಿಸಲಾಗಿದೆ.

ಐರ್ಲೆಂಡ್ ಮೂಲದ ವಿಮಾನ ಗುತ್ತಿಗೆದಾರ ಕಂಪನಿಗಳಾದ ಎನ್‌ಜಿಎಫ್ ಆಲ್ಫಾ, ಎನ್‌ಜಿಎಫ್ ಜೆನೆಸಿಸ್, ಎನ್‌ಜಿಎಫ್ ಚಾರ್ಲಿ ಹಾಗೂ ಮಾಜಿ ಪೈಲಟ್‌ವೊಬ್ಬರು ಈ ಅರ್ಜಿ ಸಲ್ಲಿಸಿದ್ದಾರೆ. ಕಂಪನಿಯು ₹110 ಕೋಟಿ ಬಾಕಿ ಉಳಿಸಿಕೊಂಡಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಅರ್ಜಿಯ ವಿಚಾರಣೆ ವೇಳೆ ಈ ಪ್ರಕರಣದ ಇತ್ಯರ್ಥ ಸಂಬಂಧ ಮಾತುಕತೆ ನಡೆಸಲು ಸ್ಪೈಸ್‌ಜೆಟ್ ಕಂಪನಿಯು ಸಮಯಾವಕಾಶ ಕೇಳಿದೆ.

ಮುಂದಿನ ವಿಚಾರಣೆಯನ್ನು ನ್ಯಾಯಮಂಡಳಿಯು ಏಪ್ರಿಲ್ 7ಕ್ಕೆ ಮುಂದೂಡಿದೆ.

### ಪುತ್ರಿಗೆ ಶೇ 47ರಷ್ಟು ಷೇರು ಉಡುಗೊರೆ ನೀಡಿದ ಶಿವ ನಾಡಾರ್

**ನವದೆಹಲಿ (ಪಿಟಿಐ):** ಎಚ್‌ಸಿಎಲ್ ಕಂಪನಿಯ ಸಂಸ್ಥಾಪಕ ಶಿವ ನಾಡಾರ್ ಅವರು, ಎಚ್‌ಸಿಎಲ್ ಹಾಗೂ ವಾಮಾ ದೆಹಲಿ ಕಂಪನಿಯಲ್ಲಿ ತಮಗೆ ಸೇರಿದ ಶೇ 47ರಷ್ಟು ಷೇರುಗಳನ್ನು ಪುತ್ರಿ ರೋಶನಿ ನಾಡಾರ್ ಮಲ್ಹೋತ್ರಾ ಅವರಿಗೆ ಉಡುಗೊರೆಯಾಗಿ ನೀಡಿದ್ದಾರೆ.

ರೋಶನಿ ಅವರನ್ನು ತಮ್ಮ ಮುಂದಿನ ಉತ್ತರಾಧಿಕಾರಿಯಾಗಿ ನೇಮಿಸುವ ದೃಷ್ಟಿಯಿಂದ ಅವರು ಈ ಷೇರುಗಳ ಉಡುಗೊರೆ ನೀಡಿದ್ದಾರೆ ಎಂದು ಹೇಳಲಾಗಿದೆ.

**ರಾಮನಗರ ರೇಷ್ಮೆಗೂಡು**

ಮಿಶ್ರತಳಿ (ಸಿ.ಬಿ) ₹150-676

ದ್ವಿತಳಿ (ಬಿ.ವಿ) ₹348-850

**ಎನ್.ಆರ್.ಪುರ ರಬ್ಬರ್**

ಆರ್‌ಎಸ್‌ಎಸ್-4 ₹190

ಆರ್‌ಎಸ್‌ಎಸ್-5 ₹185

ಗುಡ್ ಲಾಟ್ ₹179

(ಪ್ರತಿ ಕೆ.ಜಿಗೆ)

# ಜಿಎಸ್‌ಟಿ ದರ ಇಳಿಕೆ: ನಿರ್ಮಲಾ

**ಮುಂಬೈ (ಪಿಟಿಐ):** 'ಜಿಎಸ್‌ಟಿ ಅಡಿಯಲ್ಲಿರುವ ನಾಲ್ಕು ಸ್ಲ್ಯಾಬ್‌ಗಳು ಮತ್ತು 148 ವಸ್ತುಗಳ ಮೇಲಿನ ತೆರಿಗೆ ಪರಿಷ್ಕರಣೆ ಸಂಬಂಧ ರಚಿಸಿದ್ದ ಸಚಿವರ ಸಮಿತಿ ಸಿದ್ಧಪಡಿಸುತ್ತಿರುವ ವರದಿಯು ಅಂತಿಮ ಹಂತದಲ್ಲಿದೆ. ಶೀಘ್ರವೇ ಜಿಎಸ್‌ಟಿ ದರ ಮತ್ತಷ್ಟು ಇಳಿಕೆಯಾಗಲಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಶನಿವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 2017ರ ಜುಲೈ 1ರಂದು ಸರಕು ಮತ್ತು ಸೇವಾ ತೆರಿಗೆ ಜಾರಿಗೊಂಡ ವೇಳೆ ಜಿಎಸ್‌ಟಿ ವರಮಾನವು ಶೇ 15.8ರಷ್ಟಿತ್ತು. 2023ರಲ್ಲಿ ಶೇ 11.4ಕ್ಕೆ ಇಳಿದಿದೆ ಎಂದರು.

ಸಚಿವರ ಸಮಿತಿಯು ಉತ್ತಮವಾಗಿ ಕಾರ್ಯ ನಿರ್ವಹಿಸಿದೆ. ಸಮಿತಿಯು ಜಿಎಸ್‌ಟಿ ಮಂಡಳಿ ಸಭೆಯಲ್ಲಿ ವರದಿ ಮಂಡಿಸಲಿದೆ. ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಜಿಎಸ್‌ಟಿ ಮಂಡಳಿಯು ದರ ಸರಳೀಕರಣ ಮತ್ತು ಸ್ಲ್ಯಾಬ್ ಬದಲಾವಣೆಗೆ ಸಂಬಂಧಿಸಿದಂತೆ 2021ರ ಸೆಪ್ಟೆಂಬರ್‌ನಲ್ಲಿ ಆರು ಸಚಿವರ ಸಮಿತಿ ರಚಿಸಿತ್ತು.

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



ಬೆಂಗಳೂರು

100ಕ್ಕೆ ₹435

12 ಕ್ಕೆ ₹60

ಮೈಸೂರು

100ಕ್ಕೆ ₹430

**ಸುಧಾ ಓದಿರಿ**

# ಜೈಲಿನಿಂದ ಯೋಲ್ ಬಿಡುಗಡೆ

**ಸೋಲ್(ಎಪಿ):** ವಾಗ್ದಂಡನೆಗೆ ಗುರಿಯಾಗಿದ್ದ ದಕ್ಷಿಣ ಕೊರಿಯಾ ಮಾಜಿ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರನ್ನು ಜೈಲಿನಿಂದ ಶನಿವಾರ ಬಿಡುಗಡೆ ಮಾಡಲಾಗಿದೆ.

ಸೋಲ್ ಕೇಂದ್ರ ಜಿಲ್ಲಾ ನ್ಯಾಯಾಲಯವು, ಯೋಲ್ ಅವರ ಬಂಧನವನ್ನು ರದ್ದುಪಡಿಸಿ ಆದೇಶಿಸಿತ್ತು. ಜೊತೆಗೆ, ಬಂಧನಕ್ಕೆ ಒಳಗಾಗದೇ ಯೋಲ್ ಅವರು ವಿಚಾರಣೆ ಎದುರಿಸಲು ಸಹ ನ್ಯಾಯಾಲಯ ಅನುಮತಿ ನೀಡಿತ್ತು. ಈ ಬೆಳವಣಿಗೆಯ ಮಾರನೇ ದಿನವೇ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಗಿದೆ.

# ಸಿರಿಯಾ: 340 ನಾಗರಿಕರ ಹತ್ಯೆ

**ಡಮಾಸ್ಕಸ್ (ರಾಯಿಟರ್ಸ್):** ಕಳೆದೆರಡು ದಿನಗಳಲ್ಲಿ ಸಿರಿಯಾ ಭದ್ರತಾ ಪಡೆಗಳು ಹಾಗೂ ಸರ್ಕಾರ ಜೊತೆಗೆ ನಂಟು ಹೊಂದಿದ ಬಂದೂಕುಧಾರಿಗಳು ನಡೆಸಿದ ಗುಂಡಿನ ದಾಳಿಯಲ್ಲಿ 340 ನಾಗರಿಕರು ಮೃತಪಟ್ಟಿದ್ದಾರೆ. ಸತ್ತವರಲ್ಲಿ ಅಲ್ಪಸಂಖ್ಯಾತ ಸಮುದಾಯದ ಅಲಾವಿಟ್ ಸಮುದಾಯವರೇ ಹೆಚ್ಚಿದ್ದಾರೆ ಎಂದು ಸಿರಿಯಾದ ಮಾನವ ಹಕ್ಕುಗಳ ನಿಗಾ ಸಂಸ್ಥೆಯ ರಾಮಿ ಅಬ್ದುಲ್ ರಹಮಾನ್ ಶನಿವಾರ 'ರಾಯಿಟರ್ಸ್' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಸಾದ್ ಆಡಳಿತದಲ್ಲಿದ್ದ ಬಂಡುಕೋರರನ್ನು ಮಟ್ಟಹಾಕಲು ಸರ್ಕಾರ ಕೈಗೊಂಡಿರುವ ಕಾರ್ಯಾಚರಣೆಯಲ್ಲಿ ಜನರ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಸಿರಿಯಾದ ಮಾಧ್ಯಮಗಳು ವರದಿ ಮಾಡಿವೆ.


**ವಾಣಿಜ್ಯ ತೆರಿಗೆಗಳ ಇಲಾಖೆ**

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1, ಮಹಾಕವಿ ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು-560 009. ದೂರವಾಣಿ ಸಂಖ್ಯೆ: 080-22205239.

ಸಂಖ್ಯೆ: ವಾತೆಜಂಆ/ಮಾಸಂಅ/ಸಿಆರ್-12/2024-25 ದಿನಾಂಕ: 28-02-2025

**ಪ್ರಕಟಣೆ**

ವಾಣಿಜ್ಯ ತೆರಿಗೆಗಳ ಇಲಾಖೆಯು GST AMNESTY SCHEME (ಜಿಎಸ್‌ಟಿ ಕ್ಷಮಾದಾನ ಯೋಜನೆ) ಕಾಯ್ದೆಯಲ್ಲಿನ ವಿಷಯವನ್ನು ವರ್ತಕ ಸಮುದಾಯಕ್ಕೆ ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಮೂಡಿಸಲು 5 ವಿಡಿಯೋ ತುಣುಕುಗಳನ್ನು ಬಿಡುಗಡೆ ಮಾಡಿದ್ದು, ಈ ಯೋಜನೆಯ ಸದುಪಯೋಗ ಪಡೆಯಲು ತೆರಿಗೆ ಪಾವತಿದಾರರು 2017-18, 2018-2019 ಮತ್ತು 2019-2020ರ ತೆರಿಗೆ ಬಾಕಿ ಇರುವ ಆರ್ಥಿಕ ವರ್ಷಗಳಿಗೆ ವರ್ಷವಾರು ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಬಾಕಿ ಇರುವ ಪೂರ್ಣ ತೆರಿಗೆಯನ್ನು **31.03.2025ರೊಳಗೆ** ಪಾವತಿಸಿದ ನಂತರ, ನಿಗದಿತ ನಮೂನೆಯಲ್ಲಿ **GST Online Portal ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.06.2025,** ತದನಂತರ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲಾಗುವುದು ಎಂಬುದರ ಕುರಿತು ವಿಡಿಯೋ ತುಣುಕುಗಳನ್ನು You-tube CTD Karnataka ಹಾಗೂ ಇಲಾಖಾ ಜಾಲತಾಣ gst.kar.nic.in ನಲ್ಲಿ ವೀಕ್ಷಿಸಿ ವರ್ತಕ ಸಮುದಾಯದವರು GST AMNESTY SCHEMEನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸಿದೆ.

ಸಹಿ/-
ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು

ವಾಸಾಸಂಇ/ವಾ.ಪ್ರ/5405/ಎಂಎಎ/2024-25



**OFFICE OF THE REGISTRAR, CITY CIVIL COURT, BENGALURU**

F. No. ADM II 15/2025 (Housekeeping & Sanitation)
Tel: 080 22939220 E-mail: cccadm2gmail.com

CCC.ADM.II. 15/2025 (Housekeeping & Sanitation) Date: 07.03.2025

**e-TENDER NOTIFICATION**

This Office invites e-Bidding Request For Proposals (Quotations) in prescribed format to provide sanitization services for toilets and wash basins in the City Civil Courts and its units from eligible, interested Firms/Agencies/Operators having principal business at Bengaluru City only, through e-procurement portal **(https://kppp.karnataka.gov.in/#/portal/Auctions/live)** for a period of 3 years, renewable each year, from the date of commencement and extendable beyond, until the onboarding of next subsequent tender.

| Sl No. | Description of Manpower Supplied by the Agency | Designation | No.s |
|---|---|---|---|
| 1 | City Civil Court Complex, Near Kaveri Bhavan, Bengaluru | Supervisor | 1.00 |
| 2 | | Cleaner(3 Male & 3 Female (if available) | 6.00 |
| 3 | * Chief Judicial Magistrate Court Complex, Nrupathunga Road, * Mayo Hall Unit of City Civil Court, M.G.Road, Bengaluru * Commercial Court Unit of City Civil Court, Telephone Office, Bengaluru | Supervisor | 1.00 |
| 4 | | 2 Cleaners(1 Male &1 Female (if available) each at the 3 Units of City Civil Court | 6.00 |
| | Total | | 14 |

Tenders are invited for awarding contract for providing cleaning and sanitization services for toilets and wash basins, including the surfaces and walls of the Toilets and around the wash basins, in the following premises:

| Sl No. | Court Hall Complex / Unit | No's of Articles | | | |
|---|---|---|---|---|---|
| | | Wash Basins | Urinal Pods | Indian Commodes | Western Commodes |
| 1. | City Civil Court Complex Consisting of : * Main Bldg * Old Annex Bldg. * New Annex Bldg | 87 | 74 | 66 | 12 |
| 2. | City Judicial Magistrate Complex Consisting of : * Main Bldg * Old Annex Bldg. * New Annex Bldg | 30 | 61 | 23 | 17 |
| 3. | Mayo Hall Court Complex Consisting of : * Hertige Bldg * BBMP Bldg | 06 | 11 | 10 | 0 |
| 4. | Commercial Courts Complex at Telephone Bldg-2 Floors | 18 | 12 | 13 | |
| | **Total** | **141** | **158** | **141** | |

Cost to be submitted during Commercial Proposal bidding, inclusive of all charges and G.S.T : **1. Service charge on each Employees' monthly remuneration(i.e., Basic+VDA) and 2. Housekeeping Material monthly cost of all the 4 Units of City Civil Court** to be quoted separately (the cost of salaries & statutory benefit of manpower are already fixed, as per minimum wages and may be excluded in the commercial proposal) for cleaning, at least but not limited to Four times per day-each Unit of the above said article and area around it. No other cost to be entered.

1. Tender Number: **CCC.ADM.II. 15/2025 (Housekeeping & Sanitation) Dated: 07.03.2025**
2. Tender Number (as issued by KPPP): **HCK/2024-25/SE0041**
3. Tender Name/Services sought for: **Invitation for awarding contract to provide sanitization services for toilets and wash basins to the City Civil Court and it's Units of Bengaluru City.**
4. Procuring Entity: **The Registrar, City Civil Court, Bengaluru**
5. Validity of the Tender Contract: **3 years,** renewable each year, subject to the satisfactory quality/performance.
6. Estimated Approximate Total Tender Cost: **Rs. 36,38,064/-** per annum (Approx. Estimation based on calculations of present Basic pay, VDA and Service charges as per )
7. EMD Amount: **Rs. 45,476/-**
8. Billing model: **Billing after completion of each calendar month, subject to the satisfactory performance.**
9. Last Date for queries: **24/03/2025 at 12.00 p.m.,**
10. Closing Date & Time for submission of Tender proposal: **25/03/2025 at 12.01 PM.**
10. Tender Opening Date & Time : **Technical : 26/03/2025 at 12.02 p.m. Financial: Upon approval of Technical Bid**
11. Office Contact Number & e-mail ID: **080 2293 9220, cccadm2@gmail.com**
12. Pre-bid Meeting : **14/03/2025 at 3.30 p.m.,**
13. Pre-bid Meeting Attendance compulsory: **Yes. Certificate of Attendance to be uploaded.**

-subject to the terms and conditions as stipulated in the Full e-Tender Notification of the even reference no., the Eligible and Interested vendors (having business in Bengaluru City Only), in acceptance to the above stated details, terms and conditions may submit their e-Bidding Proposals (Quotations), through e-procurement portal **https://kppp.karnataka.gov.in/#/portal/Auctions/live).**

Sd/-
**Registrar,** City Civil Court, Bengaluru

DIPR/CP/Zen/5542/2024-25

ವಿಜಯಪುರ ಜಿಲ್ಲೆಯ ತಿಕೋಟಾ ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಕೊಠಡಿ, ಬೆಂಚ್‌ಗಳ ಸಮಸ್ಯೆ ನಡುವೆ ನೆಲದ ಮೇಲೆ ಒತ್ತೊಟ್ಟಿಗೆ ಕುಳಿತು ಪಾಠ ಕೇಳುತ್ತಿರುವ ವಿದ್ಯಾರ್ಥಿನಿಯರು ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕರ್ಚಖೇಡ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದ ದುಸ್ಥಿತಿ ಪ್ರಜಾವಾಣಿ ಚಿತ್ರ: ಜಗನ್ನಾಥ ಡಿ. ಶೇರಿಕಾರ

ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಸಂಖದ ಜಿಲ್ಲಾ ಪಂಚಾಯಿತಿ ಕನ್ನಡ ಶಾಲೆಯ ವರಾಂಡದಲ್ಲಿ ಮಕ್ಕಳಿಗೆ ಪಾಠ ಪ್ರಜಾವಾಣಿ ಚಿತ್ರ

## ಶಾಲೆಗಳಿಗೆ ಗಡಿ ಪ್ರಾಧಿಕಾರದ ನೆರವು

‘ರಾಜ್ಯದ ಗಡಿಭಾಗದ 62 ಶಾಲೆಗೆ ಸ್ಮಾರ್ಟ್‌ಬೋರ್ಡ್ ನೀಡಿದ್ದೇವೆ. ಈಗ ನಮಗೆ ಬರುತ್ತಿರುವ ವಾರ್ಷಿಕ ₹15 ಕೋಟಿ ಅನುದಾನದಲ್ಲಿ ವಿವಿಧ ಚಟುವಟಿಕೆ ಕೈಗೊಳ್ಳುತ್ತಿದ್ದೇವೆ. ಪ್ರಾಧಿಕಾರಕ್ಕೆ ಪ್ರತಿವರ್ಷ ₹100 ಕೋಟಿ ಕೊಟ್ಟರೆ ತುಂಬಾ ಚಟುವಟಿಕೆ ಕೈಗೊಳ್ಳಬಹುದು.’ ಎಂದು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ತಿಳಿಸಿದರು.

‘ಗಡಿ ಶಾಲೆಗಳಲ್ಲಿ ಗ್ರಂಥಾಲಯ ಇಲ್ಲ. ಇರುವ ಕಡೆ ಕನ್ನಡ ಪುಸ್ತಕವಿಲ್ಲ. ಈ ಕೊರತೆ ನೀಗಿಸುವ ಜತೆಗೆ, ಪ್ರತಿ ಗ್ರಂಥಾಲಯಕ್ಕೆ ಕನ್ನಡ ದಿನಪತ್ರಿಕೆ ತಲುಪಿಸಲು ಯೋಜಿಸಿದ್ದೇವೆ. ಮಹಾರಾಷ್ಟ್ರದಲ್ಲಿನ ಸಂಘ–ಸಂಸ್ಥೆಗಳ ಶಾಲೆಗೆ ಅನುದಾನ ಕೊಟ್ಟು, ಅವುಗಳ ಮೂಲಕ ತೋಟಪಟ್ಟಿಯಲ್ಲಿರುವ ಸರ್ಕಾರಿ ಕನ್ನಡ ಶಾಲೆಗಳ ಮಕ್ಕಳಿಗೆ ತರಗತಿಗೆ ಹೋಗಲು ವಾಹನ ಸೌಲಭ್ಯ ಕಲ್ಪಿಸಲು ಚಿಂತನೆ ನಡೆಸಿದ್ದೇವೆ’ ಎಂದರು.

**ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದದಿಂದ ಕನ್ನಡಿಗರು ಮತ್ತು ಮರಾಠಿಗರಿಗೆ ತೊಂದರೆ ಆಗಬಾರದು. ಶೈಕ್ಷಣಿಕ ಸಮಸ್ಯೆ ನಿವಾರಣೆಗೆ ಉಭಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಭೆ ನಡೆಯಬೇಕು.**
**ಅಶೋಕ ಚಂದರಗಿ,** ಸದಸ್ಯ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ

# ಗಡಿಯಲ್ಲಿ ಯಾರಿಗೂ ಸಲ್ಲದ ಶಾಲೆಗಳು

• ಇಮಾಮ್‌ಹುಸೇನ್ ಗೂಡುನವರ

**ಬೆಳಗಾವಿ:** ‘ಶತಮಾನದ ಈ ಶಾಲೆ ಇಲಿ–ಹೆಗ್ಗಣಗಳಿಗೆ ಮನೆಯಾಗಿದೆ. ಮರೆತು ಹೋದ ಅಥವಾ ನೆಲದ ಮೇಲೆ ಬಿದ್ದ ಆಹಾರ ಪದಾರ್ಥವನ್ನು, ನಾವು ಮಾರನೇ ದಿನ ಬರುವಷ್ಟರಲ್ಲಿ ಅವು ತಿಂದಿರುತ್ತವೆ. ಹಾವು, ಚೇಳು ಕಡಿಮೆಯೇನಿಲ್ಲ. ಬಿರುಕು ಬಿಟ್ಟ ಗೋಡೆ ಅಥವಾ ಕಿಟಕಿಯಲ್ಲಿ ಸ್ವಲ್ಪ ಜಾಗ ಸಿಕ್ಕರೂ ಸಾಕು, ನುಸುಳುತ್ತವೆ. ಅವುಗಳನ್ನು ಕಂಡ ಕೂಡಲೇ ಕಿರುಚುತ್ತ ಓಡುವ ಮಕ್ಕಳನ್ನು ಸಂಭಾಳಿಸಿ, ಸುರಕ್ಷಿತ ಜಾಗಕ್ಕೆ ಒಯ್ಯಬೇಕು. ಪಾಠ ಅರ್ಧಕ್ಕೆ ನಿಲ್ಲುತ್ತದೆ’.

ಇದು ಬೆಳಗಾವಿಯ ವ್ಯಾಕ್ಸಿನ್ ಡಿಪೊ ಆವರಣದ ಸರ್ಕಾರಿ ಮರಾಠಿ ಪ್ರಾಥಮಿಕ ಶಾಲೆಯ ವಾಸ್ತವ ಸ್ಥಿತಿ. ಶಿಕ್ಷಕಿ ಬಿ.ಶೈಲಜಾ ಆತಂಕದಲ್ಲೇ ಈ ಶಾಲೆಯ ವ್ಯಥೆ ವಿವರಿಸುತ್ತಿದ್ದರೆ, ಅಲ್ಲಿ ಮಕ್ಕಳು ಕೊಠಡಿಯಲ್ಲಿ ಕೂರಲು ಹಿಂಜರಿಯುತ್ತಿದ್ದರು. ಯಾವ ಮೂಲೆಯಿಂದ ಯಾವ ಹುಳ–ಹುಪ್ಪಡಿ ಜಿಗಿದು, ತಮ್ಮನ್ನು ಕಚ್ಚುತ್ತೋ ಎಂಬ ಭೀತಿ ಅವರದ್ದು.

ಇನ್ನು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ ಸ್ಥಿತಿಯಂತೂ ಇನ್ನಷ್ಟು ಶೋಚನೀಯ. ಕಳಪೆ ಕಾಮಗಾರಿಯಿಂದ ಗೋಡೆಗಳೆಲ್ಲ ಬಿರುಕು ಬಿಟ್ಟಿವೆ. ಕಟ್ಟಡಕ್ಕೆ ಬಣ್ಣ ಬಳಿದು ತಿಂಗಳುಗಳೇ ಕಳೆದಿವೆ. ಮಕ್ಕಳು ನೆಲದ ಮೇಲೆ ಕೂರಬೇಕು.

> **ನೆಮ್ಮದಿಯ ಬದುಕಷ್ಟೇ ಅಲ್ಲ, ಶಿಕ್ಷಣವೂ ಕಷ್ಟ**

ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಸಂಖ ಗ್ರಾಮದಲ್ಲಿನ ಜಿಲ್ಲಾ ಪಂಚಾಯಿತಿ ಕನ್ನಡ ಶಾಲೆಗಳ ಸಮಸ್ಯೆ ಇನ್ನೂ ಗಂಭೀರ ಸ್ವರೂಪದ್ದು. ‘ಜತ್ತ ತಾಲ್ಲೂಕಿನಲ್ಲಿ 129 ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗಳಿದ್ದು, ಇಲ್ಲಿ ಕನ್ನಡಿಗರೇ ಹೆಚ್ಚಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿರುವ ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಇತ್ಯರ್ಥವಾಗಿ ಮಹಾಜನ್ ವರದಿ ಜಾರಿಯಾದರೆ, ಇಲ್ಲಿನ 44 ಗ್ರಾಮಗಳು ಕರ್ನಾಟಕಕ್ಕೆ ಸೇರಬಹುದು ಎಂಬುದು ಮಹಾರಾಷ್ಟ್ರ ಸರ್ಕಾರದ ಆತಂಕ. ಹಾಗಾಗಿ ಕನ್ನಡ ಶಾಲೆಗಳನ್ನು ಅಭಿವೃದ್ಧಿಪಡಿಸುತ್ತಿಲ್ಲ’ ಎಂದು ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಗುಲಗುಂಜನಾಳ ಗ್ರಾಮ ಪಂಚಾಯಿತಿ ಸದಸ್ಯ ಸಿದ್ದಪ್ಪ ಮೇತ್ರಿ ಬೇಸರ ವ್ಯಕ್ತಪಡಿಸಿದರು.

‘ಸಂಖದ ಶಾಲೆಗಳಲ್ಲಿ ಊಟಕ್ಕೆ ಬಿಡುವು ಸಿಕ್ಕ ಕೂಡಲೇ ಮಕ್ಕಳು ತಮ್ಮ ಮನೆಯ ಶೌಚಾಲಯಕ್ಕೆ ಹೋಗಿ, ನಿರಾಳರಾಗುತ್ತಾರೆ. ನಮ್ಮ ಶಾಲೆಯ ಸಮಸ್ಯೆಗಳನ್ನು ಎಷ್ಟು ಹೇಳಿದರೂ ಕಡಿಮೆ’ ಎಂದು ಹೋರಾಟಗಾರ ಚಂದ್ರಶೇಖರ ರೇಬಗೊಂಡ ಬೇಸರದಿಂದ ಹೇಳಿದರು.

ರಾಜ್ಯ ಗಡಿಭಾಗದ ಒಂದೊಂದು ಊರಿಗೆ ಭೇಟಿ ನೀಡಿದರೆ, ಅಲ್ಲಿನ ಸರ್ಕಾರಿ ಶಾಲೆಗಳ ಅವಸ್ಥೆ ಕಣ್ಣಿಗೆ ರಾಚುತ್ತದೆ. ಗಡಿ ಹಂಚಿಕೊಂಡಿರುವ ರಾಜ್ಯದ ಒಂದೊಂದು ದಿಕ್ಕಿನಲ್ಲಿ ಒಂದೊಂದು ರೀತಿಯ ಸಮಸ್ಯೆಗಳಿವೆ. ಮೂಲಸೌಲಭ್ಯ ವಂಚಿತ ಮತ್ತು ಸಮಸ್ಯಾತ್ಮಕ ಸರ್ಕಾರಿ ಶಾಲೆಗಳ ಪಟ್ಟಿಯಲ್ಲಿ ಕನ್ನಡ ಅಲ್ಲದೇ ಇತರ ಮಾಧ್ಯಮಗಳ ಶಾಲೆಗಳೂ ಸೇರಿವೆ.

‘ವಿದ್ಯಾರ್ಥಿಗಳಿಲ್ಲವೆಂದು ನಮ್ಮ ಶಾಲೆ ಮುಚ್ಚಲಾಗಿತ್ತು. ಮನೆ–ಮನೆಗೆ ಹೋಗಿ ಪಾಲಕರ ಮನವೊಲಿಸಿ, ಬೇರೆ ಶಾಲೆಗೆ ಹೋಗುತ್ತಿದ್ದವರನ್ನು ಬಿಡಿಸಿ ಕರೆತಂದು 2019ರಲ್ಲಿ ಶಾಲೆ ಪುನರಾರಂಭಿಸಿದೆವು. ಈಗ 1ರಿಂದ 5ನೇ ತರಗತಿಯಲ್ಲಿ 59 ಮಕ್ಕಳಿದ್ದಾರೆ. ಐದಾರು ವರ್ಷಗಳಿಂದ ಮನವಿ ಸಲ್ಲಿಸುತ್ತಿದ್ದರೂ ಕಾಯಂ ಶಿಕ್ಷಕರ ನೇಮಕವಾಗಿಲ್ಲ’ ಎಂದು ಅಥಣಿ ತಾಲ್ಲೂಕಿನ ಶಿರೂರಿನ ಕನ್ನಡ ಕಿರಿಯ ಪ್ರಾಥಮಿಕ ಶಾಲೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ನಾಮದೇವ ಖರಾತ್ ಕಳವಳ ವ್ಯಕ್ತಪಡಿಸಿದರು.

ಅವ್ಯವಸ್ಥೆ, ಶಿಕ್ಷಕರು ಮತ್ತು ಸೌಲಭ್ಯ ಕೊರತೆ ಕಾರಣಕ್ಕೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಕುಸಿಯುತ್ತಿದೆ. ಒಂದು ಕಾಲಕ್ಕೆ 500ಕ್ಕೂ ಹೆಚ್ಚು ಮಕ್ಕಳಿದ್ದ ಬೆಳಗಾವಿಯ ಕಂಬಳಿ ಖೂಟದ, ಒಂದೂವರೆ ಶತಮಾನದ ಹಿಂದಿನ ಬಾಲಕಿಯರ ಸರ್ಕಾರಿ ಮರಾಠಿ ಹಿರಿಯ ಪ್ರಾಥಮಿಕ ಶಾಲೆ ಸಂಖ್ಯೆ–1ರಲ್ಲಿ ಈಗ ಆರೇ ಮಕ್ಕಳು ಇದ್ದಾರೆ.

**ಶಿಕ್ಷಕರ ಕೊರತೆ:** ಮಹಾರಾಷ್ಟ್ರ, ತೆಲಂಗಾಣ ಮತ್ತು ಆಂಧ್ರಪ್ರದೇಶದ ಜೊತೆ ಗಡಿ ಹಂಚಿಕೊಂಡ ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಕನ್ನಡ, ಮರಾಠಿ, ತೆಲುಗು, ಉರ್ದು ಸರ್ಕಾರಿ ಶಾಲೆಗಳು ಅನಾಥ ಸ್ಥಿತಿಯಲ್ಲಿವೆ. 300ಕ್ಕೂ ಅಧಿಕ ಶಾಲೆಗಳಲ್ಲಿ 40 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಓದುತ್ತಾರೆ. ಆದರೆ, ಕೆಲವೆಡೆ ಕನ್ನಡ ಶಿಕ್ಷಕರ ನೇಮಕಾತಿ ಆಗಿಲ್ಲ. ಕನ್ನಡವೇ ಬಾರದ ಮರಾಠಿ ಶಿಕ್ಷಕರೂ ಕೆಲವೆಡೆ ಇದ್ದಾರೆ.

ಸರ್ಕಾರಿ ಶಾಲೆಗೆ ಸಂಬಂಧಿಸಿದಂತೆ ಬೆಳಗಾವಿ ಜಿಲ್ಲೆಯಲ್ಲಿ 5,705 ಮತ್ತು ರಾಯಚೂರು ಜಿಲ್ಲೆಯಲ್ಲಿ 5,286 ಶಿಕ್ಷಕರ ಹುದ್ದೆ ಖಾಲಿ ಇವೆ. ವಿಷಯ ಶಿಕ್ಷಕರ ಹುದ್ದೆಯೇ ಭರ್ತಿ ಆಗದಿರುವಾಗ, ದೈಹಿಕ ಶಿಕ್ಷಣ ಶಿಕ್ಷಕರ ಬಗ್ಗೆ ಕೇಳುವಂತಿಲ್ಲ. ಮಹಾರಾಷ್ಟ್ರದೊಂದಿಗೆ ಗಡಿ ಹಂಚಿಕೊಂಡ ಬೆಳಗಾವಿ, ವಿಜಯಪುರ, ಕಲಬುರಗಿ, ಬೀದರ್‌ನ ಶಾಲೆಗಳು, ಆಂಧ್ರ ಪ್ರದೇಶ ಜೊತೆ ಗಡಿ ಹಂಚಿಕೊಂಡ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಯಾದಗಿರಿ ಜಿಲ್ಲೆ ಶಾಲೆಗಳ ಪರಿಸ್ಥಿತಿಯೂ ಚೆನ್ನಾಗಿಲ್ಲ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಗಡಿ ಗ್ರಾಮಗಳ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಇಂಗ್ಲಿಷ್ ಕಲಿಸುತ್ತಾರೆ ಎಂದು ಪಾಲಕರು, ತಮ್ಮೂರಿನಿಂದ ಮಕ್ಕಳನ್ನು ಬಸ್, ಆಟೊರಿಕ್ಷಾಗಳಲ್ಲಿ ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ.

ಬಾಗೇಪಲ್ಲಿ ತಾಲ್ಲೂಕಿನ ಮಾರ್ಗಾನುಕುಂಟೆ ಗ್ರಾಮದಲ್ಲಿ ಅಲ್ಪಸಂಖ್ಯಾತರು ಹೆಚ್ಚಿದ್ದಾರೆ. ‘ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮೂಲಸೌಕರ್ಯ ಕೊರತೆ ಕಾರಣಕ್ಕೆ ಇಬ್ಬರು ಶಿಕ್ಷಕರು ವರ್ಗಾವಣೆ ಪಡೆದರು. ಮಕ್ಕಳಿಲ್ಲದ ಕಾರಣ ಸರ್ಕಾರವು ಶಾಲೆಯನ್ನೇ ಮುಚ್ಚಿತು’ ಎಂದು ಮಾರ್ಗಾನುಕುಂಟೆ ಗ್ರಾಮದ ಸೈಯ್ಯದ್ ಬಾಬಾಜಾನ್ ತಿಳಿಸಿದರು.

**ಮನೆಯಿಂದ ತರಬೇಕು ನೀರು:** ‘ನಮ್ಮ ಶಾಲೆಯಲ್ಲಿ 1ರಿಂದ 7ನೇ ತರಗತಿವರೆಗೆ 200 ವಿದ್ಯಾರ್ಥಿಗಳಿದ್ದೇವೆ. ಇಲ್ಲಿನ ಶುದ್ಧ ನೀರಿನ ಘಟಕ ಬಂದ್ ಆಗಿ, ವರ್ಷಗಳೇ ಗತಿಸಿವೆ. ಹೀಗಾಗಿ ಮನೆಯಿಂದಲೇ ಬಾಟಲಿಯಲ್ಲಿ ನೀರು ತಂದು ಸ್ವಲ್ಪವೇ ಕುಡಿಯುತ್ತೇವೆ’ ಎನ್ನುತ್ತಾರೆ ಬೆಳಗಾವಿ ತಾಲ್ಲೂಕಿನ ತುರಮರಿಯ ಮರಾಠಿ ಶಾಲೆಯ ವಿದ್ಯಾರ್ಥಿನಿಯರು.

ಯಾದಗಿರಿ ಜಿಲ್ಲೆಯ ಸೈದಾಪುರ, ಗುರುಮಠಕಲ್ ತಾಲ್ಲೂಕುಗಳಲ್ಲಿ ತೆಲುಗು ಪ್ರಭಾವ ದಟ್ಟವಾಗಿದೆ. ಕನ್ನಡ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿದ್ದು, ಅನಿವಾರ್ಯವಾಗಿ ತೆಲುಗು ಶಾಲೆಗಳಿಗೆ ಹೋಗಬೇಕಾದ ಪರಿಸ್ಥಿತಿ ಇದೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನಲ್ಲಿ ತಮಿಳು ಭಾಷೆ ಪ್ರಭಾವ ಇದೆ. ಅಲ್ಲಿನ ಸರ್ಕಾರಿ ಶಾಲೆಗಳು ಮೂಲಸೌಕರ್ಯದಿಂದ ವಂಚಿತವಾಗಿವೆ. ‘ಬಹುತೇಕ ಗ್ರಾಮಗಳು ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಇರುವುದರಿಂದ ಉತ್ತಮ ರಸ್ತೆಗಳಿಲ್ಲದೆ ಬಸ್ ಸಂಚರಿಸುವುದಿಲ್ಲ. ರಾಮಾಪುರದಿಂದ ದಿನ್ನಳ್ಳಿ, ಮಾರಳ್ಳಿ, ಗಾಜನೂರು, ಕೊಪ್ಪ, ಸತ್ಯಮಂಗಲ, ಮೀಣ್ಯಂ ಮಾರ್ಗವಾಗಿ ಹೂಗ್ಯಂ ತಲುಪಲು ಬೆಳಿಗ್ಗೆ ಹಾಗೂ ಸಂಜೆ ಒಂದು ಕೆಎಸ್‌ಆರ್‌ಟಿಸಿ ಬಸ್ ಹೊರತುಪಡಿಸಿದರೆ, ಬೇರೆ ಬಸ್ ಸೌಲಭ್ಯ ಇಲ್ಲ. ಈ ಭಾಗದ ಜನರು ವೈಯಕ್ತಿಕ ವಾಹನಗಳನ್ನೇ ಅವಲಂಬಿಸಬೇಕಾಗಿದೆ’ ಎಂಬುದು ಪಾಲಕರ ದೂರು.

ಗೋವಾದೊಂದಿಗೆ ಗಡಿ ಹಂಚಿಕೊಂಡ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಮತ್ತು ಜೊಯಿಡಾ ತಾಲ್ಲೂಕಿನ ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಸಿಯುತ್ತಿದೆ. ಕಾರವಾರ ತಾಲ್ಲೂಕಿನ ಮಾಜಾಳಿ, ಮುಡಗೇರಿ, ಸದಾಶಿವಗಡ, ಅಸ್ನೋಟಿ ಮತ್ತಿತರ ಹಳ್ಳಿಗಳ 150ಕ್ಕೂ ಅಧಿಕ ವಿದ್ಯಾರ್ಥಿಗಳು ಪಕ್ಕದ ಗೋವಾದ ಮಾಶೆಮ್, ಲೋಲೆಮ್, ಕಾಣಕೋಣ ಭಾಗದಲ್ಲಿರುವ ಖಾಸಗಿ ಇಂಗ್ಲಿಷ್ ಶಾಲೆಗೆ ತೆರಳುತ್ತಾರೆ.

ಶಾಲಾ ಶಿಕ್ಷಣ ಇಲಾಖೆ ಬೆಳಗಾವಿ ಉಪನಿರ್ದೇಶಕಿ ಲೀಲಾವತಿ ಹಿರೇಮಠ ಕೂಡ ಹೀಗೆ ಹೇಳಿದರು. ‘ಸರ್ಕಾರಿ ಶಾಲೆಗಳತ್ತ ಮಕ್ಕಳನ್ನು ಸೆಳೆಯಲು ಏನೆಲ್ಲ ಕಸರತ್ತು ಮಾಡುತ್ತಿದ್ದೇವೆ. ಆದರೆ, ಇಂಗ್ಲಿಷ್ ಮಾಧ್ಯಮ ಮತ್ತು ಕಾನ್ವೆಂಟ್ ಶಾಲೆಗಳ ಮೋಹದಿಂದ ಪಾಲಕರಿಂದ ಮಕ್ಕಳನ್ನು ಖಾಸಗಿ ಶಾಲೆಗೇ ಸೇರಿಸುತ್ತಿದ್ದಾರೆ’.

ವಿಧಾನಸೌಧದಿಂದ ರಾಜ್ಯದ ಗಡಿಯತ್ತ ದೂರ ದೂರಕ್ಕೆ ಹೋಗುತ್ತಿದ್ದಂತೆ ಸರ್ಕಾರಿ ಶಾಲೆಗಳಲ್ಲಿ ಸೌಲಭ್ಯ, ಕಾಯಂ ಶಿಕ್ಷಕ ಮತ್ತು ಗುಣಮಟ್ಟ ಎನ್ನುವುದು ದೂರವಾಗುತ್ತ ಹೋಗುತ್ತದೆ. ಸವಲತ್ತು ಎನ್ನುವ ಮರೀಚಿಕೆ ಸರ್ಕಾರದ ಕನ್ನಡ, ಮರಾಠಿ ಅಥವಾ ಉರ್ದು ಶಾಲೆಗೆ ಒಂದೇ ರೀತಿ ಇದೆ. ಇಲ್ಲಿ ಸೌಲಭ್ಯ ಇಲ್ಲದ ಕಾರಣಕ್ಕೆ ಪೋಷಕರು ದುಬಾರಿ ಶುಲ್ಕ ಕೊಟ್ಟು ಖಾಸಗಿ ಶಾಲೆಗಳತ್ತ ಮಕ್ಕಳನ್ನು ಸೇರಿಸುತ್ತಿದ್ದಾರೆ. ಪರಿಹಾರ ಎನ್ನುವ ಮದ್ದು ಯಾವಾಗ ಸರಿಯಾಗುವುದು ಎನ್ನುವ ದಾರಿಯನ್ನು ಪೋಷಕರು ಕಾಯುತ್ತಿದ್ದಾರೆ.

**ಪೂರಕ ಮಾಹಿತಿ:** ಬ್ಯೂರೊಗಳಿಂದ

ಬೆಳಗಾವಿ ತಾಲ್ಲೂಕಿನ ತುರಮರಿಯ ಸರ್ಕಾರಿ ಮರಾಠಿ ಪ್ರಾಥಮಿಕ ಶಾಲೆಯಲ್ಲಿ ಮನೆಯಿಂದಲೇ ಬಾಟಲಿಗಳಲ್ಲಿ ನೀರು ತಂದಿರುವ ವಿದ್ಯಾರ್ಥಿನಿಯರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

## ಅಂಕಿ ಅಂಶಗಳು

**6** ಕರ್ನಾಟಕದೊಂದಿಗೆ ಗಡಿ ಹಂಚಿಕೊಂಡ ರಾಜ್ಯಗಳು

**19** ಕರ್ನಾಟಕದ ಗಡಿ ಜಿಲ್ಲೆಗಳು

**63** ಕರ್ನಾಟಕದ ಗಡಿ ತಾಲ್ಲೂಕುಗಳು

**₹15 ಕೋಟಿ** ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಸಿಗುತ್ತಿರುವ ವಾರ್ಷಿಕ ಅನುದಾನ

**₹100 ಕೋಟಿ** ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಬೇಡಿಕೆ ಇಟ್ಟ ವಾರ್ಷಿಕ ಅನುದಾನ

**ಗಡಿಭಾಗದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ. ಅಧಿಕಾರಿಗಳನ್ನು ಗಡಿಭಾಗದ ಶಾಲೆಗಳಿಗೆ ಕಳುಹಿಸಿ, ವಸ್ತುಸ್ಥಿತಿ ಪರಿಶೀಲಿಸಲು ಸೂಚಿಸುವೆ. ಶಿಕ್ಷಕರ ಕೊರತೆ ನೀಗಿಸಿ, ಸೌಲಭ್ಯ ಕಲ್ಪಿಸುತ್ತೇವೆ**
**ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

**ವಿಜಯಪುರ ಜಿಲ್ಲೆಯಲ್ಲಿ ಸುಮಾರು 300 ಉರ್ದು ಪ್ರಾಥಮಿಕ ಶಾಲೆಗಳಿವೆ. ಬಹುತೇಕ ಕಡೆ ಮಕ್ಕಳ ದಾಖಲಾತಿ ಕಡಿಮೆ ಆಗುತ್ತಿದೆ. 25ಕ್ಕೂ ಅಧಿಕ ಶಾಲೆಗಳಲ್ಲಿ ಶೂನ್ಯ ದಾಖಲಾತಿ ಇದೆ**
**ರಫೀ ಭಂಡಾರಿ,** ಸದಸ್ಯ, ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮ ಅನುಷ್ಠಾನ ಸಮಿತಿ, ವಿಜಯಪುರ

**ಮಹಾರಾಷ್ಟ್ರದಲ್ಲಿನ ಕನ್ನಡ ಶಾಲೆಗಳು ದಯನೀಯ ಸ್ಥಿತಿಯಲ್ಲಿವೆ. ಮಹಾರಾಷ್ಟ್ರ ಸರ್ಕಾರದೊಂದಿಗೆ ಕರ್ನಾಟಕ ಸರ್ಕಾರವೂ ಇವುಗಳಿಗೆ ಸೌಲಭ್ಯ ಒದಗಿಸಬೇಕು ಆರ್**
**ಜಿ.ಬಿರಾದಾರ,** ಅಧ್ಯಕ್ಷ, ಕನ್ನಡ ಶಿಕ್ಷಕರ ಬಳಗ, ಜತ್ತ, ಮಹಾರಾಷ್ಟ್ರ

**ಕರ್ನಾಟಕಕ್ಕಿಂತ ಗೋವಾ ಖಾಸಗಿ ಶಾಲೆಗಳಲ್ಲಿ ಶುಲ್ಕ ಕಡಿಮೆ. ಅಲ್ಲಿ ಓದಿದರೆ ಅದೇ ರಾಜ್ಯದಲ್ಲಿ ಉದ್ಯೋಗ ಸಿಗುತ್ತದೆ. ಅಲ್ಲಿ ಉದ್ಯೋಗಕ್ಕೆ ಪೈಪೋಟಿಯೂ ಕಡಿಮೆ ಇರುವುದಕ್ಕೆ ಮಕ್ಕಳನ್ನು ಗೋವಾ ಶಾಲೆಗೆ ಕಳುಹಿಸುತ್ತೇವೆ**
**ನಾರಾಯಣ ನಾಯ್ಕ,** ಪಾಲಕ, ಮಾಂಜಾಳಿ, ಉತ್ತರ ಕನ್ನಡ ಜಿಲ್ಲೆ

## ಆಂಧ್ರದಲ್ಲಿ ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಕುಸಿತ

ಆಂಧ್ರಪ್ರದೇಶ ಸರ್ಕಾರ ಗಡಿ ಭಾಗದ ತೆಲುಗು ಶಾಲೆ ಸೇರುವ ವಿದ್ಯಾರ್ಥಿಗಳಿಗೆ ಸಹಾಯಧನ ಘೋಷಿಸಿದ ಕಾರಣ, ಕನ್ನಡ ಶಾಲೆಗಳಿಗೆ ಸೇರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಕುಸಿತಗೊಂಡಿದೆ.

ಮೊಳಕಾಲ್ಮುರು ತಾಲ್ಲೂಕಿನ ಯಡ್ಡಲಬೊಮ್ಮನಹಟ್ಟಿ ಗ್ರಾಮಕ್ಕೆ ಆಂಧ್ರ ಗಡಿ ಕೇವಲ 30 ಮೀಟರ್ ದೂರದಲ್ಲಿದೆ. ಈ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಗೆ ಆಂಧ್ರದ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿದ್ದರು. ರಾಯದುರ್ಗ ಜಿಲ್ಲೆಯ ಪೈತೋಟಲು ಭಾಗದ ಕನ್ನಡಿಗರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ದಾಖಲು ಮಾಡುತ್ತಿದ್ದರು. ಆದರೆ ಈಗ ಸಹಾಯಧನದ ಆಸೆಗೆ ಮಕ್ಕಳು ತೆಲುಗು ಶಾಲೆಗಳಿಗೆ ದಾಖಲಾಗಿದ್ದು ಯಡ್ಡಲಬೊಮ್ಮನಹಟ್ಟಿ ಶಾಲೆ ಮಕ್ಕಳ ಸಂಖ್ಯೆ 36ಕ್ಕೆ ಕುಸಿದಿದೆ.

ಆಂಧ್ರಪ್ರದೇಶದ ಅಮರಾಪುರ ಮಂಡಲ್, ರೊಳ್ಳೆ, ಅಗಳಿ ಗ್ರಾಮಗಳು ಹಿರಿಯೂರು ತಾಲ್ಲೂಕಿನ ಧರ್ಮಪುರ ಭಾಗದೊಂದಿಗೆ ಗಡಿ ಹಂಚಿಕೊಂಡಿವೆ. ಇಲ್ಲಿ ಒಟ್ಟು 10 ಕನ್ನಡ ಶಾಲೆಗಳಿದ್ದು ತೀರಾ ಶೋಚನೀಯ ಸ್ಥಿತಿಯಲ್ಲಿವೆ.

‘1956ಕ್ಕೂ ಮೊದಲೂ ಈ ಭಾಗ ಮೈಸೂರು ಸಂಸ್ಥಾನದ ಭಾಗವಾಗಿತ್ತು. ಇಲ್ಲಿ ಈಗಲೂ ಕನ್ನಡಿಗರ ಸಂಖ್ಯೆ ಹೆಚ್ಚಿದ್ದು ಕನ್ನಡ ಮಾಧ್ಯಮದ ಶಾಲೆಗಳಿಗೆ ಬೇಡಿಕೆ ಇದೆ. ಆದರೆ, ಸರ್ಕಾರ ಮೂಲ ಸೌಲಭ್ಯ ಒದಗಿಸದ ಕಾರಣ ಮುಚ್ಚುವ ಸ್ಥಿತಿ ತಲುಪಿವೆ’ ಎಂದು ಧರ್ಮಪುರದ ಶಿಕ್ಷಕರೊಬ್ಬರು ತಿಳಿಸಿದರು.

## ತೆಲಂಗಾಣದಲ್ಲಿ ಕನ್ನಡ ಶಾಲೆಗಳಿಗೆ ಸೌಲಭ್ಯ

ತೆಲಂಗಾಣದ ನಾರಾಯಣಪೇಟೆ ಜಿಲ್ಲೆ ಕೃಷ್ಣಾ ಮಂಡಲದ ಕೃಷ್ಣಾ ಗ್ರಾಮದಲ್ಲಿರುವ ಸರ್ಕಾರಿ ಕನ್ನಡ ಪ್ರೌಢ ಶಾಲೆಯಲ್ಲಿ ಸ್ಮಾರ್ಟ್ ಬೋರ್ಡ್ ಅಳವಡಿಸಿ ವಿದ್ಯಾರ್ಥಿಗಳಿಗೆ ಪಾಠ ಮಾಡಲಾಗುತ್ತದೆ. ಚಿತ್ರ: ಶ್ರೀನಿವಾಸ ಇನಾಮದಾರ್

ತೆಲಂಗಾಣದಲ್ಲಿ ರೇವಂತ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಯಚೂರಿಗೆ ಹೊಂದಿಕೊಂಡ ತೆಲಂಗಾಣ ಗಡಿಯೊಳಗಿನ ಸರ್ಕಾರಿ ಕನ್ನಡ ಶಾಲೆಗಳ ಚಿತ್ರಣ ಬದಲಾಗಿದೆ. ತೆಲಂಗಾಣ ಸರ್ಕಾರ ಒಂದು ವರ್ಷದ ಅವಧಿಯಲ್ಲಿ ಅನೇಕ ಶಾಲೆಗಳಿಗೆ ಹೊಸ ಕಟ್ಟಡ ಮಂಜೂರುಗೊಳಿಸಿದೆ.

‘ನಮ್ಮ ಊರು, ನಮ್ಮ ಶಾಲೆ’ ಯೋಜನೆಯಡಿ ಪೀಠೋಪಕರಣ ಒದಗಿಸಿದೆ. ಕನ್ನಡ ಶಾಲೆಗಳಿಗೆ ಕನ್ನಡ ಪುಸ್ತಕ ಮುದ್ರಿಸಿಕೊಟ್ಟಿದೆ. ಪ್ರಾಥಮಿಕ ಶಾಲೆಗಳಲ್ಲಿ ಎಡಿಎಫ್ ಬೋರ್ಡ್, ಪ್ರೌಢಶಾಲೆಗಳಲ್ಲಿ ಸ್ಮಾರ್ಟ್ ಬೋರ್ಡ್ ಇದೆ. ಶಾಲೆಗೆ ಉಚಿತ ಇಂಟರ್‌ನೆಟ್, ವಿದ್ಯುತ್, ಫ್ಯಾನ್ ಸೌಲಭ್ಯವಿದೆ.

ಮಧ್ಯಾಹ್ನದ ಬಿಸಿಯೂಟ, ಸಂಜೆ ಉಪಾಹಾರ ಸಿಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇಲ್ಲ. ಗುಣಾತ್ಮಕ ಶಿಕ್ಷಣ ಸಿಗುತ್ತಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶವೂ ಚೆನ್ನಾಗಿದೆ.

ಸಕಾಲಕ್ಕೆ ಬಸ್ ಬಾರದಿದ್ದರೆ ಮಕ್ಕಳಿಗೆ ಶಾಲೆಗೆ ಬರಲು ತೊಂದರೆ ಆಗದಿರಲಿಯೆಂದು ಪ್ರಯಾಣ ವೆಚ್ಚವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತದೆ. ಹೀಗಾಗಿ ನಾಲ್ಕು–ಐದು ಗ್ರಾಮಗಳ ಮಕ್ಕಳು ಒಂದೇ ಆಟೊದಲ್ಲಿ ನಿತ್ಯ ಬಂದು ಹೋಗುತ್ತಾರೆ.

## ಮಲಯಾಳಂ ಶಿಕ್ಷಕರನ್ನು ನೇಮಿಸಿದಾಗಲೆಲ್ಲ ಹೋರಾಟ

ಕೇರಳದ ಕಾಸರಗೋಡಿನಲ್ಲೂ ಸರ್ಕಾರಿ ಕನ್ನಡ ಶಾಲೆಗಳು ಇವೆ. 2016ರಲ್ಲಿ ಪಿಎಸ್‌ಸಿ (ಪಬ್ಲಿಕ್ ಸರ್ವಿಸ್ ಕಮಿಷನ್) ಪರೀಕ್ಷೆಯಲ್ಲಿ ಉತ್ತೀರ್ಣರಾದ ಮಲಯಾಳಂ ಶಿಕ್ಷಕರನ್ನು ಕನ್ನಡ ಶಾಲೆಗಳಿಗೆ ನೇಮಕ ಮಾಡಿದ ವಿಷಯ ವಿವಾದವಾಗಿತ್ತು. ನಂತರ ಕನ್ನಡ ಶಾಲೆಗಳಿಗೆ ನೇಮಕ ಆಗುವವರು 1ರಿಂದ 10ನೇ ತರಗತಿಯವರೆಗೆ ಕನ್ನಡ ಶಾಲೆಯಲ್ಲಿ ಓದಿರಬೇಕು ಎಂಬ ನಿಯಮ ಜಾರಿಗೆ ಬಂತು.

ಆದರೆ, 2016ರಲ್ಲಿ ಆಯ್ಕೆಯಾಗಿದ್ದ ಮಲಯಾಳಂ ಶಿಕ್ಷಕರ ಪೈಕಿ ಕೆಲವರನ್ನು ಈಗಲೂ ಕೆಲ ಶಾಲೆಗಳಿಗೆ ನೇಮಕ ಮಾಡಲಾಗುತ್ತಿದೆ. ಕಾಸರಗೋಡು ಜಿಲ್ಲೆಯಲ್ಲಿ 184 ಕನ್ನಡ ಶಾಲೆ ಇವೆ. ಸೌಲಭ್ಯಗಳ ವಿಷಯದಲ್ಲಿ ಸಮಸ್ಯೆ ಇಲ್ಲ. ಒಂದೇ ವಿದ್ಯಾರ್ಥಿ ಇದ್ದರೂ ಶಿಕ್ಷಕರನ್ನು ಉಳಿಸಿಕೊಳ್ಳಲಾಗಿದೆ. ಆದರೆ, ಪಾಲಕರು ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳುಹಿಸಲ್ಲ.

‘ಸರ್ಕಾರದ ಸೌಲಭ್ಯ, ವಿಶೇಷವಾಗಿ ಉದ್ಯೋಗ ಗಳಿಸಲು ಆಡಳಿತ ಭಾಷೆ ಅಗತ್ಯವಿದೆ ಎಂಬುದು ಸ್ಥಳೀಯರ ಮನಸ್ಸಿನಲ್ಲಿದೆ. ಹೀಗಾಗಿ ಕನ್ನಡ ಶಾಲೆಗಳಿಗೆ ಕಳುಹಿಸಲು ಹೆಚ್ಚಿನವರು ಹಿಂಜರಿಯುತ್ತಾರೆ’ ಎಂದು ಶಿಕ್ಷಕರ ಸಂಘದ ಸದಸ್ಯರೊಬ್ಬರು ತಿಳಿಸಿದರು.

## ಗುಂಡಣ್ಣ




## 25 ವರ್ಷಗಳ ಹಿಂದೆ
ಗುರುವಾರ, 9-3-2000

**• ವಿವಾದಾತ್ಮಕ ಆರ್‌ಎಸ್‌ಎಸ್ ಸುತ್ತೋಲೆ ವಾಪಸು**

**ಗಾಂಧಿನಗರ, ಮಾರ್ಚ್ 8 (ಯುಎನ್‌ಐ)**– ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ನೀಡುವ ತನ್ನ ವಿವಾದಾತ್ಮಕ ಸುತ್ತೋಲೆಯನ್ನು ಗುಜರಾತ್ ಸರ್ಕಾರ ಇಂದು ಹಿಂಪಡೆದಿದೆ.

ಇಲ್ಲಿ ಇಂದು ನಡೆದ ಉನ್ನತ ಮಟ್ಟದ ಸಭೆಯೊಂದರಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ಗೃಹ ಸಚಿವ ಹರೇನ್ ಪಾಂಡ್ಯ ತಿಳಿಸಿದರು. ಈ ವಿವಾದಾತ್ಮಕ ಸುತ್ತೋಲೆಯ ಕಾರಣದಿಂದ ಕಳೆದ ಹತ್ತು ದಿನಗಳಿಂದ ಸಂಸತ್ ಕಲಾಪ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

## 50 ವರ್ಷಗಳ ಹಿಂದೆ
ಭಾನುವಾರ, 9-3-1975

**• ಕೈಗೆ ಸಿಕ್ಕದ ‘ಟಿಕ್ ಟಿಕ್’ ಗೆಳೆಯ**

**ಬೆಂಗಳೂರು, ಮಾರ್ಚ್ 8**– ಕೈಗಡಿಯಾರ ಕಟ್ಟಬೇಕೆನ್ನುವ ಅರುವತ್ತು ಲಕ್ಷ ಜನ ದೇಶದಲ್ಲಿದ್ದಾರೆ. ಇವರ ಸಂಖ್ಯೆ ವಾರ್ಷಿಕ ಶೇ 10ರಷ್ಟು ಹೆಚ್ಚುತ್ತಿದೆ.

ಬೇಡಿಕೆ ಅರುವತ್ತು ಲಕ್ಷವಿದ್ದರೂ, ದೇಶದ ಕೈಗಡಿಯಾರದ ವಾರ್ಷಿಕ ಉತ್ಪಾದನೆ ಕೇವಲ ಏಳೂವರೆ ಲಕ್ಷ. ಇದರಲ್ಲಿ ಅತಿ ಜನಪ್ರಿಯ ಎನಿಸಿಕೊಂಡ ಎಚ್.ಎಂ.ಟಿ ಕೈಗಡಿಯಾರಗಳ ಪಾಲೇ ಐದು ಲಕ್ಷ.

ಒಂದು ಅಂದಾಜಿನ ಪ್ರಕಾರ, ವರ್ಷಕ್ಕೆ ಮೂವತ್ತು ಲಕ್ಷ ಕೈಗಡಿಯಾರಗಳು ದೇಶದೊಳಕ್ಕೆ ಕಳ್ಳಸಾಗಣೆಯಾಗುತ್ತಿವೆ. ಹೆಚ್ಚಿನ ಸಂಖ್ಯೆಯ ಜನರ ಕೈಗಳನ್ನು ಅಲಂಕರಿಸಿರುವುದು ಈ ‘ಕಳ್ಳ ಕೈಗಡಿಯಾರ’ಗಳೇ ಇರಬೇಕು.

## ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಮಾರ್ಚ್ 9, 2025

**ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ:** ಫಾಲ್ಗುಣ ಶುಕ್ಲ ದಶಮಿ ಗಂ. 07-46 **ನಕ್ಷತ್ರ:** ಪುನರ್ವಸು ಗಂ. 23-55 **ಯೋಗ:** ಸೌಭಾಗ್ಯ ಗಂ. 14-58 **ಕರಣ:** ಗರ ಗಂ. 07-46, ಕುಂಭ ಮಾಸದ 25 ನೇ ದಿನ, **ಮಳೆನಕ್ಷತ್ರ:** ಪೂರ್ವಾಭಾದ್ರ 2.
**ರಾಹುಕಾಲ:** ಸಾಯಂಕಾಲ 04-30 – 06-00
**ಸೂರ್ಯೋದಯ:** 06-45 **ಸೂರ್ಯಾಸ್ತ:** 06-37
**ಮುಸ್ಲಿಂ ದಿನಾಂಕ:** 08 ರಂಜಾನ್
**ಅದೃಷ್ಟ ಸಂಖ್ಯೆ:** 10, 4

**ಮೇಷ:** ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಹೆಚ್ಚಿನ ತಯಾರಿ ನಡೆಸುವುದರಿಂದ ಉತ್ತಮ ಪ್ರತಿಫಲ ಸಿಗಲಿದೆ. ಕಮಿಷನ್ ಏಜೆಂಟರ್‌ಗಳಿಗೆ ಮತ್ತು ಸರಕು ಸಾಗಾಣಿಕೆದಾರರಿಗೆ ಉತ್ತಮ ದಿನ.

**ವೃಷಭ:** ಅಧಿಕಾರಿಗಳು ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆದರೆ ಬಹಳ ಅನುಕೂಲವಾಗುವುದು. ಕೊಟ್ಟ ಮಾತು ಉಳಿಸಿಕೊಳ್ಳುವ ವಿಚಾರದಲ್ಲಿ ಸೋಲುಂಟಾಗಬಹುದು.

**ಮಿಥುನ:** ನಿಮ್ಮ ಆಲೋಚನೆಗಳಿಗೆ ಗ್ರಹಣ ಸಂಭವಿಸಿದಂತೆ ಆಗುವುದರಿಂದ ಅಸಮಾಧಾನ, ಹೆದರಿಕೆ, ಧೃತಿಗೆಡುವಂತೆ ಆಗಲಿದೆ. ಮನೆಯಲ್ಲಿ ಶಾಂತಿ ಹೋಮ ನಡೆಸುವ ಬಗ್ಗೆ ಕುಟುಂಬದವರೊಂದಿಗೆ ಚರ್ಚಿಸುವಿರಿ.

**ಕರ್ಕಾಟಕ:** ಗುರಿ ಸಾಧಿಸುವ ಅಥವಾ ಗೆಲ್ಲಬೇಕೆಂಬ ಛಲ ಇಟ್ಟುಕೊಳ್ಳುವುದು ಉತ್ತಮವೇ ಹೊರತು, ಮತ್ತೊಬ್ಬರೊಂದಿಗೆ ಹೋಲಿಕೆ ಮಾಡಿಕೊಳ್ಳುವುದು ಸರಿಯಲ್ಲ. ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ ಉಂಟಾಗುವುದು.

**ಸಿಂಹ:** ಅನಾರೋಗ್ಯದಿಂದಾಗಿ ಹಣಕಾಸಿನ ಬಿಕ್ಕಟ್ಟು ಎದುರಿಸಬೇಕಾಗಲಿದೆ. ಜವಳಿ ವ್ಯಾಪಾರಿಗಳಿಗೆ ಅಧಿಕ ವ್ಯಾಪಾರ ಇರಲಿದೆ. ಪೊಲೀಸರು ಅನಿವಾರ್ಯವಾಗಿ ಬಿಡುವಿಲ್ಲದಂತೆ ಕೆಲಸ ಮಾಡಬೇಕಾಗಬಹುದು.

**ಕನ್ಯಾ:** ದುಡಿಮೆಯೇ ಮುಖ್ಯ ಧ್ಯೇಯವಾಗಿದ್ದಲ್ಲಿ, ಶತ್ರುಗಳೂ ಮಿತ್ರರಾಗುವರು. ನೆಲದ ಕಾನೂನುಗಳನ್ನು ಪಾಲಿಸುವ ಮನೋಭಾವ ಹಾಗೂ ಇತರರಿಗೆ ಮಾದರಿಯಾಗುವ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಿ.

**ತುಲಾ:** ನಿಮ್ಮ ಸಾಮರ್ಥ್ಯದ ಅರಿವಾಗಿ ಹಾಗೂ ಸಹಕಾರ ಸಿಗುವ ವಿಶ್ವಾಸದಿಂದ ಈ ದಿನ ಮನೆಯವರು ಅಂತರಂಗದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿಬರಲಿದೆ.

**ವೃಶ್ಚಿಕ:** ಯೋಜನೆಗಳು ಕೈಗೂಡುವಂತೆ ಶನೈಶ್ಚರನಲ್ಲಿ ಪ್ರಾರ್ಥಿಸುವುದು ಒಳಿತು. ಸಹಾಯಕರಿಂದ ಕೆಲಸ ಮಾಡಿಸಿಕೊಳ್ಳುವ ಬದಲು, ತಾವೇ ಸ್ವತಃ ಕೆಲಸ ಮಾಡುವುದು ಉತ್ತಮ ಎಂದು ಅನಿಸಲಿದೆ.

**ಧನು:** ಅತಿ ಆತ್ಮವಿಶ್ವಾಸದಿಂದ ಸಾಮರ್ಥ್ಯ ಮೀರಿ ಹೆಚ್ಚಿನ ಕೆಲಸ ಮಾಡಲು ಹೋಗುವುದು ಸರಿಯಲ್ಲ. ಆದಾಯ ವೃದ್ಧಿಯೂ ವ್ಯಯಾಧಿಕ್ಯವೂ ಸಮತೋಲನವನ್ನು ಸಾಧಿಸುವುದು. ಸುಬ್ರಹ್ಮಣ್ಯನನ್ನು ಪೂಜಿಸಿ.

**ಮಕರ:** ಆಸ್ತಿ ಅಥವಾ ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳುವಿರಿ. ಯಶಸ್ಸಿನ ಪಥದಲ್ಲಿದ್ದೀರಿ. ಯಶಸ್ಸಿಗೆ ಕಾರಣರಾದವರನ್ನು ಜೊತೆಯಲ್ಲಿಯೇ ಇರಿಸಿಕೊಳ್ಳಿ. ಉನ್ನತ ಪದವಿ ಪಡೆಯಲು ಹೆಚ್ಚಿನ ತಯಾರಿ ನಡೆಸುವಿರಿ.

**ಕುಂಭ:** ಇತರರು ನಿಮ್ಮ ಸಮಯವನ್ನು ಯಾಚಿಸುತ್ತಿರುವುದರಿಂದ ನಿಮ್ಮ ಸ್ವಂತ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿವೆ. ಆಸ್ತಿ ಸಂಬಂಧಿತ ಕೆಲಸಗಳು ಅಡೆತಡೆಗಳಿಲ್ಲದೆ ನೆರವೇರಲಿವೆ. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ.

**ಮೀನ:** ಋಣಬಾಧೆಯಿಂದ ಮುಕ್ತರಾಗುವ ಬಗ್ಗೆ ಹೆಚ್ಚಿನ ಗಮನನೀಡಿ. ಬಾಳೆ ಮತ್ತು ಕಾಫಿ ಬೆಳೆಗಾರರಿಗೆ ಉತ್ತಮ ಆದಾಯ ಲಭಿಸುವುದು. ಕೌಟುಂಬಿಕ ಸವಾಲುಗಳನ್ನು ಎದುರಿಸಬೇಕಾಗಲಿದೆ.

## ಪದಬಂಧ 5976
– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
3.ಕ್ರೂರವಾದ ನೋಟ (4)
4.ನಾಡಿನಲ್ಲಿಯೇ ಪ್ರಸಿದ್ಧವಾಗಿರುವ ಲೋಕೋಕ್ತಿ! (3)
5.ಕೊನೆಗೆ ವಿಕ್ರಯಿಸಿ ಮೋಸ ಹೋಗು! (3)
6.ಯುದ್ಧಕ್ಕೊಂದು ಪರ್ಯಾಯ ಪದ (3)
8.ಕಳೆಯುವ ಲೆಕ್ಕವಿದು (5)
11.ಮುಳ್ಳುಗಳ ನಡುವೆ ಅರಳುವ ಹೂವು (3)
13.ವೃಕ್ಷದ ಹತ್ತಿರವೇ ಸಾವು! (3)
14.ಜಡಿಮಳೆಯಲ್ಲಿ ಖರೀದಿಸಿರುವ ವಂದರಿ (3)
15.ತೊಂದರೆ ನಿವಾರಣೆಗಾಗಿ ಮಾಡುವ ಮನವಿ (4)

**ಮೇಲಿಂದ ಕೆಳಕ್ಕೆ**
1.ಕಡೆದ ಮೊಸರು (2)
2.ಅಳುತ್ತಿರುವಾಗ ಕಾಣಿಸಿದ ಗುಲಾಮ (4)
3.ತರ್ಕ ಮಾಡುತ್ತಿರುವ ವ್ಯಾಪಾರಿ (3)
4.ನಾಗರೀಕರು ಹಿಡಿದಿರುವ ಎಳೆ (2)
5.ಒಂದುಗೂಡಿಸುವುದು (5)
7.ಇದು ಹೊಸದು (2)
9.ನಡುಗುತ್ತಿರುವವರನ್ನು ನೋಡಿ ಮಂದಹಾಸವೇ? (2)
10.ಮರೀಚಿಕೆ ಇಲ್ಲಿ ಕಾಣುತ್ತಿದೆ (4)
12.ಸೂರ್ಯನ ಕಾವು ಇಲ್ಲಿದೆ (3)
13.ಮಹಡಿಯಲ್ಲಿಯೇ ಮಾಡಿದ ಪಾತಿ! (2)
16.ಪೂರ್ತಿಯಾದ ಅರ್ಥ ಕೊಡಬಲ್ಲ ಶಬ್ದಗಳ ಗುಂಪು (2)



## 5975ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅವರೋಹ 3.ಮಸಲತ್ತು
5.ಆವಕ 6.ತಡಬಡ
7.ದಳಪತಿ 9.ತರದೂದು
11.ಅಪಸ್ಮಾರ 13.ಚಾಕರ
15.ಮದಕರಿ 16.ಸಮೀಕ್ಷಕ

**ಮೇಲಿಂದ ಕೆಳಕ್ಕೆ:**
1.ಅಟ್ಟೆ 2.ಹಳವಂಡ
3.ಮಕರಂದ 4.ತುಸ್ಸ
6.ತಡೆತ 8.ತಿಮಿರ
10.ದುರಾಚಾರಿ 11.ಅತಿರಸ
12.ಧೂಮ 14.ಚೌಕ

## ಸುಡೊಕು 6361

| | | | | | | | | |
|---|---|---|---|---|---|---|---|---|
| | | | 4 | | 3 | | 6 | |
| | 9 | | | | | | | 5 |
| | | | 5 | | 8 | 7 | | |
| | | 9 | | 3 | | | | 7 |
| | 3 | | | | 6 | | 5 | |
| 8 | | 6 | | 4 | | 2 | | 3 |
| | | 5 | | 2 | | | 3 | 4 |
| 3 | | | | | | 5 | 9 | |
| | 8 | 2 | | 5 | | | 7 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## 6360 ಸುಡೊಕು

| | | | | | | | | |
|---|---|---|---|---|---|---|---|---|
| 5 | 7 | 2 | 9 | 3 | 4 | 1 | 8 | 6 |
| 4 | 6 | 9 | 8 | 5 | 1 | 7 | 3 | 2 |
| 3 | 1 | 8 | 7 | 6 | 2 | 9 | 5 | 4 |
| 7 | 2 | 3 | 5 | 8 | 6 | 4 | 9 | 1 |
| 8 | 4 | 1 | 3 | 2 | 9 | 5 | 6 | 7 |
| 6 | 9 | 5 | 1 | 4 | 7 | 3 | 2 | 8 |
| 1 | 8 | 7 | 6 | 9 | 5 | 2 | 4 | 3 |
| 2 | 5 | 6 | 4 | 1 | 3 | 8 | 7 | 9 |
| 9 | 3 | 4 | 2 | 7 | 8 | 6 | 1 | 5 |

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

# WEEKEND CORNER

ಕ್ಲಾಸಿಫೈಡ್ಸ್


ENRICH PROPERTIES
SITES FOR SALE

YELAHANKA NEW TOWN
BBMP 'E' KHATA
ACTUAL PHOTOS
Pre Launch Offer ₹6700 Offer Price ₹6500 per Sqft
Rose Garden Layout 20 X 40 | 30 X 40 | 30 X 50
DC Conversion E Khata
BEFORE AIRPORT TOLL
BAGALUR SEZ ROAD
UPCOMING BBMP LIMITS
Aerovista Layout 30 X 35 | 30 X 40 | 30 X 50 | 40 X 50
₹44 Lacs onwords
Ready Construction Loans from LIC HFL, CANFIN HOMES, IDBI, PNB HFL
9900 698 748 | 9731 555 000

ನ್ಯಾಷನಲ್ ಸಿಲ್ಕ್ ಎಕ್ಸ್ ಪೋ

UP TO 50% DISCOUNT BY WEAVERS
ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ
ಸಿಲ್ಕ್, ಕಾಟನ್ ಸೀರೆ | ಡಿಸೈನ್ & ಸಾಂಪ್ರದಾಯಿಕ ಉಡುಗೆ | ಕುರ್ತಿ | ಫ್ಯಾಬ್ರಿಕ್ | ಇನ್ನೂ ಹಲವು
ಮಾರ್ಚ್ 8 ರಿಂದ 15ರ ವರೆಗೆ
ಹೊಸ ಹಾಗೂ ಇತ್ತೀಚಿನ ವೈವಿಧ್ಯಮಯ ವಿನ್ಯಾಸಗಳೊಂದಿಗೆ ಮದುವೆಯ ವಿಶೇಷ ಸಂಗ್ರಹ
ಭಾರತದಾದ್ಯಂತದ 15+ ಅಧಿಕೃತ ನೇಯ್ಗೆ ತಜ್ಞರಿಂದ ತಯಾರಿಸಿದ ಶುದ್ಧ ರೇಷ್ಮೆ ಮತ್ತು ಹತ್ತಿ ಸೀರೆಗಳು
ಬನಾರಸ್ ಸಿಲ್ಕ್, ಜಾಮದನಿ, ಲಕ್ನೋ ಚಿಕಾನ್, ಕಾಂಚಿಪುರಂ, ಬಿಹಾರ್ ಟಸ್ಸಾರ್ ಮತ್ತು ಮಟ್ಕಾ ಸಿಲ್ಕ್, ಚತ್ತೀಸ್‌ಗಢ್ ಕೊಸಾ ಸಿಲ್ಕ್, ಗುಜರಾತ್ ಪಟೋಲಾ ಮತ್ತು ಬಾಂಧಿನಿ, ಪಶ್ಚಿಮ ಬಂಗಾಳದ ಬಯಾಲು, ಬಲೂಚರಿ, ಢಕಾಯಿ ಜಾಮದನಿ, ಬಲುಚರಿ, ಕಾಂತಾ ಮತ್ತು ಹ್ಯಾಂಡ್ ಪ್ರಿಂಟೆಡ್ ಸಿಲ್ಕ್, ಧರ್ಮಾವರಂ, ಪೈಥಾನಿ, ಚಾಂದೇರಿ, ಎರಿ (ಅಹಿಂಸಾ) ಸೀರೆ, ಶಿಬೋರಿ & ಅಜ್ರಾಕ್ ಪ್ರಿಂಟ್, ಹ್ಯಾಂಡ್ ಕಲಾಂಕರಿ, ರಾಜಸ್ಥಾನಿ ಬಾಂಧಿನಿ, ಬ್ಲಾಕ್ ಪ್ರಿಂಟ್, ಡ್ರೆಸ್ ಮಟೇರಿಯಲ್ & ದೇಶಾದ್ಯಂತದ ಇನ್ನೂ ಅನೇಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ
ಸಿಂಧೂರ್ ಕನ್ವೆನ್ಷನ್ ಸೆಂಟರ್
15ನೇ ಕ್ರಾಸ್, ಸಾರಕ್ಕಿ 1ನೇ ಹಂತ, ಜೆ.ಪಿ.ನಗರ, ರಿಂಗ್ ರಸ್ತೆ, ಬೆಂಗಳೂರು
M: 9412258826 | ENTRY FREE | ALL UPI ONLINE / DEBIT & CREDIT CARDS ACCEPTED

PRM/KA/RERA/1251/310/PR/150223/005721
DS-MAX SAMYAK
LUXURIOUS 2 & 3-BHK APARTMENTS

DS MAX
MYSORE ROAD
Near Challaghatta Metro Station
2-BHK HOMES STARTS @ JUST
₹ 56.25 L*
BDA APPROVED | G + 14 FLOORS
CREDAI BENGALURU



*T & C Apply
8880 003 003
www.dsmaxproperties.com


ಪ್ರಜಾವಾಣಿ
## ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Teachers/ Professors

**NEW OXFORD** ENGLISH SCHOOL 6th CROSS GANDHINAGAR BANGALORE- 560009, REQUIRES EXPERIENCED TEACHERS TO TEACH MATHS, SCIENCE, SOCIAL, HINDI, DRAWING, PHYSICAL EDUCATION FOR NURSERY, PRIMARY, HIGH SCHOOL FOR THE ACADEMIC YEAR 2025-26. SCIENCE/ ARTS GRADUATES WITH B.Ed., N.T.T/TCH, D.Ed./CPEd. CALL/SEND RESUME-MAIL: noes.school@gmail.com PHONE: 080-41475015, 8884440204.

**REQUIRED FEMALE** Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail-maxmullerpublicschool.mlayout@gmail.com

**GREEN COUNTRY** PUBLIC SCHOOL (ICSE), requires TEACHERS for ENGLISH, HINDI, SOCIAL STUDIES & GEOGRAPHY. Walk in Interview 10.00am to 3.00pm / Apply thro. email : gcps2000@yahoo.co.in, Ph: 9535487053, 9482480397. Add.: KIA Road, Kodigehalli gate, Hebbal, Bangalore-560092.

**ELITE PUBLIC** SCHOOL Kempegowda Layout Laggere Bengaluru requires BA, B Ed, D Ed (History & English & Geography) Qualified Teachers. 9447727526/ 9980200444

**APPOLLO NATIONAL PUBLIC SCHOOL**
Affiliated to CBSE, New Delhi.
#86, 7th cross, Chowdeshwarinagar, Laggere, Bangalore-560058
Job Openings: Walk in Interview: on 23rd March 2025 Sunday
Time: 9:30 am to 12:00 noon

| | |
|---|---|
| Pre - Primary | Graduate with NTT |
| Primary Teachers - English, Hindi & Mathematics | Graduate + D.Ed / B.Ed (grades 1-5) |
| Secondary Teachers - Mathematics & Science | Graduate / Postgraduate + B.Ed (grades 6-10) |
| Computer Teacher | Graduate with BCA /MCA (grades 1 to 9) |
| Co-ordinator for Primary & Secondary (Females only) | Graduate / Postgraduate + B.Ed (grades 6-10) |
| Vice Principal (Females only) | Postgraduate + B.Ed with experience as HOD or Secondary Co-ordinator. |
| Admin officer, Receptionist (Females only) | Graduate |

All applicants must have good written and verbal communication with relevant board experience (min 2 to 5 years of experience).
Tel : 9538555257 / 9448933336, 080-28378666
Candidates can also apply resume on "anpswestbengaluru@gmail.com"

Sairam Institutions www.sairamgroup.in
**Sri SAIRAM PRE-UNIVERSITY COLLEGE**
Sai Leo Nagar, Guddanahalli (PO), Anekal, Bengaluru - 562 106
APPLICATIONS INVITED FOR FACULTY RECRUITMENT
PHYSICS / CHEMISTRY / MATHEMATICS / BIOLOGY
Qualification: B.E / MSc with B.Ed / Ph.D with relevant experience in teaching (Preferably CET/JEE/NEET teaching experience)
KANNADA /ENGLISH / HINDI
Qualification: M.A with B.Ed with relevant experience in teaching
COMPUTER SCIENCE
Qualification: B.E / M.E / M.Tech / MCA / MSc with relevant experience in teaching
Interested candidates can email their resumes to careers@sairampuc.edu.in
9900545105
www.sairampuc.edu.in
Anandaraju K, Principal
Dr. Sai Prakash LeoMuthu, Chairman & CEO
IMMEDIATE JOINING EXPECTED

**CAMLIN HIGH** SCHOOL State Board. Nursery to X, 6th 'C' Main, 4th Cross, Near 7th Main Bus Stop Hampinagar Bangalore-560104. Phone: 080-23301363 REQUIRED for TRAINED TEACHERS to Teach English, Kannada, Maths, Hindi, Science, Social Science, Drawing, Physical Education. Apply/ WALK-IN-INTERVIEW 10.a.m. to 2.p.m. with Resume and Latest Passport Size Photo OR send it to our e-mail: camlinschool84@gmail.com

**HOLY ANGEL'S** High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc., B.Ed M.A./M.Sc., M.Ed, N.T.T. CP.Ed. Only English Medium Candidates need to apply

### Walk-in

Smt. Bylamma Educational & Charitable Trust (R)
**HARWARD INTERNATIONAL SCHOOL**
CBSE Affiliation No. 830335
Dasanapura, Tumkur Road, Bengaluru North 562162
WALK-IN-INTERVIEW
PRINCIPAL - Expertise in English / Social Science having 10 years experience or above
PGT - Mathematics, English, Social, Biology,
TGT & PRT - All Subjects
Physical Education (Female),
Primary Coordinator, Event & Marketing Manager,
Pre Primary Teachers (NTT, MTT, ECCEd)
Eligible candidates mail your application with updated Bio-data to : email: infoharwardints@gmail.com
Contact : 9880112833 / 9945230285

### Wanted

SURIE POLEX
URGENT REQUIREMENT
OFFICE ASSISTANCE (Female)
Good Communication Skill & Basic Computer Knowledge
M/s SURIE POLEX INDUSTRIES Pvt. Ltd
# 17/40, 6th Cross, B.G. Road, B'lore-30
Mob: 93419 69809

### Part-Time Jobs

***OPPORTUNITY*** FEMALE/MALE GRADUATES Age 30-55years,Free Training, Good income & Foreign trip. @ Malleshwaram. JITENDRA:9901469625

### General

**'LIFE GUARD** Required for Swimming Pool. Please Contact Mobile 8970050795, Jp nagar phase 2

### Marketing & Sales

**WALK IN** Interview for Sales Manager & Sr.Sales Executive Experience in Machinery sales, Contact Pathak Engineers 9-B KIADB 2nd Phase Vidya Nagar, Peenya Bangalore- 560058 Contact 6360520121

## REAL ESTATE SELLING

### Commerical

#### V V Puram

**SALE 1364** sqft Commercial North facing property, 200 meters from K.R. Market Metro-Station. Contact: 9845310066

#### Kanakapura Road

**2 WAREHOUSES** Available in Jakkasandra 3rd Phase Bangalore Tenant Occupied Genuine buyers Contact-9606154546/ 9019851332

#### Rajarajeshwari Nagar

**SALE 50X90** Commercial Site BEML Layout 3rd Stage Surrounded By Jewelleries Show Rooms on 80feet Road Ct:9844134068 8073859758

#### Anjanapura

**SALE- BDA Commercial Site, Anjanapura 2nd Block, 80feet Road, only genuine buyers, brokers excuse. 8296495241**

#### Banashankari

**"BANASHANKARI 3RD-STAGE** 40x50 Demolition House, Banashankari 2nd Stage 40x62.5 for more details Call: 9845286505"

### Sites

#### Anjanapura

**WANTED ANJANAPURA** Banashankari 6th Stage JPNagar Near Kanakapura Road Any Measurement Immediate Settlement Call: 9964627255

**SALE: BDA** Site, 1500sft N/W Corner, 5th Block, Anjanapura,and 30x50sft House, Ground & First Floor at Bilekahalli, Near Someshwara Temple W/F. 9901549488

**BDA SITE** for SALE 30x40 Anjanapura,2nd phase contact Ravi-9945623424 /7829122658 AGENTS EXCUSE

**SITE FOR** Sale 50x80 Sqft, Anjanapura No. 43, 10th Block, Contact: 9845315124

#### Banashankari

**BANASHANKARI 6TH STAGE- BDA-** AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

**MANTRALAYA ENTERPRISES:** BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

**BANASHANKARI 6TH** Stage, 9th Block, BDA, 30x40sft, West Facing, Park attached, Rs.1.08Crore. Owner 9845259332

#### Bannerghatta Road

**BANNERUGHATTA** Road Akshaya nagar 2406 sft East Facing A Khata Prime Property For Sale 9845069739 7019619289 9886370968 9380613718

#### Electronic City

**SURYANAGAR HIG 1,** A Sector, 60x40 Site for Sale, Prime Location, Immediate Registration, Brokers Excuse. Call: 9945830228.

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

#### Jayanagar

**40X61 E/F** A Khatha Site at Byrasandra, Jayanagar 3rd Block East Rs.23,000/sft. Call: Dr.Roopak. 9880299011.

**JAYANAGAR 1ST** Block (40ft Road) 40X45 (East) Site for Sale. Only genuine buyer Contact: 9845045747.

#### J P Nagar

**JPNAGAR 3RD** Phase 45x61,Old Home /2nd Phase 35x40, Site 30000/- Jayanagar 5th Block,45x90, 45000/-: 9845704509

**BDA APPROVED** Layout Site 60x40 with House is for Sale Clear Titles Brokers Excuse: 9341273990

#### Kanakapura Road

**SALE: KANAKAPURA** Road, GUBALALA (Adjacent Jayanagar Cooperative Society) 40x55. Rs.13,299/sq.ft. BBMP A Katha Corner Residential Plot. 9880688499

**BANASHANKARI ANJANAPURA** BDA Sites Sale. 3,900 Sqft Site Sale Jayanagar Housing Layout 7,000/- Call-9740150364 /8884707773

#### Kempegowda Layout

***NADAPRABHU* KEMPEGOWDA** LAYOUT 7th Block 30x40 E/F,50x80 W/F and 8th Block 163X100 W/F (BDA NOC).Contact: 9686469799

**KEMPEGOWDA LAYOUT,** COMMERCIAL BDA SITE FOR SALE 20x30, 30x40, 40x60, 50x80, Contact: Kumar 9945119449

**NADA PRABHU** KEMPEGOWDA LAYOUT Kannahalli 1st Block, M-Sector 30x40 East Facing 8200/- (Negotiable): 9845857134

**BDA-SITE FOR-SALE** 20x30 and 40x60 at Good Location In Nadaprabhu Kempegowda Layout Call:7676900174 6363496142

#### Multiple Locations

**HSR LAYOUT** MLA Layout 50x80 South Site No. 1162, Jayanagara 8th Block 30x50 East 625, Vishweshwaraiah Layout 8th Block 30x40 South 979, RMV 2nd Stage 4th Block 40x60 West 118: 9845059328

#### Mysore Road

**"BIDADI TOWN** Muncipal 40x60 BMRDA Approved 50`Lakhs, BigBanyan Tree 30x50 North 35 Lakhs. 9845178335"

#### Nagarabhavi

**SALE: SITE** 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

#### Vishweshwariah Layout

**40X60 NORTH FACE** HIG,KHB LAYOUT Satellite Club Circle Vishweshwaraiah Layout 1st`Block 100`Feet Kengeri Main`Road, Behind Semi`Commercial Site Sale Reasonable Price Call:9945191143 9945694783.

**"VISHVESWARAIAH 1ST-BLOCK** 30x40 South/ West facing Site Sale Near 100`ft Road Genuine Buyers only: 9845268611"

**VISHWESHWARAIA LAYOUT** 40x60 BDA SITE Sale 3rd Block East Facing 40 Feet Road Contact: 9035470616

**BDA VISHWESHWARAIAH** Layout 4th Block 40x60 North 8500/-, 50x80 East 7750/, 20x30 South 7th Block 40ft Road Builder Location 78 Lakh Negotiable 8892901567

**"40X60 SITE** for sale Byere Gowda Layout Conversion near 41 RTO Office, Genuine Buyers Contact: 9663356556"

**BDA SITE** SMVL 7th Block 20×30 West Face Near Ullal RTO Good Location Contact: 8217392686

**SMV 2** Block 30x40 South, Near 100ft Road 6Th Block, 30x40 Oxford College. EAST: 9900224071

**"VISHVESHWARAIAH LAYOUT** 1st-Block 30x40 on 40`feet Road 1BHK House for sale.Owner-9886294610 (Brokers`Excuse)"

***DIRECT OWNER*** 30x40 BDA Site Sale VISHVESWARAIAH LAYOUT Ready to Construction, Near 100ft Road. 9742681666

**VISHWESHWARAIAH LAYOUT** 3rd Block 2400 Sqft BDA South Facing 30 Feet Road 12k Psqft: 9916119936

**BDA 60X40** Site for sale. South facing Rs. 3.5Cr. Immediate Sale. Brokers Excuse. Contact:- 9448455164.

#### Kengeri

**KENGERI MAILASANDRA** LAYOUT 'A' KHATA 40x50 East Facing Site Sale PER SQFT 11500/- CONTACT: 9845488488

#### Rajarajeshwari Nagar

**UNIVERSITY LAYOUT** Rajarajeswari Nagar 30x40 SF Behind RR Nagar Police Station 17200/- Per Sqft: 9845488488

#### Jakkur

**JAKKUR MCECHS** LAYOUT, 1st, 2nd Phase 30x40, 40x60 East. ARKAVATI 3rd Block 20x30, 30x40. 9535658860

### House

#### Banashankari

**30X42 DUPLEX** BUILDING for Sale, AGS Layout East South Corner, BBMP 'A' Katha. Call: 9611105595

#### J P Nagar

**J.P.NAGAR 3RD** Phase 45x61, North facing Excellent Residential old house, Agents Excuse, Suraj Realtors 9845232711

#### Kavalbyrasandra

**WELL MAINTAINED** 3 BHK GF 700 FF 650 WITH CAR PORCH PLOT SIZE 1500 SFT GENUINE BUYERS CONTACT OWNER 97400 69810

#### Malleshwaram

**MALLESWARAM PIPELINE** Road 30X41 Ground+3 Floor Ground 1 Car 3 Wheeler Parking 2 Bedroom, 1st & 2nd & 3rd all Floors 3 Bedroom 3 Attached. For Sale 9448045601/ 9535811626

#### Sadashiva Nagar

**LOWER PALACE OrchidSouth West Corner, 3420sqft with old house for sale at Sadashivanagar, Behind shell petrol pump Call 9844039482**

#### Uttarahalli

**4 BHK** Independent Triplex House S/E Corner with 1 Office Room & Bathroom in Parking. for Sale @ Poornapragna Layout Uttarahalli Contact Owner: 9900577363

#### Basavanagudi

**SALE 20X40,** BDA Site with 3000sft Building, E Katha, Rental income, 2.40Cr. Nego. Owner: 9845743555

MORE Classifieds Ads on Subsequent Pages


DH DECCAN HERALD Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com BOOK NOW
* Conditions apply
For more details contact:
+91 9901641752 | +91 9845114560 | +91 9900428036
+91 9731810277 | +91 9886213331 | 080- 45557163/164

# 6 ಸಾಧಕಿಯರಿಂದ ಮೋದಿ ಜಾಲತಾಣಗಳ ನಿರ್ವಹಣೆ

ವಿಶ್ವ ಮಹಿಳಾ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಸಾಮಾಜಿಕ ಮಾಧ್ಯಮ ಖಾತೆಗಳನ್ನು ವಿಜ್ಞಾನ, ಚೆಸ್, ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಆರು ಸಾಧಕಿಯರು ನಿರ್ವಹಣೆ ಮಾಡಿದರು. ಇವರು ತಾವು ಸಾಗಿಬಂದ ಅಸಾಧಾರಣ ಹಾದಿ, ಎದುರಾದ ಅಡೆತಡೆಗಳು ಮತ್ತು ತಮ್ಮ ಸಾಧನೆ ಕುರಿತ ಸ್ಫೂರ್ತಿದಾಯಕ ಅನುಭವಗಳನ್ನು ಹಂಚಿಕೊಂಡರು. ಈ ಮೂಲಕ ಭಾರತದ ಭವಿಷ್ಯವನ್ನು ರೂಪಿಸುವ 'ನಾರಿಶಕ್ತಿ'ಯನ್ನು ಅನಾವರಣಗೊಳಿಸಿದರು. ಈ ಹಿಂದೆ 2020ರಲ್ಲಿ ಸಹ ವಿಶ್ವ ಮಹಿಳಾ ದಿನದಂದು ಪ್ರಧಾನಿ ಅವರ ಸಾಮಾಜಿಕ ಮಾಧ್ಯಮ ಖಾತೆಗಳನ್ನು ವಿವಿಧ ಸಾಧಕಿಯರು ನಿರ್ವಹಿಸಿದ್ದರು.

**ವೈಶಾಲಿ ರಮೇಶ್‌ಬಾಬು**

ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಹೆಮ್ಮೆ ತಂದ ತಮಿಳುನಾಡಿನ ಚೆಸ್ ಗ್ರ್ಯಾಂಡ್ ಮಾಸ್ಟರ್

**ಕನಸನ್ನು ಹಿಂಬಾಲಿಸಿ, ಅಡೆತಡೆಗಳಿಗೆ ಹೆದರದಿರಿ. ನಿಮ್ಮ ಉತ್ಸಾಹವೇ ನಿಮ್ಮ ಶಕ್ತಿ**

**ಅನಿತಾ ದೇವಿ**

ಸುಸ್ಥಿರ ಕೃಷಿ ಮೂಲಕ ನೂರಾರು ಮಹಿಳೆಯರನ್ನು ಸಬಲೀಕರಣ-ಗೊಳಿಸಿರುವ ಇವರು 'ಬಿಹಾರದ ಅಣಬೆ ಮಹಿಳೆ' ಎಂದೇ ಹೆಸರಾಗಿದ್ದಾರೆ

**ನನ್ನೊಂದಿಗೆ ಕೆಲಸ ಮಾಡಿದ ಮಹಿಳೆಯರು ಹಣವನ್ನಷ್ಟೇ ಸಂಪಾದನೆ ಮಾಡುತ್ತಿಲ್ಲ; ಆತ್ಮಗೌರವವನ್ನೂ ಗಳಿಸಿದ್ದಾರೆ. ಆರ್ಥಿಕ ಸ್ವಾತಂತ್ರ್ಯವು ಸಮಾಜದಲ್ಲಿ ಮಹಿಳೆಯ ಸ್ಥಾನಮಾನವನ್ನು ಉತ್ತಮಪಡಿಸುತ್ತದೆ**

**ಎಲಿನಾ ಮಿಶ್ರಾ**

ಭಾಭಾ ಅಣುಶಕ್ತಿ ಸಂಶೋಧನಾ ಕೇಂದ್ರದ (ಬಿಎಆರ್‌ಸಿ) ಪರಮಾಣು ವಿಜ್ಞಾನಿ. ಪ್ರೊಟಾನ್ ಆಕ್ಸಿಲರೇಟರ್ ತಂತ್ರಜ್ಞಾನ ಮತ್ತು ಸಂಪರ್ಕ ಸಾಧ್ಯವಿರದ ಪ್ರದೇಶಗಳಿಗೆ ಆರೋಗ್ಯ ಸೇವೆ ಒದಗಿಸುವ ಯೋಜನೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ

**ಅಜೈತಾ ಶಾ**

'ಫ್ರಾಂಟಿಯರ್ ಮಾರ್ಕೆಟ್ಸ್' ಸಂಸ್ಥಾಪಕಿ ಮತ್ತು ಸಿಇಒ. ಸಾವಿರಾರು ಮಹಿಳೆಯರನ್ನು ಗ್ರಾಮೀಣ ಭಾಗದ ಉದ್ಯಮಿಗಳಾಗಿ ಪರಿವರ್ತನೆ ಮಾಡಿದ್ದಾರೆ

**ಆರ್ಥಿಕವಾಗಿ ಸಬಲೀಕರಣಗೊಂಡ ಮಹಿಳೆ ಉತ್ತಮ ನಿರ್ಧಾರ ಕೈಗೊಳ್ಳುತ್ತಾಳೆ, ಸ್ವತಂತ್ರ ಚಿಂತಕಿಯಾಗಿರುತ್ತಾಳೆ, ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುತ್ತಾಳೆ ಮತ್ತು ಆಧುನಿಕ ಭಾರತದ ನಿರ್ಮಾತೃವಾಗುತ್ತಾಳೆ!**

**ಡಾ.ಅಂಜಲಿ ಅಗರ್ವಾಲ್**

ವಕೀಲೆಯಾಗಿರುವ ಇವರು, ಭಾರತದಲ್ಲಿ ಮೂಲಸೌಕರ್ಯಕ್ಕಾಗಿ ಮೂರು ದಶಕಗಳ ಕೆಲಸ ಮಾಡಿದ್ದಾರೆ.

**ಪ್ರತಿಯೊಬ್ಬ ಮಹಿಳೆ, ಪ್ರತಿಯೊಬ್ಬ ವ್ಯಕ್ತಿಯು ಸ್ವಾತಂತ್ರ್ಯ ಮತ್ತು ಘನತೆಯಿಂದ ಜೀವಿಸಬಹುದು ಎಂದು ಜಗತ್ತಿಗೆ ಸಾರೋಣ**

**ಶಿಲ್ಪಿ ಸೋನಿ**

ಬಾಹ್ಯಾಕಾಶ ವಿಜ್ಞಾನಿ. ಇಸ್ರೊದಲ್ಲಿ 24 ವರ್ಷ ಸೇವೆ ಸಲ್ಲಿಸಿದ್ದಾರೆ. ಸುಮಾರು 35 ಸಂವಹನ ಮತ್ತು ಪಥದರ್ಶಕ ಕಾರ್ಯಕ್ರಮಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸಂಸ್ಥೆಯ ಮಂಗಳೂರು–ಮಸ್ಕತ್ ವಿಮಾನದ ದೈನಂದಿನ ಕಾರ್ಯಾಚರಣೆಯನ್ನು ಶನಿವಾರ ಮಹಿಳಾ ಸಿಬ್ಬಂದಿ ನಿರ್ವಹಿಸಿದರು. ದೇಶೀಯ ಹಾಗೂ ಅಂತರರಾಷ್ಟ್ರೀಯ ಒಟ್ಟು 14 ವಿಮಾನಗಳ ನಿರ್ವಹಣೆಯನ್ನು ಸಂಪೂರ್ಣವಾಗಿ ಮಹಿಳಾ ಸಿಬ್ಬಂದಿ ನಿರ್ವಹಿಸಿದರು ಎಂದು ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಕಟಣೆ ತಿಳಿಸಿದೆ

**ನಾವು ವಿಶ್ವದ 3ನೇ ಅತಿದೊಡ್ಡ ಅರ್ಥ ವ್ಯವಸ್ಥೆ ಆಗುವತ್ತ ಹೆಜ್ಜೆ ಇರಿಸುತ್ತಿರುವಾಗ ಉದ್ಯೋಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಬೇಕು**
**ದ್ರೌಪದಿ ಮುರ್ಮು,** ರಾಷ್ಟ್ರಪತಿ

**ಸರ್ಕಾರವು ಮಹಿಳಾ ಸಬಲೀಕರಣಕ್ಕಾಗಿ ಕೆಲಸ ಮಾಡಿದ್ದು, ಅದು ನಮ್ಮ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ಪ್ರತಿಫಲಿಸುತ್ತಿದೆ**
**ನರೇಂದ್ರ ಮೋದಿ,** ಪ್ರಧಾನಿ

### ಮೋದಿ ಹೇಳಿದ್ದು...

'ಭಾರತವು ಮಹಿಳಾ ನೇತೃತ್ವದ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ' ಎಂದು ಗುಜರಾತ್‌ನ ನವಸಾರಿ ಜಿಲ್ಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜನರನ್ನು ಉದ್ದೇಶಿಸಿ ಮಾತನಾಡಿದರು.

- ಹೆಣ್ಣುಮಗಳು ಮನೆಗೆ ತಡವಾಗಿ ಬಂದರೆ ಪೋಷಕರು ಆಕೆಯನ್ನು ಪ್ರಶ್ನಿಸುತ್ತಾರೆ. ಇದೇ ಪ್ರಶ್ನೆಯನ್ನು ಮಗನಿಗೂ ಕೇಳಬೇಕು
- ದೂರು ದಾಖಲಿಸುವುದನ್ನು ಸರಳಗೊಳಿಸಲಾಗಿದೆ ಮತ್ತು ತುರ್ತಾಗಿ ನ್ಯಾಯ ಒದಗಿಸಲಾಗುತ್ತಿದೆ
- ಸರ್ಕಾರವು ಮಹಿಳೆಯರ ವಿರುದ್ಧದ ಗಂಭೀರ ಅಪರಾಧ ಪ್ರಕರಣಗಳ ವಿಚಾರಣೆಗಾಗಿ ತ್ವರಿತ ವಿಚಾರಣಾ ನ್ಯಾಯಾಲಯಗಳನ್ನು ಸ್ಥಾಪಿಸಿದೆ

### 'ಒಬ್ಬನನ್ನು ಕೊಲ್ಲಲು ಅನುಮತಿ ನೀಡಿ'

ಮುಂಬೈ: ಮಹಿಳೆಯ ವಿರುದ್ಧ ದೌರ್ಜನ್ಯ ನಡೆಸಿದ ಒಬ್ಬ ವ್ಯಕ್ತಿಯನ್ನು ಕೊಲ್ಲಲು ಅನುಮತಿ ನೀಡಬೇಕು ಮತ್ತು ಅದಕ್ಕಾಗಿ ನಮಗೆ ಶಿಕ್ಷೆಯಿಂದ ರಕ್ಷಣೆ ನೀಡಬೇಕು ಎಂದು ಎನ್‌ಸಿಪಿ (ಶರದ್ ಪವಾರ್ ಬಣ) ಮಹಿಳಾ ಘಟಕವು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದೆ. ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ರೋಹಿಣಿ ಖಡಸೆ ಅವರು, 'ಮಹಿಳೆಯು ದಬ್ಬಾಳಿಕೆ ಮತ್ತು ಅತ್ಯಾಚಾರಿ ಮನಃಸ್ಥಿತಿಯನ್ನು ಕೊಲ್ಲಲು ಬಯಸುತ್ತಾಳೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರ ವಿರುದ್ಧದ ದೌರ್ಜನ್ಯ ಹೆಚ್ಚುತ್ತಿದೆ. ಎಲ್ಲ ಮಹಿಳೆಯರ ಪರವಾಗಿ ದೌರ್ಜನ್ಯ ಎಸಗಿದ ಒಬ್ಬ ವ್ಯಕ್ತಿಯನ್ನು ಕೊಲ್ಲಲು ಅನುಮತಿ ನೀಡಿ, ಶಿಕ್ಷೆಯಿಂದ ರಕ್ಷಣೆ ನೀಡಬೇಕು' ಎಂದು ಕೋರಿದ್ದಾರೆ.

### ಮಹಿಳಾ ದಿನದ ವಿಶೇಷಗಳು

- ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರಿಗೆ ಮಹಿಳೆಯರನ್ನು ಒಳಗೊಂಡ ಭದ್ರತಾ ತಂಡವು ಶನಿವಾರ ರಕ್ಷಣೆ ನೀಡಿತು. ಯಾದವ್ ಅವರ ವಾಹನ ಚಾಲನೆ, ಭದ್ರತೆ ಸೇರಿದಂತೆ ಎಲ್ಲವನ್ನೂ ಮಹಿಳಾ ಅಧಿಕಾರಿಗಳು ನಿರ್ವಹಿಸಿದರು
- ಜಾರ್ಖಂಡ್‌ನಲ್ಲಿ ರಾಂಚಿ–ಟೋರಿ ಪ್ರಯಾಣಿಕ ರೈಲನ್ನು ಮಹಿಳಾ ಸಿಬ್ಬಂದಿ ನಿರ್ವಹಿಸಿದರು
- ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು 100 ಗುಲಾಬಿ ಬಣ್ಣದ ಆಟೊಗಳನ್ನು ಮಹಿಳಾ ಫಲಾನುಭವಿಗಳಿಗೆ ವಿತರಿಸಿದರು
- ರೈಲ್ವೆ ಸುರಕ್ಷತಾ ಪಡೆಯ ಮಹಿಳಾ ಸಿಬ್ಬಂದಿಗೆ ಚಿಲ್ಲಿ ಸ್ಪ್ರೇ ಕ್ಯಾನ್‌ಗಳನ್ನು (ಖಾರದ ಪುಡಿಯ ಸ್ಪ್ರೇ) ನೀಡಲು ಭಾರತೀಯ ರೈಲ್ವೆ ನಿರ್ಧರಿಸಿದೆ. ಮಹಿಳಾ ಸಿಬ್ಬಂದಿಗೆ ತಮಗೆ ಎದುರಾಗುವ ಸವಾಲುಗಳು, ಬೆದರಿಕೆಗಳನ್ನು ನಿಭಾಯಿಸಲು ಇದು ನೆರವಾಗುತ್ತದೆ ಎಂದು ಅದು ಅಭಿಪ್ರಾಯಪಟ್ಟಿದೆ.
- 'ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್–ಸಾಯಿನಗರ್ ಶಿರಡಿ ವಂದೇ ಭಾರತ್ ಎಕ್ಸ್‌ಪ್ರೆಸ್' ರೈಲಿನಲ್ಲಿ ಲೋಕೊ ಪೈಲಟ್‌ನಿಂದ ಹಿಡಿದು ರೈಲು ಸೇವೆಯ ಎಲ್ಲ ವರ್ಗದ ಸಿಬ್ಬಂದಿಯೂ ಮಹಿಳೆಯರೇ ಆಗಿದ್ದರು. ಶನಿವಾರ ಏಷ್ಯಾದ ಮೊದಲ ಲೋಕೊ ಪೈಲಟ್ ಸುರೇಖಾ ಯಾದವ್ ಅವರು ರೈಲನ್ನು ಚಲಾಯಿಸಿದರು. ರೈಲ್ವೆ ಇಲಾಖೆಯಲ್ಲಿ ಇಂತಹ ಪ್ರಯೋಗ ನಡೆದದ್ದು ಇದೇ ಮೊದಲು.

ಮುಕ್ತ ಸಂಚಾರ ವಿರೋಧಿಸಿ ಪ್ರತಿಭಟನೆ

# ಮಣಿಪುರ: ಪ್ರತಿಭಟನಕಾರ ಸಾವು

ಕಾಂಗ್‌ಪೋಕ್‌ಪಿ ಜಿಲ್ಲೆಯಲ್ಲಿ ವಾಹನವೊಂದಕ್ಕೆ ಬೆಂಕಿ ಹಚ್ಚಿದರು ಪಿಟಿಐ ಚಿತ್ರ

ಇಂಫಾಲ್ (ಪಿಟಿಐ): ಮಣಿಪುರದ ಕಾಂಗ್‌ಪೋಕ್‌ಪಿ ಜಿಲ್ಲೆಯ ವಿವಿಧೆಡೆ ಕುಕಿ ಸಮುದಾಯದ ಪ್ರತಿಭಟನ-ಕಾರರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಘರ್ಷಣೆಯಲ್ಲಿ ಒಬ್ಬ ಪ್ರತಿಭಟನಕಾರ ಮೃತಪಟ್ಟಿದ್ದು, 40 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡೇಟಿನಿಂದ ಗಾಯಗೊಂಡಿದ್ದ 30 ವರ್ಷ ವಯಸ್ಸಿನ ಲಾಲ್‌ಗೌಥಾಂಗ್ ಸಿಂಗ್‌ಸಿತ್ ಎನ್ನುವವರು ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟರು. ಗಾಯಗೊಂಡಿರುವ 27 ಮಂದಿ ಭದ್ರತಾ ಪಡೆ ಸಿಬ್ಬಂದಿ ಮತ್ತು ಮಹಿಳೆಯರು ಹಾಗೂ ನಾಗರಿಕರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಮಣಿಪುರದಲ್ಲಿ ಜನರ ಸಂಚಾರಕ್ಕೆ ನಿರ್ಬಂಧಗಳು ಇರಬಾರದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿರುವ ಸೂಚನೆಯನ್ನು ಕುಕಿ ಸಮುದಾಯದ ಕೆಲವರು ವಿರೋಧಿಸಿದ್ದರು. ಸೂಚನೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದವರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿದಾಗ, ಭದ್ರತಾ ಪಡೆಗಳು ಮತ್ತು ಪ್ರತಿಭಟನಕಾರರ ನಡುವೆ ಘರ್ಷಣೆ ಉಂಟಾಯಿತು.

ಪ್ರತಿಭಟನೆಯಲ್ಲಿ ಭಾಗಿಯಾದವರು ಹಲವು ಖಾಸಗಿ ವಾಹನಗಳಿಗೆ ಬೆಂಕಿ ಹಚ್ಚಿ, ಇಂಫಾಲ್‌ನಿಂದ ಸೇನಾಪತಿ ಜಿಲ್ಲೆಗೆ ತೆರಳುತ್ತಿದ್ದ ಸರ್ಕಾರಿ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸನ್ನು ತಡೆಯಲು ಯತ್ನಿಸಿದಾಗ ಪರಿಸ್ಥಿತಿ ಇನ್ನಷ್ಟು ವಿಷಮಗೊಂಡಿತು.

ಪ್ರತಿಭಟನಕಾರರು ಇಂಫಾಲ್–ದಿಮಪುರ ಹೆದ್ದಾರಿಯಲ್ಲಿ ಸಂಚಾರಕ್ಕೆ ಅಡ್ಡಿಪಡಿಸಿದರು. ಸರ್ಕಾರಿ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟುಮಾಡಲು ಟೈರ್‌ಗಳಿಗೆ ಬೆಂಕಿ ಹಚ್ಚಿದರು.

ಮೈತೇಯಿ ಸಮುದಾಯದ 'ಫೆಡರೇಷನ್ ಆಫ್ ಸಿವಿಲ್ ಸೊಸೈಟಿ' ಸಂಘಟನೆ ಆಯೋಜಿಸಿದ್ದ ಶಾಂತಿ ನಡಿಗೆಯನ್ನು ಕೂಡ ಪ್ರತಿಭಟನಕಾರರು ವಿರೋಧಿಸಿದರು. 10 ವಾಹನಗಳು ಇದ್ದ ಈ ಶಾಂತಿ ನಡಿಗೆಯು ಕಾಂಗ್‌ಪೋಕ್‌ಪಿ ಜಿಲ್ಲೆ ತಲುಪುವ ಮೊದಲೇ ಭದ್ರತಾ ಪಡೆಗಳು ತಡೆದವು.

ಈ 'ನಡಿಗೆ'ಗೆ ಅನುಮತಿ ಇರಲಿಲ್ಲ. ಹೀಗಾಗಿ ಅದನ್ನು ತಡೆಯುವಂತೆ ಸೂಚನೆ ಇತ್ತು ಎಂದು ಪೊಲೀಸರು ಹೇಳಿದ್ದಾರೆ. ಶನಿವಾರದಿಂದ ರಾಜ್ಯದಲ್ಲಿ ಮುಕ್ತ ಸಂಚಾರಕ್ಕೆ ಅವಕಾಶ ಇರಲಿದೆ ಎಂದು ಶಾ ಅವರು ಹೇಳಿದ್ದನ್ನು ತಾವು ಪಾಲಿಸುತ್ತಿದ್ದುದಾಗಿ ಸಂಘಟನೆಯ ಪ್ರತಿನಿಧಿಗಳು ಹೇಳಿದ್ದಾರೆ.

ಮುಕ್ತ ಸಂಚಾರಕ್ಕೆ ಅವಕಾಶ ಕಲ್ಪಿಸಿರುವ ಕೇಂದ್ರದ ನಡೆಯನ್ನು ತಾನು ವಿರೋಧಿಸುತ್ತಿರುವುದಾಗಿ ಕುಕಿ–ಜೊ ಗ್ರಾಮ ಸ್ವಯಂಸೇವಕರ ಗುಂಪೊಂದು ವಿಡಿಯೊ ಬಿಡುಗಡೆ ಮಾಡಿದೆ. ಆದರೆ ಈ ವಿಡಿಯೊ ನೈಜತೆ ಪರಿಶೀಲಿಸಲು ಸಾಧ್ಯವಾಗಿಲ್ಲ. 'ನಮ್ಮ ಪ್ರದೇಶಕ್ಕೆ ಬರಲು ಯತ್ನಿಸಿದರೆ ಭಾರಿ ಪ್ರತಿರೋಧ ಎದುರಾಗಲಿದೆ. ಪ್ರತ್ಯೇಕ ಆಡಳಿತ ಜಾರಿಗೆ ಬರುವವರೆಗೆ ಮುಕ್ತ ಸಂಚಾರ ಇಲ್ಲ' ಎಂದು ವಿಡಿಯೊದಲ್ಲಿ ಸ್ವಯಂಸೇವಕನೊಬ್ಬ ಹೇಳಿದ್ದಾನೆ.

## ಮಹಾರಾಷ್ಟ್ರ: ಔರಂಗಜೇಬ್‌ನ 'ಸಮಾಧಿ' ರಾಜಕೀಯ

ಪ್ರಜಾವಾಣಿ ವಾರ್ತೆ

ಮುಂಬೈ: ಮೊಘಲ್ ಚಕ್ರವರ್ತಿ ಔರಂಗಜೇಬ್ 'ಸಮಾಧಿ'ಯು ಮಹಾರಾಷ್ಟ್ರ ರಾಜಕೀಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಸರ್ಕಾರದ ಅಧೀನದಲ್ಲಿರುವ ಸಮಾಧಿಯನ್ನು ಕೂಡಲೇ ಕೆಡವಿಹಾಕಬೇಕು ಎಂದು ಬಲಪಂಥೀಯ ಸಂಘಟನೆಗಳು, ಬಿಜೆಪಿ ನಾಯಕರು, ಛತ್ರಪತಿ ಶಿವಾಜಿ ಕುಟುಂಬಸ್ಥರು ಒತ್ತಾಯಿಸಿದ್ದಾರೆ.

ಛತ್ರಪತಿ ಸಂಭಾಜಿ ನಗರ ಜಿಲ್ಲೆಯ (ಔರಂಗಾಬಾದ್) ಖುಲ್ದಾಬಾದ್‌ನ ದರ್ಗಾ ಆವರಣದಲ್ಲಿ ಔರಂಗಜೇಬ್ ಸಮಾಧಿ ಇದೆ. ಮೊಘಲ್ ರಾಜ ಮನೆತನದ 6ನೇ ಚಕ್ರವರ್ತಿಯ ಈ ಸಮಾಧಿಯನ್ನು ಭಾರತೀಯ ಪುರಾತತ್ವ ಇಲಾಖೆ (ಎಎಸ್‌ಐ) ನಿರ್ವಹಿಸುತ್ತಿದೆ.

'ಸಿಂಧುದುರ್ಗ್ ಕೋಟೆ ಆವರಣದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ದೇವಾಲಯ ನಿರ್ವಹಣೆಗೆ ಮಾಸಿಕ ₹250 ನೀಡಲಾಗುತ್ತಿದೆ. ಔರಂಗಜೇಬ್ ಸಮಾಧಿಗೆ 2021–22ರಲ್ಲಿ ₹2.55 ಲಕ್ಷ ಹಾಗೂ 2023ರಲ್ಲಿ ₹2 ಲಕ್ಷ ಖರ್ಚು ಮಾಡಲಾಗಿದೆ. ಸಮಾಧಿಗೆ ಆರ್ಥಿಕ ನೆರವು ನೀಡುವುದನ್ನು ಸರ್ಕಾರ ಕೂಡಲೇ ನಿಲ್ಲಿಸಬೇಕು' ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ಸಂಯೋಜಕ ಸುನಿಲ್ ಗನವತ್ ಒತ್ತಾಯಿಸಿದ್ದಾರೆ.

'ಔರಂಗಜೇಬ್ ಸಮಾಧಿಯನ್ನು ಕೆಡವಿಹಾಕಬೇಕು. ಆತ ಕಳ್ಳ, ದರೋಡೆಕೋರ. ಛತ್ರಪತಿ ಶಿವಾಜಿ ಕುಟುಂಬಸ್ಥರ ವಿರುದ್ಧ ಹೇಳಿಕೆ ನೀಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಶಿವಾಜಿ ಮಹಾರಾಜರ 13ನೇ ವಂಶಸ್ಥ, ಸತಾರಾ ರಾಜವಂಶಸ್ಥ ಹಾಗೂ ಬಿಜೆಪಿ ಸಂಸದ ಛತ್ರಪತಿ ಉದಯರಾಜೆ ಭೋಂಸ್ಲೆ ಒತ್ತಾಯಿಸಿದ್ದಾರೆ. ಮಹಾರಾಷ್ಟ್ರ ಬಂದರು ಹಾಗೂ ಮೀನುಗಾರಿಕಾ ಸಚಿವ ನಿತೇಶ್ ರಾಣೆ ಅವರೂ ಈ ಅಭಿಪ್ರಾಯ-ವನ್ನು ಬೆಂಬಲಿಸಿದ್ದಾರೆ.

## ಪುಣೆ: ಮಹಿಳೆಯರ ಎದುರೇ ಮೂತ್ರ ವಿಸರ್ಜಿಸಿದ ಯುವಕ

ಪ್ರಜಾವಾಣಿ ವಾರ್ತೆ

ಮುಂಬೈ: ಪುಣೆ ನಗರದ ಯೆರವಾಡ ಪ್ರದೇಶದಲ್ಲಿ ಯುವಕನೊಬ್ಬ ಸಾರ್ವಜನಿಕವಾಗಿ ರಸ್ತೆ ಬದಿಯಲ್ಲಿ ಮಹಿಳೆಯರ ಎದುರಿನಲ್ಲೇ ಮೂತ್ರ ವಿಸರ್ಜಿಸಿ, ಕಾರಿನಲ್ಲಿ ಕುಳಿತು ಅಶ್ಲೀಲವಾಗಿ ವರ್ತಿಸಿದ ವಿಡಿಯೊ ಒಂದು ಅಂತರರಾಷ್ಟ್ರೀಯ ಮಹಿಳಾ ದಿನದಂದು ಸಾಮಾಜಿಕ ಜಾಲ-ತಾಣಗಳಲ್ಲಿ ಹರಿದಾಡಿದೆ.

ಪುಣೆಯ ಸಾಮಾಜಿಕ ಕಾರ್ಯಕರ್ತ ವಿಜಯ್ ಕುಂಬಾರ್ ಈ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

ಬಿಎಂಡಬ್ಲ್ಯು ಕಾರಿನಲ್ಲಿ ಸ್ನೇಹಿತನ ಜೊತೆ ಬಂದ ಗೌರವ್ ಅಹುಜಾ, ಕಾರನ್ನು ರಸ್ತೆ ನಡುವೆ ನಿಲ್ಲಿಸಿ, ಜನನಿಬಿಡ ಸ್ಥಳದಲ್ಲಿಯೇ ಮೂತ್ರ ವಿಸರ್ಜಿಸಿದ್ದಾನೆ. ಈತ ರೆಸ್ಟೋರೆಂಟ್ ಮಾಲೀಕ ಮನೋಜ್ ಅಹುಜಾ ಎನ್ನುವವರ ಮಗ. ಈ ಘಟನೆ ಶನಿವಾರ ಬೆಳಿಗ್ಗೆ ನಡೆದಿದೆ.

# 'ಬಿಜೆಪಿಗಾಗಿ ಕೆಲಸ ಮಾಡುವ ಕಾಂಗ್ರೆಸ್ ನಾಯಕರನ್ನು ಹೊರಗಿಡುವ ಅಗತ್ಯವಿದೆ'

ಅಹಮದಾಬಾದ್ (ಪಿಟಿಐ): 'ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡು ಬಿಜೆಪಿಗಾಗಿ ಕೆಲಸ ಮಾಡುವ ನಾಯಕರನ್ನು ಹೊರಗಿಡುವ ಅಗತ್ಯವಿದೆ' ಎಂದು ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತಿಳಿಸಿದರು. 'ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಜೊತೆಗೆ ಪಕ್ಷದಿಂದಲೇ ತೆಗೆದುಹಾಕಲಾಗುವುದು' ಎಂದರು.

ಗುಜರಾತ್ ಪ್ರವಾಸದಲ್ಲಿರುವ ಅವರು ಎರಡನೇ ದಿನ ಪಕ್ಷದ ಕಾರ್ಯಕರ್ತ ರನ್ನು ಉದ್ದೇಶಿಸಿ ಮಾತ-ನಾಡಿ,'ಪಕ್ಷದಲ್ಲಿ ರುವ ನಾಯಕರು ಹಾಗೂ ಕಾರ್ಯಕರ್ತರನ್ನು ಎರಡು ಗುಂಪುಗಳಾಗಿ ಪ್ರತ್ಯೇಕಿಸಬೇಕಿದೆ. ಒಂದು ಗುಂಪಿನವರು ಹೃದಯದೊಳಗೆ ಪಕ್ಷದ ಸಿದ್ಧಾಂತ ಇಟ್ಟುಕೊಂಡವರು ಜನರ ಕಷ್ಟಗಳಿಗೆ ಧ್ವನಿಯಾಗಿ, ಜನರಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಮತ್ತೊಂದು ಗುಂಪು ಜನರಿಂದಲೂ ದೂರವಿದ್ದು, ಬಿಜೆಪಿ ಜೊತೆಗಿದೆ. ಇಂತಹವರನ್ನು ಪ್ರತ್ಯೇಕಿಸಿ, ಪಕ್ಷದಿಂದ ತೆಗೆದುಹಾಕಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಇಂತಹ ಎರಡು ಗುಂಪುಗಳನ್ನು ಪ್ರತ್ಯೇಕಿಸುವ ತನಕ ಗುಜರಾತ್‌ನ ಜನರು ಪಕ್ಷವನ್ನು ನಂಬುವುದಿಲ್ಲ' ಎಂದರು.

'ರಾಜ್ಯದ ವಜ್ರ, ಜವಳಿ ಹಾಗೂ ಸೆರಾಮಿಕ್ ಉದ್ಯಮಗಳು ಸಂಕಷ್ಟ-ದಲ್ಲಿವೆ. ಗುಜರಾತ್‌ನ ಜನರು ಹೊಸ ದೃಷ್ಟಿಗಾಗಿ ಎದುರು ನೋಡುತ್ತಿದ್ದಾರೆ. ಕಳೆದ 20ರಿಂದ 25 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಈ ವಿಚಾರದಲ್ಲಿ ವಿಫಲವಾಗಿದೆ' ಎಂದು ಅವರು ತಿಳಿಸಿದರು.

ರಾಹುಲ್ ಗಾಂಧಿ ಅವರು ಶುಕ್ರವಾರ ಪಕ್ಷದ ನಾಯಕರು ಹಾಗೂ ಬ್ಲಾಕ್ ಅಧ್ಯಕ್ಷರ ಜೊತೆಗೆ ಸಭೆ ನಡೆಸಿದ್ದರು. ಏ. 8–9ರಂದು ಅಹಮದಾಬಾದ್‌ನಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಅಧಿವೇಶನ ನಡೆಯಲಿದೆ.

**ರಾಜ್ಯದಲ್ಲಿ ಈಗ ಪಡೆದ ಮತಕ್ಕಿಂತ ಶೇ 5ರಷ್ಟು ಹೆಚ್ಚು ಮತಗಳನ್ನು ಪಡೆದು ಅಧಿಕಾರಕ್ಕೆ ಬರಬಹುದು. ತೆಲಂಗಾಣದಲ್ಲಿ ಶೇ 22ರಷ್ಟು ಹೆಚ್ಚು ಮತ ಪಡೆದು ಅಧಿಕಾರ ಪಡೆದಿದ್ದೇವೆ**
**ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

**ರಾಹುಲ್ ಗಾಂಧಿ ತಮಗೆ ತಾವೇ ಟೀಕೆ ಮಾಡಿಕೊಂಡಿದ್ದಾರೆ. ಚುನಾವಣಾ ಸೋಲಿಗೆ ತಾವೇ ಹಿಡಿದುಕೊಂಡ ಕನ್ನಡಿ ಇದು**
**ಶಹಜಾದ್ ಪೂನಾವಾಲ**
ಬಿಜೆಪಿ ರಾಷ್ಟ್ರೀಯ ವಕ್ತಾರ

## ಮಹಿಳೆಯರಿಗೆ ಮಾಸಿಕ ₹2,500: ಸಂಪುಟ ಅಸ್ತು

ನವದೆಹಲಿ (ಪಿಟಿಐ): ಮಹಿಳಾ ಸಮೃದ್ಧಿ ಯೋಜನೆಗೆ ₹5,100 ಕೋಟಿ ಅನುದಾನ ನೀಡುವ ಪ್ರಸ್ತಾವಕ್ಕೆ ದೆಹಲಿಯ ಸಚಿವ ಸಂಪುಟವು ಅನುಮೋದನೆ ನೀಡಿದೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿರುವ ಮಹಿಳೆಯರು ಈ ಯೋಜನೆಯ ಅಡಿ ಮಾಸಿಕ ₹2,500 ಆರ್ಥಿಕ ನೆರವು ಪಡೆಯಲಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಶನಿವಾರ ತಿಳಿಸಿದರು.

ಅಂತರರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ, ದೆಹಲಿಯ ಜೆಎಲ್‌ಎನ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ 'ಮಹಿಳಾ ದಿವಸ್' ಕಾರ್ಯಕ್ರಮದಲ್ಲಿ ನಡ್ಡಾ ಅವರು ಮಾತನಾಡಿದರು.

ಮಹಿಳಾ ಸಮೃದ್ಧಿ ಯೋಜನೆಯ ಮೂಲಕ ದೆಹಲಿ ಮಹಿಳೆಯರ ಸಬಲೀಕರಣಕ್ಕೆ ಮುಂದಡಿ ಇಡಲಾಗಿದೆ. ಈ ಯೋಜನೆಯು ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ನಡ್ಡಾ ಅವರು ಹೇಳಿದರು. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಸೇರಿ ಹಲವು ನಾಯಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಸುರಂಗ ಕುಸಿತ ರಕ್ಷಣಾ ಕಾರ್ಯಾಕ್ಕೆ ರೋಬೊ

ನಾಗರಕರ್ನೂಲ್ (ತೆಲಂಗಾಣ) (ಪಿಟಿಐ): ಶ್ರೀಶೈಲಂ ಎಡದಂಡೆ ಕಾಲುವೆ (ಎಸ್‌ಎಲ್‌ಬಿಸಿ) ಕುಸಿದು, ಅದರ ಒಳಭಾಗದಲ್ಲಿ ಸಿಲುಕಿರುವ 8 ಕಾರ್ಮಿಕರ ರಕ್ಷಣಾ ಕಾರ್ಯಕ್ಕೆ ರೋಬೊಗಳನ್ನು ನಿಯೋಜಿಸುವಂತೆ ತೆಲಂಗಾಣ ನೀರಾವರಿ ಸಚಿವ ಎನ್. ಉತ್ತಮ್ ಕುಮಾರ್ ರೆಡ್ಡಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲೆಯ ದೋಮಲಪೆಂಟ ಗ್ರಾಮದ ಬಳಿ ನಿರ್ಮಾಣ ಹಂತದಲ್ಲಿರುವ ಸುರಂಗದ ಒಂದು ಭಾಗ ಫೆ.22ರಂದು ಕುಸಿಯಿತು. ಅಂದಿನಿಂದ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

ಯಂತ್ರದಿಂದ ಸುರಂಗವನ್ನು ಕೊರೆಯುವ ಕಾರ್ಯಾಚರಣೆಯಲ್ಲಿ ರಕ್ಷಣಾ ಸಿಬ್ಬಂದಿ ಅಪಾಯಕ್ಕೆ ಒಳಗಾಗುವ ಕಾರಣ ರೋಬೊಗಳ ನಿಯೋಜನೆಗೆ ಸರ್ಕಾರಕ್ಕೆ ಮುಂದಾಗಿದೆ. ಸುರಂಗ ಇರುವ ಸ್ಥಳಕ್ಕೆ ಭೇಟಿ ನೀಡಿ, ರಕ್ಷಣಾ ಕಾರ್ಯಾಚರಣೆಯ ಪರಿಶೀಲನೆ ನಡೆಸಿದ ಉತ್ತಮ್ ಕುಮಾರ್, 'ರೋಬೊ ತಜ್ಞರ ನೆರವಿನೊಂದಿಗೆ ರಕ್ಷಣಾ ಕಾರ್ಯಾಚರಣೆ ನಡೆಸಲು ಸರ್ಕಾರವು ₹4 ಕೋಟಿ ಖರ್ಚು ಮಾಡಲಿದೆ' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

### ಕಲ್ಯಾಣ ಮಂಟಪದಲ್ಲಿ ಜಗಳ: ಬಾಲಕನ ಹತ್ಯೆ

ಬಲಿಯಾ, ಉತ್ತರಪ್ರದೇಶ (ಪಿಟಿಐ): ಮದುವೆಯಲ್ಲಿ ನೃತ್ಯ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಜಗಳ ನಡೆಸಿದ್ದು, 15 ವರ್ಷದ ಬಾಲಕನೊಬ್ಬನನ್ನು ಹತ್ಯೆ ಮಾಡಲಾಗಿದೆ. ಮತ್ತೊಬ್ಬರು ಗಾಯಗೊಂಡಿದ್ದಾರೆ. ಮೃತನನ್ನು ಕೃಷ್ಣ ರಾಜ್‌ಭರ್ (15) ಎಂದು ಗುರುತಿಸಲಾಗಿದೆ.

'ಇಲ್ಲಿನ ಛಾಕ್ಕನ್ ಗ್ರಾಮದಲ್ಲಿ ಮದುವೆ ನಡೆಯುತ್ತಿತ್ತು. ರಾಜ್‌ಭರ್ ಹಾಗೂ ಮತ್ತೊಬ್ಬ ಸಂಬಂಧಿಕರು ಅಲ್ಲಿ ನೃತ್ಯ ಮಾಡುತ್ತಿದ್ದ ವೇಳೆ ಗಲಾಟೆ ನಡೆದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಓಂವೀರ್ ಸಿಂಗ್ ತಿಳಿಸಿದರು. 'ಪರಸ್ಪರ ಹಾರ ಬದಲಾಯಿಸಿಕೊಳ್ಳುವ ವೇಳೆ ಕೆಲವು ವ್ಯಕ್ತಿಗಳು ಏಕಾಏಕಿ ದಾಳಿ ನಡೆಸಿದರು. ಈ ವೇಳೆ ವರನ ಸಹೋದರನು ಗುಂಡಿನ ದಾಳಿಗೆ ಮೃತಪಟ್ಟ' ಎಂದು ವಧುವಿನ ತಂದೆ ಮಾಧ್ಯಮಗಳಿಗೆ ಮಾಹಿತಿ ನೀಡಿದರು. ದಾಳಿ ನಡೆಸಿವರು ಯಾರು? ಯಾವ ಕಾರಣಕ್ಕೆ ದಾಳಿ ನಡೆದಿದೆ ಎಂದು ಗೊತ್ತಾಗಿಲ್ಲ.

ಮಾಹಿತಿ ತಿಳಿದ ತಕ್ಷಣವೇ, ಪೊಲೀಸರು ಸ್ಥಳಕ್ಕೆ ಧಾವಿಸಿ ಮೃತ ವ್ಯಕ್ತಿಯ ದೇಹವನ್ನು ಮರಣೋತ್ತರ ಪರೀಕ್ಷೆಗೆ ಕೊಂಡೊಯ್ದರು.

### ಕಳ್ಳಸಾಗಣೆ: ಒಬ್ಬ ಸಾವು

ಸಿಲಿಗುರಿ (ಪಶ್ಚಿಮ ಬಂಗಾಳ): ಪಶ್ಚಿಮ ಬಂಗಾಳದಲ್ಲಿನ ಭಾರತ ಮತ್ತು ಬಾಂಗ್ಲಾದೇಶ ಗಡಿಯಲ್ಲಿ ಕಳ್ಳಸಾಗಣೆಗೆ ಯತ್ನಿಸುತ್ತಿದ್ದ ಬಾಂಗ್ಲಾದೇಶಿಯರನ್ನು ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಶುಕ್ರವಾರ ತಡೆದಿದೆ. ಈ ವೇಳೆ ಒಬ್ಬ ಬಾಂಗ್ಲಾದೇಶಿ ಪ್ರಜೆ ಮೃತಪಟ್ಟಿದ್ದು, ಬಿಎಸ್‌ಎಫ್‌ನ ಸೈನಿಕರೊಬ್ಬರಿಗೆ ಗಾಯಗಳಾಗಿವೆ.

ಜಾನುವಾರುಗಳು ಮತ್ತು ನಿಷಿದ್ಧ ವಸ್ತುಗಳನ್ನು ಕಳ್ಳಸಾಗಣೆ ಮಾಡಲು ಬಾಂಗ್ಲಾದೇಶದ 15ರಿಂದ 20 ಜನರಿದ್ದ ಗುಂಪು ಅಕ್ರಮವಾಗಿ ಭಾರತವನ್ನು ಪ್ರವೇಶಿಸಿದೆ. ಶರಣಾಗುವಂತೆ ತಾಕೀತು ಮಾಡಿದ ಬಿಎಸ್‌ಎಫ್ ಸೈನಿಕರ ವಿರುದ್ಧವೇ ಕೋಲು ಮತ್ತು ಕಲ್ಲುಗಳಿಂದ ದಾಳಿ ನಡೆಸಿದರು ಎಂದು ವಕ್ತಾರರೊಬ್ಬರು ತಿಳಿಸಿದರು.

ಬಿಎಸ್‌ಎಫ್ ಗುಂಡಿನ ದಾಳಿ ನಡೆಸುತ್ತಿದ್ದಂತೆ, ದಾಳಿಕೋರರು ಪರಾರಿಯಾಗಿದ್ದಾರೆ. ಅಕ್ರಮವಾಗಿ ಸಾಗಿಸಲು ಪ್ರಯತ್ನಿಸುತ್ತಿದ್ದ ಎರಡು ಜಾನುವಾರುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

### ನಿಧಿಗಾಗಿ ಹುಡುಕಾಟ: ತನಿಖೆಗೆ ಆದೇಶ

ಭೋಪಾಲ್ (ಪಿಟಿಐ): ಅಸೀರ್‌ಗಢ ಕೋಟೆಯ ಸುತ್ತಲೂ ನಿಧಿಗಾಗಿ ಜನರು ಭೂಮಿ ಅಗೆಯುತ್ತಿದ್ದಂತೆ ಮಧ್ಯಪ್ರದೇಶದ ಬುರ್ಹಾನ್‌ಪುರ ಜಿಲ್ಲಾಡಳಿತವು ತನಿಖೆ ಆರಂಭಿಸಿದೆ ಎಂದು ಶನಿವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಕ್ಕಿ ಕೌಶಲ್ ನಟನೆಯ 'ಛಾವಾ' ಚಿತ್ರದಲ್ಲಿ ಕೋಟೆಯಲ್ಲಿ ನಿಧಿ ಇರುವ ದೃಶ್ಯವಿದೆ. ಇದರಿಂದಾಗಿ ವದಂತಿ ಹಬ್ಬಿದ್ದು, ಎರಡು ದಿನಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕೋಟೆಯ ಬಳಿ ಬರುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕೆಲವರು ಬಂಗಾರದ ನಾಣ್ಯಗಳಿಗಾಗಿ ನೆಲವನ್ನು ಅಗೆಯುತ್ತಿದ್ದಾರೆ ಎಂದು ತಿಳಿದುಬಂದಿದೆ. ಸ್ಥಳಕ್ಕೆ ಭೇಟಿ ನೀಡಿ, ತನಿಖೆ ನಡೆಸುವಂತೆ ಉಪವಿಭಾಗೀಯ ಮ್ಯಾಜಿಸ್ಟ್ರೇಟ್‌ಗೆ (ಎಸ್‌ಡಿಎಂ) ತಿಳಿಸಿದ್ದೇನೆ. ಒಂದು ವೇಳೆ ಜನರಿಗೆ ನಾಣ್ಯಗಳು ದೊರೆತರೂ ಅವು ಪುರಾತತ್ವ ಪ್ರಾಮುಖ್ಯ ಹೊಂದಿರುವುದರಿಂದ ಸರ್ಕಾರದ ಆಸ್ತಿ ಎಂದು ಪರಿಗಣಿಸಲಾಗುವುದು' ಎಂದು ಬುರ್ಹಾನ್‌ಪುರ ಜಿಲ್ಲಾಧಿಕಾರಿ ಹರ್ಷ ಸಿಂಗ್ ತಿಳಿಸಿದ್ದಾರೆ.

### ಯಾಂತ್ರಿಕ ಆನೆ ಕೊಡುಗೆ ನೀಡಿದ ನಟಿ



ಪಾರ್ವತಿ ನಾಯರ್

ತಿರುವನಂತಪುರ (ಪಿಟಿಐ): ಪೆಟಾ (ಪೀಪಲ್ ಫಾರ್ ಎ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್) ಸಹಯೋಗದಲ್ಲಿ ನಟಿ ಪಾರ್ವತಿ ನಾಯರ್ ಅವರು ಕೇರಳದ ಪ್ರಸಿದ್ಧ ಪೆರುಮ್‌ಕಡವಿಲ್ಲಾದ ಶ್ರೀ ಬಾಲಭದ್ರಕಾಳಿ ಕ್ಷೇತ್ರಕ್ಕೆ ಯಾಂತ್ರಿಕ ಆನೆಯೊಂದನ್ನು ಕೊಡುಗೆಯಾಗಿ ನೀಡಿದ್ದಾರೆ.

ಮೂರು ಮೀಟರ್ ಎತ್ತರದ, 800 ಕೆ.ಜಿ. ತೂಕವಿರುವ ಯಾಂತ್ರಿಕ ಆನೆಗೆ 'ದೇವಿ ದಾಸ' ಎಂದು ಹೆಸರಿಡಲಾಗಿದೆ. ಶುಕ್ರವಾರ ಸಂಜೆ ದೇವಾಲಯಕ್ಕೆ ಅದನ್ನು ಕೊಡುಗೆಯಾಗಿ ನೀಡಲಾಗಿದೆ ಎಂದು ಪೆಟಾ ಶನಿವಾರ ತಿಳಿಸಿದೆ. ಬ್ರಿಟನ್‌ನ ಆ್ಯಕ್ಷನ್ ಫಾರ್ ಎಲಿಫೆಂಟ್ಸ್ (ಎಎಫ್‌ಇ) ಸಂಸ್ಥೆಯು ಈ ಕೊಡುಗೆಯನ್ನು ಪ್ರಾಯೋಜಿಸಿದೆ ಎಂದು ಪೆಟಾ ತನ್ನ ಹೇಳಿಕೆಯಲ್ಲಿ ತಿಳಿಸಿದೆ. 'ನಿಜವಾದ ಆನೆಗಳನ್ನು ಕಾಡಿನಲ್ಲಿ ತಮ್ಮ ಕುಟುಂಬದೊಂದಿಗೆ ಇರಲು ಬಿಟ್ಟು, ದೇವಿ ದಾಸನನ್ನು ಕ್ರೌರ್ಯಮುಕ್ತವಾಗಿ ದೇವಾಲಯದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಬಳಸಿಕೊಳ್ಳಬಹುದು' ಎಂದು ಪೆಟಾ ಹೇಳಿದೆ.

## ಒಂದಾಗಿ ಸಾಗಿ: ಖರ್ಗೆ

ಒಂದನೇ ಪುಟದಿಂದ...

ರಾಜಕೀಯ ಹೇಳಿಕೆಗಳನ್ನು ನೀಡಬಾರದು ಎಂದು ಖರ್ಗೆಯವರು ಕಟು ಮಾತಿನಲ್ಲಿ ಎಚ್ಚರಿಕೆ ನೀಡಿದ್ದರೂ, ಹೇಳಿಕೆ ನೀಡುವುದನ್ನು ಸಚಿವರು, ಶಾಸಕರು ಮುಂದುವರಿಸಿದ್ದಾರೆ.

ಈ ಬೆಳವಣಿಗೆಗಳ ಮಧ್ಯೆಯೇ, ಇಲ್ಲಿ ಮಾತನಾಡಿದ ಖರ್ಗೆ ಅವರು 'ಅಭಿವೃದ್ಧಿಗೆ ಹೊರತಾದ ಮಾತುಗಳನ್ನಾಡಿದರೆ ರಾಜ್ಯದ ಜನ ಒಪ್ಪುವುದಿಲ್ಲ. ಇಬ್ಬರೂ ಒಟ್ಟಾಗಿ ಸಾಗಿ' ಎಂದು ವೇದಿಕೆಯ ಮೇಲಿದ್ದ ಶಿವಕುಮಾರ್ ಅವರನ್ನು ಉದ್ದೇಶಿಸಿ ಹೇಳಿದ್ದಲ್ಲದೇ, ಒಟ್ಟಾಗಿ ಹೋಗಬೇಕು ಎಂಬುದನ್ನು ಕೈಸನ್ನೆ ಮಾಡಿ ತೋರಿಸಿದರು.

ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಸಹಯೋಗದಲ್ಲಿ ಶನಿವಾರ ಇಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ 1,150 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ₹1,000 ಕೋಟಿ ವೆಚ್ಚದ 'ಕಲ್ಯಾಣ ಪಥ' ಯೋಜನೆಗೆ ಖರ್ಗೆಯವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ, ಇಂಧನ ಸಚಿವರಾಗಿ, ಜಲಸಂಪನ್ಮೂಲ ಸಚಿವರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ಉತ್ತಮವಾದ ಬಜೆಟ್ ಮಂಡಿಸಿದ್ದಾರೆ. ಇಬ್ಬರಿಗೂ ಅಭಿನಂದನೆಗಳು. ಇಬ್ಬರೂ ಅಭಿವೃದ್ಧಿ ವಿಚಾರಗಳನ್ನು ಮಾತನಾಡಬೇಕು. ಇಬ್ಬರೂ ಸೇರಿದರಷ್ಟೇ ನಮ್ಮ ಕೆಲಸಗಳು ಆಗುತ್ತವೆ. ಇಲ್ಲದಿದ್ದರೆ ಕಷ್ಟ. ನಮಗೆ ಉತ್ತಮ ರಸ್ತೆಗಳು, ಶಾಲೆಗಳು, ನೀರಾವರಿ, ಆರೋಗ್ಯ ಕೇಂದ್ರಗಳು ಬೇಕು. ಇದನ್ನು ಸಾಧಿಸಲು ಇಬ್ಬರೂ ನಾಯಕರು ಒಂದಾಗಿ ಹೋಗಬೇಕು' ಎಂದರು.

'ಕಲ್ಯಾಣ ಕರ್ನಾಟಕ ಸೇರಿದಂತೆ ಈ ಭಾಗದಲ್ಲಿಯೇ ಜನರು ನಮ್ಮ ಪಕ್ಷಕ್ಕೆ ಏಳು ಸ್ಥಾನಗಳನ್ನು ನೀಡಿದ್ದಾರೆ. ನಿಮಗೆ ಶಕ್ತಿ ಕೊಡುವವರೂ ನಾವೇ. ಆ ಶಕ್ತಿ ಕೊಟ್ಟವರ ಹೊಟ್ಟೆಗೆ ಆಹಾರ ಕೊಡಿ. ನಿಮ್ಮ ಪ್ರತಿಯೊಂದು ಯೋಜನೆಗಳು ಮೈಸೂರಿನಿಂದ ಆರಂಭವಾಗಿ ದಾವಣಗೆರೆಗೆ ಕೊನೆಗೊಳ್ಳುತ್ತವೆ. ಇನ್ನು ಮುಂದೆ ಕಲ್ಯಾಣ ಕರ್ನಾಟಕದಿಂದ ಆರಂಭಿಸಬೇಕು. ಕಲ್ಯಾಣ ಕ್ರಾಂತಿಯ ಈ ನೆಲದಿಂದ ಯೋಜನೆಗಳು ಶುರುವಾದರೆ ಕೊಳ್ಳೇಗಾಲದವರೆಗೂ ತಲುಪುತ್ತವೆ' ಎನ್ನುವ ಮೂಲಕ ಈ ಭಾಗದ ಅಭಿವೃದ್ಧಿಗೆ ಗಮನ ಹರಿಸಬೇಕು ಎಂದು ಸೂಚನೆ ನೀಡಿದರು.

ಪೂಜೆ ಸಲ್ಲಿಸಲು 'ದಾಸ' ಕುಟುಂಬಗಳ ಹೋರಾಟ

# ದಲಿತರಿಗೆ ದೇಗುಲ ಪ್ರವೇಶ ನಿರಾಕರಣೆ

ಕೋಲ್ಕತ್ತ/ಕಟವಾ (ಪಿಟಿಐ): ಪಶ್ಚಿಮ ಬಂಗಾಳದ ಪೂರ್ವ ಬರ್ಧಮಾನ್ ಜಿಲ್ಲೆಯ ಸುಮಾರು 130 ದಲಿತ ಕುಟುಂಬದವರು ದೇವರನ್ನು ಪೂಜಿಸುವ ತಮ್ಮ ಹಕ್ಕನ್ನು ಪಡೆದುಕೊಳ್ಳಲು ಈಗ ಪೊಲೀಸರು ಹಾಗೂ ಜಿಲ್ಲಾ ಆಡಳಿತದ ಮೇಲೆ ಕೊನೆಯ ಭರವಸೆ ಇಟ್ಟುಕೊಂಡಿದ್ದಾರೆ.

ದಾಸಪಾರಾ ಮತ್ತು ಗಿಧ್‌ಗ್ರಾಮ್ ಗ್ರಾಮಗಳ ಹಿಂದಿನಿಂದ ಚಪ್ಪಲಿ ಹೊಲಿಯುವ ಮತ್ತು ನೇಕಾರಿಕೆಯ ಕೆಲಸಗಳಲ್ಲಿ ತೊಡಗಿರುವ ಕುಟುಂಬಗಳ (ದಾಸ್ ಎಂಬುದು ಇವರ ಉಪನಾಮ) ಇವರು ಇಲ್ಲಿನ ಶಿವ ದೇವಸ್ಥಾನದಿಂದ ಬಲವಂತವಾಗಿ ದೂರ ಉಳಿದಿದ್ದಾರೆ ಎನ್ನಲಾಗಿದೆ. 'ನಾವು ಕೆಳ ಜಾತಿಗಳಿಗೆ ಸೇರಿದವರು ಎಂಬ ಕಾರಣ ಹೇಳಿ ದೇವಸ್ಥಾನದ ಸಮಿತಿಯವರು ಮತ್ತು ಇತರ ಗ್ರಾಮಸ್ಥರು ದೇವಸ್ಥಾನದಿಂದ ನಮ್ಮನ್ನು ದೂರ ಇರಿಸಿದ್ದಾರೆ' ಎಂದು ಸಂತ್ರಸ್ತರು ಆರೋಪಿಸಿದ್ದಾರೆ.

ಬೇಸತ್ತಿರುವ ಇವರು ಈಗ ತಮ್ಮ ಹೋರಾಟಕ್ಕೆ ತಾರ್ಕಿಕ ಅಂತ್ಯ ಕಾಣಿಸುವ ಆಲೋಚನೆ-ಯಲ್ಲಿದ್ದಾರೆ. ಈ ಕುಟುಂಬಗಳಿಗೆ ದೇವಸ್ಥಾನ ಪ್ರವೇಶಿಸಲು ಅವಕಾಶ ಕಲ್ಪಿಸಲು ಪೊಲೀಸರು ಮತ್ತು ಸ್ಥಳೀಯ ಆಡಳಿತವು ಇಬ್ಬರು ಶಾಸಕರ ಸಮ್ಮುಖದಲ್ಲಿ ನಡೆಸಿದ ಯತ್ನವು ವಿಫಲವಾಗಿದೆ.

ಫೆ. 24ರಂದು ಕಟವಾ ಎಸ್‌ಡಿಒಗೆ ಮನವಿ ಸಲ್ಲಿಸಿದ್ದ ಆರು ಕುಟುಂಬಗಳು, ಶಿವರಾತ್ರಿಯ ದಿನ ತಮಗೆ ದೇವಸ್ಥಾನದಲ್ಲಿಪೂಜೆ ಸಲ್ಲಿಸಲು ಭದ್ರತೆ ಕಲ್ಪಿಸಬೇಕು ಎಂದು ಕೋರಿದ್ದವು. 'ನಾವು ಪೂಜಿಸಲು ತೆರಳಿದರೆ ನಮ್ಮ ಜೊತೆ ಕೆಟ್ಟದಾಗಿ ವರ್ತಿಸುತ್ತಾರೆ. ದೇವಸ್ಥಾನದಿಂದ ಹೊರಹಾಕುತ್ತಾರೆ. ಕೆಲವರು ನಾವು ಹೋದರೆ ಮಹಾದೇವನಿಗೆ ಅಶೌಚ ವಾಗುತ್ತದೆ ಎನ್ನುತ್ತಾರೆ' ಎಂದು ಅವರು ಸಲ್ಲಿಸಿರುವ ಮನವಿಯಲ್ಲಿ ವಿವರಿಸಲಾಗಿದೆ.

ಸಂತ್ರಸ್ತ ಕುಟುಂಬಗಳಿಗೆ ಶಿವರಾತ್ರಿಯಂದು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಆಗಲಿಲ್ಲ. ಸ್ಥಳೀಯ ಶಾಸಕರು ಮತ್ತು ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ, ಸಂತ್ರಸ್ತ ಕುಟುಂಬಗಳಿಗೆ ಭವಿಷ್ಯದಲ್ಲಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸುವ ನಿರ್ಣಯ ಕೈಗೊಳ್ಳಲಾಯಿತು. ಅದು ಇನ್ನೂ ಜಾರಿಗೆ ಬಂದಿಲ್ಲ.

'ಮಾರ್ಚ್ 7ರಂದು ದೇವಸ್ಥಾನ ಭೇಟಿ ಇಟ್ಟುಕೊಳ್ಳುವಂತೆ ಹೇಳಿದರು. ಅಂದು ಅಲ್ಲಿಗೆ ಹೋದಾಗ, ಪರಿಸ್ಥಿತಿ ಬಿಗುವಿನಿಂದ ಕೂಡಿದೆ ಎಂಬುದು ನಮಗೆ ಗೊತ್ತಾಯಿತು. ಪೂಜೆ ಸಲ್ಲಿಸದೆ ವಾಪಸ್ ಬಂದೆವು' ಎಂದು ಎಕ್ಕೋರಿ ದಾಸ್ ಎನ್ನುವವರು ತಿಳಿಸಿದರು.

ಗ್ರಾಮಸ್ಥರ ಸೂಚನೆ ಆಧರಿಸಿ ಹಲವು ಕಂಪನಿಗಳು ನಮ್ಮಿಂದ (ದಾಸ್ ಕುಟುಂಬಗಳಿಂದ) ಹಾಲು ಸಂಗ್ರಹಿಸುವುದನ್ನು ನಿಲ್ಲಿಸಿವೆ. ಇದರಿಂದಾಗಿ 30–40 ಕುಟುಂಬಗಳ ಜೀವನೋಪಾಯಕ್ಕೆ ತೊಂದರೆ ಆಗಿದೆ ಎಂದು ಎಕ್ಕೋರಿ ಹೇಳಿದರು. ಸಮಸ್ಯೆಯನ್ನು ಮಾತುಕತೆಯ ಮೂಲಕ ಮಾತ್ರವೇ ಪರಿಹರಿಸಬಹುದು ಎಂದು ಮಂಗಲಕೋಟ್ ಶಾಸಕ ಅಪೂರ್ವ ಚೌಧರಿ ಹೇಳಿದರು.

'ನಾವು ಈ ಹೋರಾಟವನ್ನು ಕೊನೆಯವರೆಗೂ ಒಯ್ಯುತ್ತೇವೆ. ಕೋಲ್ಕತ್ತಮತ್ತು ದೆಹಲಿಯ ಬಾಗಿಲು ಬಡಿಯುತ್ತೇವೆ. ಅಥವಾ ನಮ್ಮದೆಲ್ಲವನ್ನೂ ಗಂಟುಕಟ್ಟಿಕೊಂಡು ನಮ್ಮ ಪೂರ್ವಿಕರ ಮನೆಗಳನ್ನು ತೊರೆಯುತ್ತೇವೆ' ಎಂದು ಎಕ್ಕೋರಿ ಹೇಳಿದರು.

**ಮುಖ್ಯಾಂಶಗಳು**

- **ಶಿವರಾತ್ರಿ ಪೂಜೆಗೆ ಸಿಗದ ಅವಕಾಶ**
- **ಹಾಲು ಖರೀದಿಸದಂತೆ ಕಂಪನಿಗಳಿಗೆ ಸೂಚನೆ**
- **40 ಕುಟುಂಬಗಳಿಗೆ ತೊಂದರೆ**

**ಪರಂಪರೆ ಪಾಲಿಸುತ್ತಿದ್ದಾರೆ**

ಅವರು ಹಿಂದಿನ ಪರಂಪರೆಯನ್ನು ಪಾಲಿಸುತ್ತ, ದೇವಸ್ಥಾನದೊಳಕ್ಕೆ ಯಾವತ್ತೂ ಕಾಲಿರಿಸಿಲ್ಲ. ಈ ಪದ್ಧತಿಯನ್ನು ಮುರಿಯಲು ಗ್ರಾಮದಲ್ಲಿ ಯಾರಿಗೂ ಒಲವಿಲ್ಲ. ಅವರು ಬಲವಂತವಾಗಿ ಒಳಗೆ ಬರಲು ಯತ್ನಿಸಿದರೆ ಗ್ರಾಮದಲ್ಲಿ ಶಾಂತಿಗೆ ಭಂಗ ಉಂಟಾಗುವ ಸಾಧ್ಯತೆ ಹೆಚ್ಚಿದೆ.
**ದೀನಬಂಧು ಮೊಂಡಲ್,** ದೇವಸ್ಥಾನ ಸಮಿತಿಯ ಸದಸ್ಯ

## ಜೆಸಿಬಿ ತಗುಲಿ ಮಗು ಸಾವು

ಲಖನೌ: ನಿರ್ಮಾಣ ಹಂತದ ಕಟ್ಟಡದ ಜಾಗದಲ್ಲಿ ಜೆಸಿಬಿ ಚಾಲಕನೊಬ್ಬ ಕೆಲಸ ಮಾಡುತ್ತಿದ್ದ ವೇಳೆ 6 ವರ್ಷದ ಮಗುವಿಗೆ ಆಕಸ್ಮಿಕವಾಗಿ ಡಿಕ್ಕಿ ಹೊಡೆದು, ಮೃತಪಟ್ಟ ಪ್ರಕರಣ ಹರ್ದೋಯಿ ಜಿಲ್ಲೆಯಲ್ಲಿ ಶನಿವಾರ ನಡೆದಿದೆ.

ಜೆಸಿಬಿ ಚಾಲಕ ವರ್ಷಾ ಸಿಂಗ್, ಬಂಧನದ ಭೀತಿಯಿಂದ ಪಾರಾಗಲು ಡಿಕ್ಕಿಯಾದ ಜಾಗದಲ್ಲೇ ಮಗುವಿನ ದೇಹದ ಮೇಲೆ ಮಣ್ಣಿನ ರಾಶಿ ಹಾಕಿ ಮುಚ್ಚಿಹಾಕಿದ್ದ. ಮಗು ಕಣ್ಮರೆಯಾದ ಕುರಿತು ಮಗುವಿನ ಹೆತ್ತವರು ಪೊಲೀಸರಿಗೆ ದೂರು ನೀಡಿದ್ದರು.

## ಪ್ರವಾಸಿಗ ಸಾವು ಇಬ್ಬರ ಬಂಧನ

ಒಂದನೇ ಪುಟದಿಂದ...

**ಆಗಿದ್ದೇನು?:** ತುಂಗಭದ್ರಾ ನದಿಯ ಕಾಲುವೆಯ ಪಕ್ಕದ ರಸ್ತೆಯಲ್ಲಿ ರಾತ್ರಿ ವೇಳೆ ಕುಳಿತು ನಕ್ಷತ್ರಗಳನ್ನು ನೋಡುತ್ತ ಪ್ರಕೃತಿ ಅಸ್ವಾದಿಸುವುದು ಸಾಣಾಪುರ ಭಾಗದಲ್ಲಿ ಸಾಮಾನ್ಯ.

ಅದರಂತೆ ಇಸ್ರೇಲ್, ಅಮೆರಿಕ, ಮಹಾರಾಷ್ಟ್ರ, ಒಡಿಶಾ ಪ್ರವಾಸಿಗರು ಸ್ಥಳೀಯ ಹೋಮ್ ಸ್ಟೇಯೊಂದರ ಒಡತಿ ಜೊತೆ ಗುರುವಾರ ರಾತ್ರಿ ಕುಳಿತು ಗಿಟಾರ್ ಬಾರಿಸುತ್ತಿದ್ದರು. ಆಗ ಬೈಕ್ ಮೇಲೆ ಬಂದ ಮೂವರು ದುಷ್ಕರ್ಮಿಗಳು ಮೊದಲು ಹಣಕ್ಕೆ ಬೇಡಿಕೆಯಿಟ್ಟಿದ್ದರು. ಹಣ ನೀಡದ ಕಾರಣಕ್ಕೆ ಜಗಳವಾಗಿದ್ದು, ಒಡಿಶಾದ ಬಿಬಾಶ್‌ನನ್ನು ಕಾಲುವೆಯಲ್ಲಿ ನೂಕಿ ಪರಾರಿಯಾಗಿದ್ದರು.

### ಹೇಯ ಕೃತ್ಯ: ಸಿ.ಎಂ ಖಂಡನೆ



ಕೊಪ್ಪಳ: ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ 'ಪ್ರವಾಸಿಗರ ಮೇಲೆ ನಡೆದ ಹಲ್ಲೆ ಹಾಗೂ ಅತ್ಯಾಚಾರ ಅತ್ಯಂತ ಹೇಯ ಕೃತ್ಯ' ಎಂದಿದ್ದಾರೆ.

'ಘಟನೆ ವರದಿಯಾದ ಕೂಡಲೇ ಪೊಲೀಸರಿಂದ ಮಾಹಿತಿ ಪಡೆದು, ಕಟ್ಟುನಿಟ್ಟಿನ ತನಿಖೆ ಕೈಗೊಂಡು ತಪ್ಪಿತಸ್ಥರನ್ನು ಶೀಘ್ರ ಪತ್ತೆ ಹಚ್ಚುವಂತೆ ಸೂಚಿಸಿದ್ದೆ. ರಾಜ್ಯಕ್ಕೆ ಬರುವ ಪ್ರವಾಸಿಗರು ಸೇರಿದಂತೆ ಪ್ರತಿಯೊಬ್ಬರಿಗೂ ರಕ್ಷಣೆ ನೀಡಲು ನಮ್ಮ ಸರ್ಕಾರ ಬದ್ಧವಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಸಿಎಂ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಅನುಪಮ ಸೌಂದರ್ಯದ ಹರ್ಸಿಲ್ ಕಣಿವೆ 11

# ಅನನ್ಯ ಮಹಾಯಾನಗಾಥೆ...

## ಹಾರುವ ಮೀನು, ಕಿಲ್ಲರ್ ವೇಲ್!

‘ಪಯಣದಲ್ಲಿ ಹಲವು ಹಾರುವ ಮೀನುಗಳನ್ನು ನೋಡಿದೆ. ‘ಲೈಫ್ ಆಫ್ ಪೈ’ ಸಿನಿಮಾದ ದೃಶಗಳು ಕಣ್ಮುಂದೆ ಬಂದವು. ತಿಮಿಂಗಿಲಗಳನ್ನು, 25–30 ಅಡಿ ಉದ್ದದ ಬೃಹತ್ ಕಿಲ್ಲರ್ ವೇಲ್‌ಗಳನ್ನು, ನೀರಿನೊಳು ಬೆಳಕು ಸೂಸುವ ಜೀವಿಗಳನ್ನು ನೋಡಿದೆ. ಒಂದು ಚಿಟ್ಟೆಯನ್ನೂ ಕಂಡೆ. ಅದು ಹೇಗೆ, ಎಲ್ಲಿಂದ ಅಲ್ಲಿಗೆ ಬಂತೋ ತಿಳಿಯದು’ ಎನ್ನುತ್ತಾರೆ ಅನನ್ಯ.

**4,800 ಕಿ.ಮೀ.**
ಅನನ್ಯ ರೋಯಿಂಗ್ ಮಾಡಿದ ದೂರ

**52 ದಿನ 5 ಗಂಟೆ 44 ನಿಮಿಷ**
ಗುರಿ ತಲುಪಲು ತೆಗೆದುಕೊಂಡ ದಿನ

ವಿಭಿನ್ನ ಹಿನ್ನೆಲೆಯ ಮೂವರು ಮಹಿಳೆಯರ ಸ್ಫೂರ್ತಿಯ ಕಥನಗಳು ಇಲ್ಲಿವೆ...

ಕವಿ ಜಿ.ಎಸ್.ಶಿವರುದ್ರಪ್ಪನವರ ಮೊಮ್ಮಗಳು, ಡಾ.ಶಿವಪ್ರಸಾದ್ ಹಾಗೂ ಡಾ.ಪೂರ್ಣಿಮಾ ಅವರ ಮಗಳು ಅನನ್ಯ ಪ್ರಸಾದ್. ಇವರು ಏಕಾಂಗಿಯಾಗಿ 52 ದಿನ ಅಟ್ಲಾಂಟಿಕ್ ಮಹಾಸಾಗರದಲ್ಲಿ ಹುಟ್ಟುಹಾಕುತ್ತಾ ದಾಖಲೆ ಬರೆದಿದ್ದಾರೆ. ತಾಂತ್ರಿಕವಾಗಿ ಬ್ರಿಟಿಷ್ ಪೌರತ್ವ ಹೊಂದಿದವರಾದರೂ ಕನ್ನಡ ನಂಟಿನ 34 ವರ್ಷದ ಅನನ್ಯ, ಈ ಸಾಹಸ ಮಾಡಿದ ಭಾರತೀಯ ಮೂಲದ ಮೊದಲ ಮಹಿಳೆ.

**ಅನನ್ಯ ಪ್ರಸಾದ್**, ನಿರೂಪಣೆ: **ಅಭಿಲಾಷ್ ಪಿ.ಎಸ್.**

ಅದು ಅಟ್ಲಾಂಟಿಕ್ ಆಡಿಸಿ (ಸಾಹಸಯಾನ) ಆರಂಭಿಸಿದ ಎರಡನೇ ವಾರ. ನಾನಿದ್ದ ಬೋಟ್ ಸುಮಾರು 5 ಕಿ.ಮೀ. ಆಳವಿದ್ದ ಸಾಗರದಲ್ಲಿ ಸಾಗುತ್ತಿತ್ತು. ಬಿರುಗಾಳಿ ಬೀಸುತ್ತಿತ್ತು. ಬೃಹತ್ ಅಲೆಗಳು ಬಡಿದು ಬೋಟ್ ಎಲ್ಲೆಂದರಲ್ಲಿ ತಿರುಗುತ್ತಿತ್ತು. ಇಂತಹ ಸಂದರ್ಭದಲ್ಲಿ ರೋಯಿಂಗ್ ಮಾಡಿ ಬೋಟ್ ಅನ್ನು ಹತೋಟಿಗೆ ತರುವುದು ಸುಲಭವಲ್ಲ. ನೋಡುತ್ತಿದ್ದಂತೆಯೇ 20–25 ಅಡಿ ಎತ್ತರದ ಅಲೆಯೊಂದು ಬಡಿದು ಬೋಟ್ 90 ಡಿಗ್ರಿಗಿಂತ ಹೆಚ್ಚು ವಾಲಿ ಮತ್ತೆ ಯಥಾಸ್ಥಿತಿಗೆ ಬಂತು. ಇದರಿಂದಾಗಿ ನಾನು ನೀರಿಗೆ ಬಿದ್ದೆ. ನನ್ನನ್ನು ಬೋಟ್‌ಗೆ ಕಟ್ಟಿಕೊಂಡಿದ್ದರಿಂದ ಮೇಲೇರಿ ಬರಲು ಸಾಧ್ಯವಾಯಿತು...

ನನ್ನ ಮಹಾಸಾಹಸಯಾನದಲ್ಲಿ ಇಂತಹ ಹತ್ತಾರು ರೋಚಕ ಘಟನೆಗಳು ಇವೆ. ಕೆಲವನ್ನು ಮುಂದೆ ಹೇಳುತ್ತೇನೆ.

ಸಾಹಸಯಾನ ವಿಷಯದಲ್ಲಿ ಮೊದಲ ಹೆಜ್ಜೆ ಇಡುವುದೇ ತುಂಬಾ ಕಠಿಣ ಹಾಗೂ ಮುಖ್ಯ. ಏಕಾಂಗಿಯಾಗಿ ಸಮುದ್ರವನ್ನು ರೋಯಿಂಗ್ (ಹುಟ್ಟು ಹಾಕುತ್ತಾ) ಮಾಡಿ ದಾಟುತ್ತೇನೆ ಎಂದಾಗ ಸಂಶಯ ದೃಷ್ಟಿಯಿಂದ ನೋಡಿದವರೇ ಹೆಚ್ಚು. ‘ನಾನು ಇದನ್ನು ಖಂಡಿತವಾಗಿಯೂ ಮಾಡುತ್ತೇನೆ’ ಎನ್ನುವ ಆತ್ಮವಿಶ್ವಾಸ ಮುಂದಿನ ಹಾದಿಯನ್ನು ಸುಗಮಗೊಳಿಸಿತು.

2018ರಲ್ಲಿ ಈ ರೀತಿಯ ರೇಸ್ ಇರುವುದು ತಿಳಿಯಿತು. ಅದರಲ್ಲಿ ಭಾಗವಹಿಸಿದವರ ಅನುಭವ ನನಗೆ ಸ್ಫೂರ್ತಿಯಾಯಿತು. 2021ರಲ್ಲಿ ‘ವರ್ಲ್ಡ್ಸ್ ಟಫೆಸ್ಟ್ ರೋ’ ಸೇರಿಕೊಂಡು, ತರಬೇತಿ ಪಡೆದುಕೊಳ್ಳಲಾರಂಭಿಸಿದೆ. 2024ರಲ್ಲಿ ಈ ಸಾಹಸಯಾನ ಕೈಗೊಳ್ಳುವುದಕ್ಕೂ ಮುನ್ನ 12 ಜನರಿದ್ದ ತಂಡದಲ್ಲಿ ಸ್ಕಾಟ್ಲೆಂಡ್ ದ್ವೀಪವೊಂದರ ಸುತ್ತ ರೋಯಿಂಗ್ ಮಾಡಿದ್ದೆ. ಬಳಿಕ ನೆದರ್‌ಲ್ಯಾಂಡ್ಸ್‌ನಲ್ಲಿ ತಂಡವೊಂದರ ಜೊತೆಗೂಡಿ 36 ಗಂಟೆಗಳ ರೋಯಿಂಗ್ ಮಾಡಿದ್ದೆ.

ರೇಸ್ ಪೂರ್ಣಗೊಳಿಸಿದ ಖುಷಿಯಲ್ಲಿ... ಚಿತ್ರಕೃಪೆ: ವರ್ಲ್ಡ್ಸ್ ಟಫೆಸ್ಟ್ ರೋ

**ತರಬೇತಿ ಹೇಗೆ?:** ಅಲ್ಲಿ ಮುಖ್ಯವಾಗಿ ದೈಹಿಕ, ಮಾನಸಿಕ ಮತ್ತು ತಾಂತ್ರಿಕ ತರಬೇತಿ ನೀಡುತ್ತಾರೆ. ದೈಹಿಕ ತರಬೇತಿಗಾಗಿ ಮನೆಯಲ್ಲಿದ್ದ ರೋಯಿಂಗ್ ಮಷಿನ್‌ನಲ್ಲಿ ವಾರಕ್ಕೆ 15–20 ಗಂಟೆ ಹುಟ್ಟು ಹಾಕುತ್ತಿದ್ದೆ. ಉಳಿದಂತೆ ವೇಟ್ ಲಿಫ್ಟಿಂಗ್, ಡೆಡ್ ಲಿಫ್ಟ್ ಮುಂತಾದ ಚಟುವಟಿಕೆಗಳು ಇರುತ್ತವೆ. ರೋಯಿಂಗ್ ಸಂದರ್ಭದಲ್ಲಿ ಎದುರಾಗಬಹುದಾದ ಕ್ಲಿಷ್ಟಕರ ಸನ್ನಿವೇಶಗಳಿಗೆ ಮಾನಸಿಕವಾಗಿ ತಯಾರು ಮಾಡುತ್ತಾರೆ. ಅಹಿತಕರ ಸಂದರ್ಭಗಳನ್ನು ಊಹಿಸಿಕೊಂಡು ಅವುಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದನ್ನು ಕಲಿಸುತ್ತಾರೆ. ತಾಂತ್ರಿಕ ವಿಭಾಗದಲ್ಲಿ 400 ಕೆ.ಜಿ. ತೂಕದ ಬೋಟ್‌ನ ಚಾಲನೆ, ನ್ಯಾವಿಗೇಷನ್, ರೇಡಿಯೊ ತರಬೇತಿ ನೀಡಲಾಗುತ್ತದೆ. ಬೋಟ್‌ನಲ್ಲಿ ಬೆಂಕಿ ಕಾಣಿಸಿಕೊಂಡರೆ, ಬೋಟ್ ಅಡಿಮೇಲಾದರೆ, ಮುಳುಗಿದರೆ ಏನು ಮಾಡಬೇಕು ಎನ್ನುವುದನ್ನೂ ಕಲಿಸುತ್ತಾರೆ.

### ಮಹಾ ಸಾಹಸಯಾನದತ್ತ...

ಅದು 2024ರ ಡಿಸೆಂಬರ್ 11. ನಾನು ಆರ್ 25 ಮಾದರಿಯ ಬೋಟ್‌ನಲ್ಲಿ ಮಹಾ ಸಾಹಸಯಾನ ಆರಂಭಿಸಿದ್ದೆ. ಈ ಯಾನವನ್ನು ಪ್ರತಿ ವರ್ಷದ ಡಿಸೆಂಬರ್‌ನಲ್ಲಿ ‘ವರ್ಲ್ಡ್ಸ್ ಟಫೆಸ್ಟ್ ರೋ’ ಎಂಬ ಸಂಸ್ಥೆಯು ಆಯೋಜಿಸುತ್ತದೆ. ಕ್ಯಾನರಿ ದ್ವೀಪದ ಲಾ ಗೊಮೇರಾದಿಂದ ಆರಂಭವಾಗುವ ರೇಸ್ ಕೆರೇಬಿಯನ್ ಸಮುದ್ರದಲ್ಲಿರುವ ಆ್ಯಂಟಿಗಾ ದ್ವೀಪದ ಇಂಗ್ಲಿಷ್ ಹಾರ್ಬರ್‌ನಲ್ಲಿ ಕೊನೆಗೊಳ್ಳುತ್ತದೆ. ಇದು ಸಾಹಸಯಾನದ ನಿಗದಿತ ಪಥ. 3000 ಮೈಲಿ ಎಂದರೆ 4,800 ಕಿ.ಮೀ. ನಷ್ಟು ದೂರದ ಗುರಿಯನ್ನು 52 ದಿನ ಐದು ಗಂಟೆ 44 ನಿಮಿಷಗಳಲ್ಲಿ ಮುಟ್ಟಿದ್ದೆ.

ಭಿನ್ನವಾಗಿರುವುದನ್ನು ಪ್ರಯತ್ನಿಸಬೇಕು ಎನ್ನುವ ಹಂಬಲವೇ ಈ ರೋಯಿಂಗ್ ಸಾಹಸಯಾನ ಕೈಗೊಳ್ಳಲು ಕಾರಣ. ಹೆಚ್ಚಿನವರು ಅನ್ವೇಷಿಸದ ಈ ಹಾದಿ, ಪ್ರಕೃತಿ ಮತ್ತು ಸಮುದ್ರವನ್ನು ಅನುಭವಿಸುವ ಆಸೆಯೂ ನನ್ನಲ್ಲಿತ್ತು. 52 ದಿನ ಏಕಾಂಗಿಯಾಗಿದ್ದುಕೊಂಡು, ಮಾನಸಿಕವಾಗಿ ಕುಗ್ಗದೆ ಪ್ರತಿ ಕ್ಷಣವೂ ಎದುರಾಗುವ ಸವಾಲುಗಳನ್ನು ಎದುರಿಸುತ್ತಾ, ಭಯದಿಂದಲೇ ಕ್ಷಣಗಳನ್ನು ಕಳೆಯುತ್ತಾ ನನ್ನೊಳಗಿನ ಶಕ್ತಿಯನ್ನು ಅರಿತುಕೊಂಡೆ. ನನ್ನ ಸಾಮರ್ಥ್ಯವನ್ನು ಅರಿಯಲು ಈ ಯಾನ ಸಹಕಾರಿ ಆಯಿತು.

ಇಲ್ಲೊಂದು ಮಾತು ಹೇಳಬೇಕು. ಮಾನಸಿಕ ಆರೋಗ್ಯ ಫೌಂಡೇಷನ್ ಹಾಗೂ ನನ್ನ ದೊಡ್ಡಪ್ಪ ಜಿ.ಎಸ್.ಜಯದೇವ ಅವರು ಚಾಮರಾಜನಗರದಲ್ಲಿ ಸ್ಥಾಪಿಸಿರುವ ‘ದೀನಬಂಧು’ ಅನಾಥಾಶ್ರಮಕ್ಕೆ ಹಣಕಾಸಿನ ನೆರವು ಒದಗಿಸುವುದು ನನ್ನ ಯಾನದ ಉದ್ದೇಶವಾಗಿತ್ತು.

ಇಂಥ ಸಾಹಸವನ್ನು ಮಹಿಳೆಯೊಬ್ಬಳು ಕೈಗೆತ್ತಿಕೊಳ್ಳುವುದು ಸುಲಭವಲ್ಲ. ಇಲ್ಲಿಯವರೆಗೆ ಸುಮಾರು 30ರಷ್ಟು ಮಹಿಳೆಯರಷ್ಟೇ ಒಬ್ಬಂಟಿಯಾಗಿ ಈ ರೇಸ್ ಪೂರ್ಣಗೊಳಿಸಿದ್ದಾರೆ. ಅನುಭವದ ಕೊರತೆ ಮತ್ತು ಮಹಿಳೆ ಎನ್ನುವುದು ಇಂತಹ ಸಾಹಸಯಾನಕ್ಕೆ ಅಡ್ಡಿಯಾಗಬಾರದು.

ಸಮುದ್ರಯಾನದ ಸಂದರ್ಭದಲ್ಲಿ ರಾತ್ರಿಗಳು ಎಷ್ಟು ಸುಂದರವಾಗಿರುತ್ತವೆಯೋ, ಹಗಲು ಅಷ್ಟೇ ಭೀಕರ. ಯಾವುದೇ ಬೆಳಕಿನ ಮಾಲಿನ್ಯವಿಲ್ಲದ ರಾತ್ರಿಯ ಆಕಾಶದಲ್ಲಿ ಅಸಂಖ್ಯಾತ ನಕ್ಷತ್ರಗಳು, ಉಲ್ಕೆಗಳೇ ಅದ್ಭುತ ದೃಶ್ಯಕಾವ್ಯ. ರಾತ್ರಿಯಲ್ಲಿ ಅಲ್ಲಿನ ತಾಪಮಾನ 13 ಡಿಗ್ರಿ ಸೆಲ್ಸಿಯಸ್‌ವರೆಗೆ ಕುಸಿಯುತ್ತದೆ. ಇಂತಹ ಅನುಭವಕ್ಕಾಗಿಯೇ ಹಲವರು ಬೇರೆ ಬೇರೆ ಮಾದರಿಯ ಸಾಹಸಯಾನಗಳನ್ನು ಕೈಗೊಳ್ಳುತ್ತಾರೆ.

ಮತ್ತೊಂದು ಘಟನೆ ಹೇಳುತ್ತೇನೆ. ಗುರಿ ತಲುಪಲು ವಾರವಷ್ಟೇ ಬಾಕಿ ಇತ್ತು. ಆಗ ಬೋಟ್‌ನ ರಡರ್ ಹಾಳಾಯಿತು. ಸಾಮಾನ್ಯವಾಗಿ ಹೀಗಾಗುವುದು ವಿರಳ. ಈ ರಡರ್ ಬೋಟ್‌ನ ದಿಕ್ಕನ್ನು ನಿಯಂತ್ರಿಸುತ್ತದೆ. ಅದು ಹಾಳಾಗಿದೆ ಎಂದು ಅರಿವಿಗೆ ಬರುವಷ್ಟರಲ್ಲಿ ದಿನ ಉರುಳಿತ್ತು. ಗೊಪ್ರೊ ಕ್ಯಾಮೆರಾವನ್ನು ನೀರಿನಾಳಕ್ಕೆ ಇಳಿಸಿ ನೋಡಿದಾಗ ಅದು ಕೆಟ್ಟಿರುವುದು ತಿಳಿಯಿತು. ಆಗ 15–20 ಅಡಿ ಎತ್ತರದ ಅಲೆಗಳು ಬೋಟ್‌ಗೆ ಬಡಿಯುತ್ತಿದ್ದವು. ಅಂತಹ ಪರಿಸ್ಥಿತಿಯಲ್ಲಿ ಬೋಟ್‌ನ ಕೆಳಗಡೆ ಹೋಗಿ ಹೊಸ ರಡರ್ ಅಳವಡಿಸಿದ್ದೆ. ಒಬ್ಬಂಟಿಯಾಗಿ ಈ ಕೆಲಸ ಮಾಡುವುದು ಬಹಳ ಕಷ್ಟವಾಗಿತ್ತು. ಇದು ನನ್ನ ಪಯಣದ ಅತ್ಯಂತ ಕಠಿಣ ಸಮಯವಾಗಿತ್ತು.

### ಹಲವು ಸಂಪರ್ಕ ಸಾಧನಗಳು

ನನ್ನ ಜೊತೆ ಮೂರು ಸ್ಯಾಟಲೈಟ್ ಫೋನ್‌ಗಳು, ಎರಡು ಮೊಬೈಲ್‌ಗಳಿದ್ದವು. ಬೋಟ್‌ನಲ್ಲಿ ಜಿಪಿಎಸ್ ವ್ಯವಸ್ಥೆಯಿತ್ತು. ‘ವರ್ಲ್ಡ್ಸ್ ಟಫೆಸ್ಟ್ ರೋ’ ತಂಡವು ಈ ವ್ಯವಸ್ಥೆಯನ್ನು ಬಳಸಿಕೊಂಡು ಪಯಣವನ್ನು ನಿರ್ದೇಶಿಸುತ್ತಿತ್ತು. ಸಾಗುವ ದಿಕ್ಕಿನಿಂದಲೇ ಅತಿ ವೇಗವಾಗಿ ಗಾಳಿ ಬೀಸುತ್ತಿದ್ದರೆ, ನಾಲ್ಕು ಜನ ಸೇರಿದರೂ ಆ ದಿಕ್ಕಿನತ್ತ ಹುಟ್ಟು ಹಾಕಲು ಸಾಧ್ಯವಿಲ್ಲ. ಹೀಗಿರುವಾಗ ನನ್ನಿಂದೊಬ್ಬಳಿಂದ ಹೇಗೆ ಸಾಧ್ಯ?.

11ನೇ ಪುಟಕ್ಕೆ...

## ನಿದ್ದೆ, ಊಟವೆಂಬ ಸಾಹಸ!

ಒಬ್ಬಂಟಿಯಾಗಿ ಸಾಹಸಯಾನ ಕೈಗೊಂಡಾಗ ನಿದ್ದೆ ಬಲು ದುಬಾರಿ. ಏಕಾಂಗಿಯಾಗಿದ್ದಾಗ ರೋಯಿಂಗ್‌ನತ್ತ ಹೆಚ್ಚು ಗಮನಹರಿಸಬೇಕು. ಪ್ರತಿನಿತ್ಯ ಮೂರು ಗಂಟೆ ನಿರಂತರವಾಗಿ ಹುಟ್ಟು ಹಾಕುತ್ತಾ ಕೊಂಚ ಅವಧಿಗೆ ವಿಶ್ರಾಂತಿ ಪಡೆಯುತ್ತಿದ್ದೆ. ಹಗಲು ಹತ್ತು–ಹನ್ನೆರಡು ಗಂಟೆ ರೋಯಿಂಗ್ ಮಾಡುತ್ತಿದ್ದೆ. ರಾತ್ರಿಯಲ್ಲಿ ಬೆನ್ನ ಹಿಂದಿನಿಂದ ಗಾಳಿಯಿದ್ದಾಗ ಗರಿಷ್ಠ ಐದು ಗಂಟೆ ನಿದ್ದೆ ಮಾಡಿದ್ದೆ. ರೇಸ್ ಆರಂಭಿಸಿದ ಮೊದಲ ನಾಲ್ಕೈದು ದಿನ ಹೆಡ್‌ವಿಂಡ್ (ಎದುರಿನಿಂದ ಬೀಸುವ ಗಾಳಿ) ಬಹಳ ತೀವ್ರವಾಗಿದ್ದ ಕಾರಣ ನಿದ್ದೆಯೇ ಮಾಡಿರಲಿಲ್ಲ. ನಿರಂತರವಾಗಿ ರೋಯಿಂಗ್ ಮಾಡಿದ್ದೆ. ಇದು ದೈಹಿಕ ಹಾಗೂ ಮಾನಸಿಕವಾಗಿ ಬಹಳ ಕಠಿಣವಾಗಿತ್ತು. ಪ್ರತಿನಿತ್ಯ ಸುಮಾರು 165 ಕಿ.ಮೀ.ಗಳನ್ನು ಕ್ರಮಿಸುತ್ತಿದ್ದೆ. ಸುಮಾರು 60 ದಿನಗಳಿಗೆ ಡಿಹೈಡ್ರೇಟೆಡ್ ಆಹಾರ ಪದಾರ್ಥ ಕೊಟ್ಟಿದ್ದರು. ಅದರಲ್ಲಿ ಭಾರತೀಯ ತಿನಿಸುಗಳೂ ಇದ್ದವು. ಅವುಗಳಿಗೆ ಬಿಸಿ ನೀರು ಹಾಕಿ ತಿನ್ನಬೇಕು. ಬೋಟ್‌ನಲ್ಲಿ ಸಮುದ್ರದ ನೀರನ್ನು ಶುದ್ಧ ಕುಡಿಯುವ ನೀರಾಗಿ ಪರಿವರ್ತಿಸುವ ಡಿಸ್ಯಾಲಿನೇಟರ್ ಎಂಬ ಯಂತ್ರವಿತ್ತು. ನೀರು ಕಾಯಿಸಲು ಸ್ಟೌ ಮಾದರಿಯ ಜೆಟ್‌ಬಾಯಿಲ್ ಬಳಸುತ್ತಿದ್ದೆ. 800–1000 ಕ್ಯಾಲೊರಿ ಇರುವ ಆಹಾರ ಪದಾರ್ಥಗಳನ್ನು ನಿತ್ಯ ಸೇವಿಸಿದರೂ ಅದರ ದುಪ್ಪಟ್ಟು ಕ್ಯಾಲೊರಿ ದೈಹಿಕ ಶ್ರಮದಿಂದ ವ್ಯಯವಾಗುತ್ತಿತ್ತು.

## ಬೀದಿಯಲ್ಲೂ.. ರಂಗದಲ್ಲೂ
# ಸಹನಾ ದನಿ

**ಅಬ್ದುಲ್ ರಹಿಮಾನ್**

**‘1990ರ ಶುರು.** ಹೊಸಪೇಟೆಯಲ್ಲಿ ನಾವು ಇದ್ದ ಕೊಳೆಗೇರಿಯಲ್ಲಿ ಮಹಿಳೆಯೊಬ್ಬರನ್ನು ವರದಕ್ಷಿಣೆಗಾಗಿ ಜೀವಂತ ಸುಟ್ಟಿದ್ದರು. ನಾನಾಗ ಐದನೇ ತರಗತಿಯಲ್ಲಿದ್ದೆ. ಆ ಕ್ರೌರ್ಯ ಸಾಧಾರಣ ಘಟನೆ ಎಂಬಂತೆ ಜನ ಸುಮ್ಮನಿದ್ದರು. ಏನಾಗಿದೆ ಎಂದು ತಿಳಿಯದ ವಯಸ್ಸು. ಆದರೆ ಮಹಿಳೆಯರು ಅನುಭವಿಸುತ್ತಿದ್ದ ಹಿಂಸೆ, ಮಹಿಳೆಯರ ಬಗ್ಗೆ ಸಹಾನುಭೂತಿಯೇ ತೋರದ ಸಮಾಜದ ಕರ್ಮಠ ಮನಸ್ಸುಗಳ ಪರಿಚಯವಾಗಿತ್ತು’ ಎನ್ನುತ್ತಾ ಬಾಲ್ಯದ ನೆನಪುಗಳ ಸುರುಳಿ ಬಿಚ್ಚಿದರು ಸಹನಾ ಪಿಂಜಾರ.

ಈ ಘಟನೆಯನ್ನು ಪ್ರತಿಭಟಿಸಿ ಕಲಾವಿದರೂ ಆದ ಸಾಮಾಜಿಕ ಕಾರ್ಯಕರ್ತ ಸೋದರಮಾವ ಪಿಂಜಾರ ಅಬ್ದುಲ್ಲಾ ಸಂಘಟಿಸಿದ ರಂಗಭೂಮಿ ಆಧಾರಿತ ಹೋರಾಟದಲ್ಲಿ ಸಹನಾ ಭಾಗಿಯಾದರು. ‘ವರದಕ್ಷಿಣೆ’ ಎನ್ನುವ ಬೀದಿ ನಾಟಕದ ಮೂಲಕ ಜಾಗೃತಿ ಮೂಡಿಸಿದರು. ಸಂತ್ರಸ್ತ ಮಹಿಳೆಯ ಕುಟುಂಬಕ್ಕೆ ಬೆಂಬಲ ಹರಿದುಬಂತು. ದೋಷಿಗಳಿಗೆ ಶಿಕ್ಷೆಯಾಯಿತು. ಸಹನಾ ಅವರು ಮುಖ್ಯಪಾತ್ರದಲ್ಲಿದ್ದ ಈ ನಾಟಕ ಬಳ್ಳಾರಿ ಜಿಲ್ಲೆಯಾದ್ಯಂತ 80 ಪ್ರದರ್ಶನ ಕಂಡಿತು. ಬೀದಿ ನಾಟಕವೊಂದು ಮಾಡಿದ ಈ ಬದಲಾವಣೆ, ಅದಕ್ಕಿದ್ದ ಪ್ರಚೋದಕ ಶಕ್ತಿ ಅವರ ಮೇಲೆ ಅಗಾಧ ಪರಿಣಾಮ ಬೀರಿತು.

ಘನತೆಯಿಂದ ಬದುಕುವ ಹಕ್ಕನ್ನೇ ಕಳೆದುಕೊಂಡಿದ್ದ ಕೊಳೆಗೇರಿ ನಿವಾಸಿಗಳ ಜೀವ ಹಿಂಡುತ್ತಿದ್ದ ವರದಕ್ಷಿಣೆ ಕಿರುಕುಳ, ಮಾನವ ಕಳ್ಳಸಾಗಣೆ ಮುಂತಾದ ಸಾಮಾಜಿಕ ಪಿಡುಗುಗಳ ಜೊತೆ ಮೂಢನಂಬಿಕೆಗಳೂ ಸೇರಿ ಬದುಕು ಇನ್ನಷ್ಟು ದುರ್ಭರವಾಗಿತ್ತು. ಇವೆಲ್ಲದರ ವಿರುದ್ಧ ಬೀದಿ ನಾಟಕಗಳ ಮೂಲಕವೇ ಜಾಗೃತಿ ಮೂಡಿಸಿದರು. ಕೇರಿಗೆ ಬೇಕಾದ ಮೂಲ ಸೌಕರ್ಯವನ್ನೂ ಬೀದಿ ನಾಟಕದ ಚಳವಳಿಯಿಂದಲೇ ದಕ್ಕಿಸಿಕೊಂಡರು. ಬಡತನ, ಹಸಿವನ್ನು ಕಂಡು ಬೆಳೆದಿದ್ದ ಸಹನಾಗೆ ರಂಗಭೂಮಿಯೇ ಹೋರಾಟದ ಅಸ್ತ್ರವಾಯಿತು.

ಹಿಂದುಳಿದ ಪಿಂಜಾರ ಸಮುದಾಯದವರಾದ ಅವರ ಕುಲಕಸುಬು ಗಾದಿ ತಯಾರಿಕೆ. ಹತ್ತಿಯನ್ನು ಸಂಸ್ಕರಿಸಿ ಹಾಸಿಗೆ ತಯಾರಿಸುವುದು ಪೋಷಕರ ಕೆಲಸ. ಬಾಲ್ಯದಿಂದಲೇ ಚುರುಕಾಗಿದ್ದ ಸೊಸೆ ಶಿಕ್ಷಣದಿಂದ ದೂರವಾಗಬಾರದು ಎಂದು ಹುಟ್ಟೂರು ಬಳ್ಳಾರಿಯ ಎಚ್. ವೀರಾಪುರದಿಂದ ಹೊಸಪೇಟೆಯ ಆಜಾದ್‌ನಗರಕ್ಕೆ ಕರೆದುಕೊಂಡು ಬಂದು ಶಿಕ್ಷಣ ಕೊಡಿಸಿದ್ದು ಅಬ್ದುಲ್ಲಾ. ಮೂಲ ಸೌಕರ್ಯ ಇಲ್ಲದ ಶಾಲೆಗೆ ಹೋಗುವುದನ್ನು ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದ ಸಹನಾಗೆ ಅಬ್ದುಲ್ಲಾರ ನಾಟಕ ತರಬೇತಿ, ಪ್ರದರ್ಶನಗಳು ಆಪ್ತವಾಗಿಬಿಟ್ಟವು. ಕಣ್ಣಲ್ಲಿ ದಾಖಲಾದ ದೃಶ್ಯಗಳು ಮನಸ್ಸಲ್ಲಿ ಅಚ್ಚೊತ್ತಿದವು. ನಟನೆ ಸಲೀಸಾಗಿ ಒಲಿದು ಬಿಟ್ಟಿತು. ಬಾಲ್ಯದಲ್ಲೇ ಬೀದಿ ನಾಟಕವೊಂದರಲ್ಲಿ ಅಭಿನಯಿಸಿದರು. ಸೊಸೆಯ ಭವಿಷ್ಯ ಅಂದೇ ಅಬ್ದುಲ್ಲಾರ ಕಣ್ಣ ಮುಂದೆ ಇತ್ತು.

ಸಹನಾ ಪಿಂಜಾರ

ಸೋದರಮಾವನವರೊಂದಿಗೆ ಚಳವಳಿಯ ಭಾಗವಾಗಿದ್ದುಕೊಂಡೇ ಶಿಕ್ಷಣ ಪಡೆದರು. ನೀನಾಸಂ ರಂಗ ತರಬೇತಿ ಮುಗಿಸಿ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಪದವಿ ಪೂರೈಸಿ, ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದರು. ಪಿಂಜಾರ ಸಮುದಾಯದಲ್ಲಿ ಪಿಎಚ್‌.ಡಿ ಪದವಿ ಪಡೆದ ಮೊದಲ ಮಹಿಳೆ ಎನ್ನುವ ಹೆಗ್ಗಳಿಕೆ ಅವರದು. ಬಳಿಕ ರಂಗಭೂಮಿಯಲ್ಲಿಯೇ ವೃತ್ತಿ ಕಟ್ಟಿಕೊಂಡರು. ‘16ನೇ ವಯಸ್ಸಿನಲ್ಲಿ ನೀನಾಸಂ ತರಬೇತಿ ಪಡೆದೆ. ಅಲ್ಲಿ ಭಾಷೆ ಕಲಿಕೆಯ ಪ್ರಾಮುಖ್ಯತೆಯ ಬಗ್ಗೆ ತಿಳಿಯಿತು. ಇಡೀ ಬ್ಯಾಚ್‌ನಲ್ಲಿ ನಾನೇ ಚಿಕ್ಕವಳು. ಅಲ್ಲಿ ಖ್ಯಾತನಾಮರಿಂದ ಪಡೆದ ತರಬೇತಿ ನನ್ನನ್ನು ಇನ್ನಷ್ಟು ಮಾಗಿಸಿತು. ರಾಷ್ಟ್ರೀಯ ನಾಟಕ ಶಾಲೆ ನನ್ನ ಕಲಾ ಜೀವನಕ್ಕೆ ಹೊಸ ತಿರುವು ನೀಡಿತು. ಅಲ್ಲಿ ಕಲಿತದ್ದನ್ನು ಊರಿನ ನಾಟಕದಲ್ಲಿ ಪ್ರಯೋಗಿಸಿದೆ. ಹೊಸರೂಪ ಪಡೆದ ನಾಟಕಗಳು ಜನರಿಗೂ ಇಷ್ಟವಾಗತೊಡಗಿತು. ನಮ್ಮ ಚಳವಳಿಗೆ ಇನ್ನಷ್ಟು ವೇಗ ನೀಡಿತು’ ಎಂದು ತಮ್ಮ ರಂಗಭೂಮಿ ಪಯಣವನ್ನು ತೆರೆದಿಟ್ಟರು.

2011ರಲ್ಲಿ ಹೊಸಪೇಟೆಯ ಕೊಳೆಗೇರಿಗೆ ಮತ್ತೆ ಮರಳಿದ ಅವರು, ಅಬ್ದುಲ್ಲಾರು ಕಟ್ಟಿದ ‘ಭಾವೈಕ್ಯತಾ ವೇದಿಕೆ’ ಮೂಲಕ ಚಳವಳಿ ಮುಂದುವರಿಸಿದರು. ಸಮಾಜದ ನೋವುಗಳಿಗೆ ಕಲೆಯ ಮೂಲಕ ಸಾಂತ್ವನ ನೀಡುವ ಪ್ರಯತ್ನ ಮುಂದುವರಿಯಿತು. ಪತಿ ರಿಯಾಜ್ ಸಿಹಿಮೊಗ್ಗೆ ಅವರೊಂದಿಗೆ ಸೇರಿ ‘ಬಹುತ್ವ ಪ್ರತಿಷ್ಠಾನ’ ಎನ್ನುವ ಸಂಘಟನೆ ಕಟ್ಟಿ ಆಸಕ್ತರಿಗೆ ಉಚಿತ ನಾಟಕ ಶಿಬಿರಗಳನ್ನು ಸಂಘಟಿಸಿದರು. ಶಿಬಿರಕ್ಕೆ ಬಂದವರನ್ನು ಒಗ್ಗೂಡಿಸಿ ಸಮಾಜದ ಅಶಕ್ತರಿಗೆ, ನೋವುಗಳಿಗೆ ದನಿಯಾಗುವ ಕೆಲಸ ಮಾಡಿದರು. ‘ಪವಾಡ ಗುಟ್ಟು’, ‘ಹುಡುಗಿ ಓದಲೇಬೇಕು’, ‘ವಿಸರ್ಜನೆ’, ‘ಓ ಮತದಾರ ಪ್ರಭುವೇ’ ಎನ್ನುವ ಬೀದಿ ನಾಟಕಗಳ ಮೂಲಕ ಜನರನ್ನು ಎಚ್ಚರಿಸುವ ಕೆಲಸ ಮಾಡಿದರು.

ಮೊದಲ ಶಿಬಿರಕ್ಕೆ ಸ್ಥಳ ಸಜ್ಜುಗೊಳಿಸಿ, ಬಂದ ಅತಿಥಿಗಳನ್ನು ಕುಳ್ಳಿರಿಸಿ ಗಂಟೆಗಳು ಕಾದರೂ, ಒಂದು ಮಗುವೂ ಬಾರದಿದ್ದಾಗಿನ ನಿರಾಸೆಯ ಬಗ್ಗೆ ಹೇಳುವಾಗ ಅವರ ಧ್ವನಿ ಕಂಪಿಸುತ್ತದೆ. ಮನೆ ಮನೆಗೆ ತೆರಳಿ ಶಿಬಿರಕ್ಕೆ ಮಕ್ಕಳನ್ನು ಆಹ್ವಾನಿಸಿ, ಅನಾಥಾಶ್ರಮಗಳ ಮಕ್ಕಳನ್ನು ಕರೆತಂದು ಅವರಿಗೆ ಹಾಡು, ನೃತ್ಯದ ತರಬೇತಿ ನೀಡುತ್ತಾರೆ. ದಿನ ಕಳೆದಂತೆ ಶಿಬಿರಕ್ಕೆ ಬರುವವರ ಸಂಖ್ಯೆ ಹೆಚ್ಚಳವಾಗುತ್ತದೆ. ವರ್ಷಕ್ಕೆ 40-50 ವಿದ್ಯಾರ್ಥಿಗಳಿಗೆ ರಂಗ ತರಬೇತಿ ಸಿಗುತ್ತಿದೆ. ಈ ಶಿಬಿರಗಳು ಅರ್ಧದಲ್ಲಿ ಶಾಲೆ ಬಿಟ್ಟವರಿಗೆ ಮತ್ತೆ ಶಿಕ್ಷಣ ದಾರಿ ತೋರಿದೆ.

13ನೇ ಪುಟಕ್ಕೆ...

# ಗೌರಮ್ಮ ಕರೆದರು ಗಂಗಮ್ಮ ಬಂದಳು

**ರಾಜೇಂದ್ರ ಹೆಗಡೆ**

**ಗಿಡಗಳು** ಬಾಯಾರಿದಾಗ ಒಂದು, ಕುಟುಂಬ ದಾಹ ಎಂದಾಗ ಮತ್ತೊಂದು, ಅಂಗನವಾಡಿ ಮಕ್ಕಳು ನೀರು ಕೇಳಿದಾಗ ಮಗದೊಂದು, ಪವಿತ್ರಸ್ನಾನ ಮಾಡಬೇಕು ಅನಿಸಿದಾಗ ಇನ್ನೊಂದು...ಹೀಗೆ ನಾಲ್ಕು ಬಾವಿಗಳನ್ನು ಏಕಾಂಗಿಯಾಗಿ ತೋಡಿದವರು ಗೌರಿ ನಾಯ್ಕ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ಪಟ್ಟಣದ ಸೆರಗಿನಲ್ಲಿರುವ ಸೌಲಭ್ಯ ವಂಚಿತ ಪ್ರದೇಶ ಗಣೇಶನಗರದಲ್ಲಿ 58 ವರ್ಷದ ಗೌರಿ ನಾಯ್ಕ ವಾಸಿಸುತ್ತಾರೆ.

ಗೌರಿ ಅವರ ಮನೆ ಚಿರೇಕಲ್ಲಿನಂಥ ಗುಡ್ಡದ ಮೇಲಿದೆ. ಸುತ್ತ 150 ಅಡಿಕೆ, ಬಾಳೆ ಸಸಿಗಳಿದ್ದವು. ಬೇಸಿಗೆ ಬಿಸಿಲಿಗೆ ಅವುಗಳೆಲ್ಲ ಸಾಯುವ ಸ್ಥಿತಿಯಲ್ಲಿದ್ದವು. ದೂರದಿಂದ ನೀರು ಹೊತ್ತು ಅವುಗಳನ್ನು ಬದುಕಿಸುವುದು ಕಷ್ಟವಾಗಿತ್ತು. ನೀರಿಗಾಗಿ ಕಾಸು ಕೊಡುವಷ್ಟು ಶಕ್ತಿ ಇರಲಿಲ್ಲ. ಹೀಗಾಗಿ ಮನಸು ಗಟ್ಟಿ ಮಾಡಿದರು. 2017ರಲ್ಲಿ ಮನೆ ಹಿಂಭಾಗದಲ್ಲಿ ಎಂಟು ಅಡಿ ಅಗಲ, ಅರವತ್ತು ಅಡಿ ಆಳದ ಬಾವಿಯನ್ನು ಎರಡು ತಿಂಗಳಲ್ಲಿ ತೋಡಿಯೇಬಿಟ್ಟರು! ಮಗ ಬಯ್ಯುತ್ತಾನೆ ಎನ್ನುವ ಕಾರಣಕ್ಕಾಗಿ ಈ ವಿಷಯವನ್ನು ಗುಟ್ಟಾಗಿರಿಸಿದ್ದರು. ಬಳಿಕ ತೋಟದ ಗಿಡಗಳ ನೀರಿನ ಬಾಯಾರಿಕೆ ನೀಗಿತು. ಹಸಿರಿನಿಂದ ನಳನಳಿಸಿ ನಕ್ಕವು.

2020ರಲ್ಲಿ ಇಡೀ ಜಗತ್ತು ಕೋವಿಡ್‌ಗೆ ಬೆದರಿ ಮನೆಯೊಳಗೆ ಕುಳಿತಿತ್ತು. ಆದರೆ ಗೌರಿ ಮಾತ್ರ ಸುಮ್ಮನೆ ಕೂರಲಿಲ್ಲ. ಮನೆ ಮಂದಿಗೆ ಶುದ್ಧ ಕುಡಿಯುವ ನೀರು ಕೊಡಬೇಕು ಎನ್ನುವ ಅಪೇಕ್ಷೆಯಿಂದ ಎರಡನೇ ಬಾವಿ ತೋಡಲು ನಿರ್ಧರಿಸಿದರು. ಅದಕ್ಕಾಗಿ ಮನೆ ಹಿಂಭಾಗದಲ್ಲಿದ್ದ ಗುಡ್ಡವನ್ನು ಸಮತಟ್ಟು ಮಾಡಿ ಬಾವಿ ತೋಡಲು ಆರಂಭಿಸಿದರು. ಐದು ಅಡಿ ಅಗಲ, 60 ಅಡಿ ಆಳದ ಬಾವಿಯನ್ನು ಒಬ್ಬರೇ ತೆಗೆದು ಮುಗುಳ್ನಕ್ಕರು.

ಬಾವಿ ತೋಡಲು ಮೂರರಿಂದ ನಾಲ್ಕು ಮಂದಿ ಬೇಕು. ಆದರೆ ಇವರು ದಿನದಲ್ಲಿ 200ಕ್ಕೂ ಹೆಚ್ಚು ಬಾರಿ ಬಾವಿ ಹತ್ತಿಳಿಯುತ್ತಲೇ ತೋಡಿ ಮುಗಿಸಿದ್ದರು. ಬಾವಿ ತೆಗೆಯಲು ಗುದ್ದಲಿ, ಹಾರೆ, ಚಾಣ, ಸುತ್ತಿಗೆ, ಪಿಕಾಸಿ, ಎರಡು ಬಕೆಟ್‌ಗಳನ್ನು ಬಳಕೆ ಮಾಡಿದ್ದರು. ‘ಎರಡು ತಿಂಗಳ ಬೆವರಹನಿಯ ಪ್ರತಿಫಲವಾಗಿ 60 ಅಡಿ ಆಳದ ಬಾವಿಯಲ್ಲಿ 7 ಅಡಿ ಜೀವಜಲ ಸದಾ ತುಂಬಿರುತ್ತದೆ’ ಎಂದು ಆ ಬಾವಿಯನ್ನು ತೋರಿಸಿದರು.

11ನೇ ಪುಟಕ್ಕೆ...

ಅನಿವಾರ್ಯ ಸಂದರ್ಭಗಳು ನಮ್ಮೊಳಗಿರುವ ಸಾಮರ್ಥ್ಯವನ್ನು ಮನವರಿಕೆ ಮಾಡಿಕೊಡುತ್ತವೆ. ಗೌರಿ ನಾಯ್ಕ, ಗಟ್ಟಿ ಮನಸ್ಸು ಮಾಡಿ ಬಾವಿ ತೋಡಿ ಯಶಸ್ವಿಯಾದರು. ಆನಂತರ ಒಂದರ ಹಿಂದೆ ಒಂದರಂತೆ ನಾಲ್ಕು ಬಾವಿಗಳನ್ನು ತೋಡಿದ್ದಾರೆ.

ಏಕಾಂಗಿಯಾಗಿ ಬಾವಿ ತೋಡಿದ ಗೌರಿ ನಾಯ್ಕ

## ಮುನ್ನೋಟ 09-03-2025 ರಿಂದ 16-03-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — **ಅಶ್ವಿನಿ, ಭರಣಿ, ಕೃತ್ತಿಕಾ 1**

ನಿಮ್ಮ ಕೆಲವೊಂದು ನಿರ್ಧಾರಗಳು ನಿಮಗೆ ಮುಜುಗರ ತರುತ್ತವೆ. ಆದಾಯವು ನಿಮ್ಮ ಅಗತ್ಯ ಪೂರೈಸುತ್ತದೆ. ಕೆಲವೊಂದು ಕೆಲಸಗಳಲ್ಲಿ ಬಂಧುಗಳ ಸಹಕಾರ ನಿಮಗೆ ದೊರೆಯುವುದಿಲ್ಲ. ಕೃಷಿ ಭೂಮಿ ಕೊಳ್ಳುವ ಬಗ್ಗೆ ಆಸಕ್ತಿಯನ್ನು ತೋರುವಿರಿ. ಶಸ್ತ್ರಚಿಕಿತ್ಸಕ ವೈದ್ಯರುಗಳಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಸರ್ಕಾರಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ.

**ವೃಷಭ** — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಚಟುವಟಿಕೆಯಿಂದ ಆದಾಯ ಹೆಚ್ಚಿಸಿಕೊಳ್ಳುವ ಸಾಧ್ಯತೆಗಳಿವೆ. ಸಂಸಾರದಲ್ಲಿ ಸಂತೋಷವಿದ್ದರೂ, ಸ್ವಲ್ಪ ಕಲಹವಾಗುವ ಸಾಧ್ಯತೆ ಇದೆ. ಮಕ್ಕಳು ನಿಮ್ಮ ಬಗ್ಗೆ ಗೌರವವನ್ನು ಹೊಂದಿರುವವರು. ಪ್ರಸೂತಿ ವೈದ್ಯರಿಗೆ ಸಾಕಷ್ಟು ಬೇಡಿಕೆ ಬರುತ್ತದೆ. ಸಂಗಾತಿಗೆ ಕೃಷಿ ಜಮೀನು ಸಿಗಬಹುದು. ವೃತ್ತಿಯಲ್ಲಿ ತಂದೆಯ ಸಹಾಯ ದೊರೆಯುತ್ತದೆ.

**ಮಿಥುನ** — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ದೃಢ ನಿರ್ಧಾರಗಳಿಂದ ಮುಂದುವರಿಯುವುದು ಒಳ್ಳೆಯದು. ನಿಮ್ಮ ನಿರ್ಧಾರಗಳು ದ್ವಂದ್ವದಿಂದ ಕೂಡಿದ್ದರೆ ನಷ್ಟ ನಿಮಗೆ ಸಂಭವಿಸುತ್ತದೆ. ನಿಮ್ಮ ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ವೃತ್ತಿಪರ ಪರೀಕ್ಷೆಯನ್ನು ತೆಗೆದುಕೊಳ್ಳುವವರಿಗೆ ಹೆಚ್ಚಿನ ಅನುಕೂಲವಿರುತ್ತದೆ. ಕುಲುಮೆಗಳಲ್ಲಿ ಕೆಲಸ ಮಾಡುವವರು ಹೆಚ್ಚಿನ ಎಚ್ಚರಿಕೆ ತೆಗೆದುಕೊಳ್ಳಬೇಕು.

**ಕಟಕ** — **ಪುನರ್ವಸು 4 ಪುಷ್ಯ, ಆಶ್ಲೇಷ**

ನಿಮ್ಮ ಮನೋಸ್ಥೈರ್ಯ ಉಡುಗಿದಂತೆ ಭಾಸವಾಗುತ್ತದೆ. ಆದಾಯವು ಕಡಿಮೆ ಇದ್ದು ಖರ್ಚುಗಳ ಮೇಲೆ ಹಿಡಿತ ಸಾಧಿಸಲೇಬೇಕು. ತಂದೆಯಿಂದ ಆಸ್ತಿ ದೊರೆಯುವ ಸಂದರ್ಭವಿದೆ. ಕ್ರೀಡಾಪಟುಗಳಿಗೆ ನಿರೀಕ್ಷಿತ ಯಶಸ್ಸು ದೊರೆಯುವುದು ಕಡಿಮೆ. ಆಯುರ್ವೇದ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ಉದ್ಯೋಗ ಸ್ಥಳದಲ್ಲಿದ್ದ ಹಿತಶತ್ರುಗಳು ಸ್ವಲ್ಪ ಕಡಿಮೆಯಾಗಬಹುದು. ಕೃಷಿ ಉತ್ಪನ್ನಗಳನ್ನು ಮಾರುವವರಿಗೆ ಲಾಭವಿರುತ್ತದೆ.

**ಸಿಂಹ** — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಸ್ವಲ್ಪ ಆಲಸ್ಯದ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ನಿರೀಕ್ಷಿತ ಪ್ರಮಾಣದಲ್ಲಿ ಇರುವುದಿಲ್ಲ. ಮಹಿಳೆಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಬರುವ ಸಾಧ್ಯತೆಗಳಿವೆ. ಉದ್ಯೋಗದಲ್ಲಿ ಹಿರಿಯರ ಪ್ರಭಾವವನ್ನು ಬಳಸಿಕೊಂಡು ಮೇಲೇರಬಹುದು. ಈಗ ಹೃದಯಸಂಬಂಧಿ ದೋಷಗಳಿರುವವರು ಹೆಚ್ಚು ಎಚ್ಚರ ವಹಿಸುವುದು ಒಳ್ಳೆಯದು.

**ಕನ್ಯಾ** — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಧರ್ಮದ ಬಗ್ಗೆ ಅತಿಯಾದ ಆಸಕ್ತಿ ಬೆಳೆಯುತ್ತದೆ. ಸಂಗಾತಿಯ ನೆರವಿನಿಂದ ಹೆಚ್ಚು ಆದಾಯ ಮಾಡಿಕೊಳ್ಳಬಹುದು. ಸಂಗೀತಗಾರರಿಗೆ ವಿದೇಶದಲ್ಲಿ ಮನ್ನಣೆ ದೊರೆ ಯುವ ಸಾಧ್ಯತೆಗಳಿವೆ. ನಿಮ್ಮ ನಡವಳಿಕೆಯಿಂದ ಶತ್ರುಗಳು ಹೆಚ್ಚಾಗುವ ಸಾಧ್ಯತೆಗಳಿವೆ. ಹಿರಿಯರ ಆಸ್ತಿಯಲ್ಲಿ ಪಾಲು ಬರಬಹುದು. ಶ್ವಾಸಕೋಶದ ತೊಂದರೆಗಳು ಕೆಲವರನ್ನು ಕಾಡಬಹುದು.

**ತುಲಾ** — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ಆರ್ಥಿಕ ಸಮತೋಲನಕ್ಕಾಗಿ ಹಿರಿಯರ ಬೆಂಬಲವನ್ನು ಪಡೆಯುವ ಸಾಧ್ಯತೆಗಳಿವೆ. ಸಮೂಹದಲ್ಲಿ ಮಾತನಾಡುವಾಗ ಎಚ್ಚರಿಕೆ ಇರಲಿ. ಕೃಷಿ ತಜ್ಞರಿಗೆ ಮತ್ತು ಸಂಶೋಧಕರಿಗೆ ಹೆಚ್ಚಿನ ಆದ್ಯತೆ ದೊರೆಯುತ್ತದೆ. ಮೂಳೆ ತಜ್ಞರಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಸಂಗಾತಿ ಕಡೆಯಿಂದ ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಹೆಚ್ಚು ನೆರವು ದೊರೆಯುತ್ತದೆ.

**ವೃಶ್ಚಿಕ** — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಮನಸ್ಸಿನಲ್ಲಿ ಭಯ ಮಿಶ್ರಿತ ಆಕ್ರೋಶವಿರುತ್ತದೆ. ಆದಾಯ ನಿಮ್ಮ ಅಗತ್ಯತೆಯನ್ನು ಪೂರೈಸುತ್ತದೆ. ಕೃಷಿ ಸಂಬಂಧಿತ ಭೂಮಿಯನ್ನು ಕೊಳ್ಳಬಹುದು. ಮಾನಸಿಕ ರೋಗಿಗಳ ಆರೋಗ್ಯ ಸುಧಾರಣೆ ಹಂತ ತಲುಪುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗಿ ಬರುತ್ತವೆ.

**ಧನುಸ್ಸು** — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ನಿಮ್ಮ ಬದ್ಧತೆಯಿಂದ ಜನರ ಮನಸ್ಸನ್ನು ಗೆಲ್ಲುವಿರಿ. ಆದಾಯ ಕಡಿಮೆ ಇದ್ದರೂ ತೊಂದರೆ ಏನಿಲ್ಲ. ನೀವು ನಿಮ್ಮ ಬುದ್ಧಿವಂತಿಕೆ ಬಳಸಿ ಆದಾಯ ಹೆಚ್ಚು ಮಾಡಿಕೊಳ್ಳಬಹುದು. ಔಷಧ ವ್ಯಾಪಾರ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ಕೃಷಿ ಸಂಬಂಧಿತ ಉಪ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಲಾಭವಿರುತ್ತದೆ. ಸಂಗಾತಿಯು ನಿಮ್ಮ ಕೃಷಿ ಕಾರ್ಯಗಳಲ್ಲಿ ಹೆಚ್ಚು ಸಹಕಾರ ನೀಡುತ್ತಾರೆ.

**ಮಕರ** — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ವೃತ್ತಿ ಬದ್ಧತೆ ಬಹಳ ಹೆಚ್ಚಾಗುತ್ತದೆ. ತೆರಿಗೆ ತಜ್ಞರಿಗೆ ಗಣನೀಯ ಬೇಡಿಕೆ ಬರುತ್ತದೆ. ನಿಮ್ಮ ಕೆಲವು ಕೆಲಸಗಳಿಗೆ ಸ್ನೇಹಿತರು ಬೆಂಬಲ ನೀಡುವರು. ವಿದ್ಯಾರ್ಥಿಗಳಿಗೆ ಉತ್ತಮ ಅಭಿವೃದ್ಧಿ ಇದೆ. ಕೃಷಿ ಸಂಬಂಧಿತ ಉಪಕರಣಗಳಿಗಾಗಿ ಹೆಚ್ಚು ಹಣ ಹಾಕಬೇಡಿ. ಸಂಗಾತಿ ಕೊಂಡ ಆಸ್ತಿಗಾಗಿ ನೀವು ಹಣ ಕೊಡಬೇಕಾಗುತ್ತದೆ. ಸಂಸ್ಕಾರಗಳ ಬಗ್ಗೆ ತಿಳಿವಳಿಕೆ ಪಡೆದುಕೊಳ್ಳುವಿರಿ.

**ಕುಂಭ** — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಕೆಲವು ರಾಜಕೀಯ ನಾಯಕರುಗಳಿಗೆ ಉತ್ತಮ ಸ್ಥಾನ ದೊರಕುವ ಸಾಧ್ಯತೆಗಳಿವೆ. ಆದಾಯದಲ್ಲಿ ವ್ಯತ್ಯಾಸವಿದ್ದರೂ ಆದಾಯಕ್ಕೆ ಕೊರತೆ ಇರುವುದಿಲ್ಲ. ಮಹಿಳಾ ಉದ್ಯಮಿಗಳಿಗೆ ಉತ್ತಮ ಅವಕಾಶ ದೊರೆತು ಹೆಚ್ಚು ಲಾಭವನ್ನು ಮಾಡಬಹುದು. ಬಂಧುಗಳ ಆಸ್ತಿಗಳನ್ನು ನೀವು ಈಗ ಕೊಳ್ಳಬಹುದು.

**ಮೀನ** — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ವರ್ಣರಂಜಿತ ವ್ಯಕ್ತಿತ್ವದೊಂದಿಗೆ ನೀವು ಕಂಗೊಳಿಸುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕುಕ್ಕುಟೋದ್ಯಮ ನಡೆಸುವವರಿಗೆ ಹೆಚ್ಚಿನ ಆದಾಯವಿರುತ್ತದೆ. ಖಾಸಗಿ ಸಾಲಗಳು ನಿಮಗೆ ತೊಂದರೆ ಕೊಡಬಹುದು. ರಾಜಕಾರಣಿಗಳಿಗೆ ಕಡಿಮೆಯಾದ ಜನಬಲ ಪುನಃ ಸಿಗುವ ಸಾಧ್ಯತೆ ಇದೆ. ಉದ್ಯೋಗ ಸ್ಥಳದಲ್ಲಿ ಮಹಿಳಾ ಮೇಲಾಧಿಕಾರಿಗಳು ನಿಮಗೆ ಸಹಾಯ ಮಾಡುವರು.

## ಪದಬಂಧ 2882



**ಮೇಲಿನಿಂದ ಕೆಳಕ್ಕೆ**

1. ಒಂದೇ ನೆತ್ತರನ್ನು ಹಂಚಿಕೊಂಡು ಹತ್ತಿರವಾಗುವ ಬಂಧು 5
2. ಜನ್ಮ ಪತ್ರಿಕೆ ಬರೆಯುವಾಗ ಬೇಕಾಗುವ ಹುಟ್ಟಿದ ಸಮಯ 5
3. ಬೆಳಗಿನ ಆಗಸಕ್ಕೆ ಸರಿಹೋಗುವ ಬಣ್ಣ 4
5. ಬೇಡಿದ್ದನ್ನು ಕೊಡುವವ 4
9. ಜನರನ್ನು ಸಂತೋಷಗೊಳಿಸುವ ಈಶ್ವರ 4
10. ಕೊನೆ ಸಂದೇಶವನ್ನು ಕೊಡುವ ಕಾಲದೇವನ ಶಿಷ್ಯ 4
11. ಒಂದು ರೀತಿ ಪರಸ್ಪರ ಔಪಚಾರಿಕವಾಗಿ ಮಾಡಿಕೊಳ್ಳುವ ಸ್ನೇಹಪೂರ್ವ ಅರಿವು 4
12. ರಾಜಕೀಯ, ಸಾಮಾಜಿಕ ಇತ್ಯಾದಿ ಕ್ಷೇತ್ರಗಳಲ್ಲಿ ನಡೆಯುತ್ತಿರುವುದರ ಅರಿವಿನ ಅಳತೆ 4
13. ಹಬ್ಬದಡಿಗೆಯಲ್ಲಿ ಎಲೆಕೊನೆ ಬೀಳುವ ಕ್ಷೀರಬೆರೆತ ದ್ರವರೂಪಿ ಸಿಹಿ 5
15. ಅಂತರಂಗದಲ್ಲಿ ಮಾಡಬಹುದಾದ ಆರಾಧನೆ 5
16. ಮತ್ತೇರಿದ ಮೂರಡಿಯ ಆನೆ 4
18. ವಿಮಾನ ಸಂಸ್ಥೆಯೊಂದರ ಲಾಂಛನವಾದ ಹಳೆಯರಸು 4

**ಎಡದಿಂದ ಬಲಕ್ಕೆ**

1. ಸೂರ್ಯನಂತೆ ಪ್ರಕಾಶಮಾನ 4
4. ಬೇಡರ ಕಣ್ಣಪ್ಪ, ಮಾರ್ಕಂಡೇಯರಂತೆ ಈಶ್ವರನ ಮೇಲೆ ಅಪಾರ ಪ್ರೀತಿಯಿಟ್ಟವ 4
6. ಆದಿಯೂ ಅಲ್ಲದ ಅಂತ್ಯವೂ ಅಲ್ಲದ ಮಧ್ಯದ ಸಮಯ 4
7. ರಾಶಿಯಾಗಿ ಸಂಗ್ರಹಿತವಾದದ್ದು 4
8. ಸಮಯ ಗೊತ್ತುಪಡಿಸುವ ನಿರ್ಧಾರ 5
11. ಸ್ನಾತಕ ಶಿಕ್ಷಣ ಪಡೆದು ಡಿಗ್ರಿಯ ಅಂತಸ್ತು ಪಡೆದವ 5
14. 'ಮಾನ'ದಿಂದ ಕೂಡಿದ ಒಂದೇ ರೀತಿಯ ಅಭಿಪ್ರಾಯ 5
17. ಸಾವಿತ್ರಿ ಸತ್ಯವಾನನನ್ನು ಬದುಕಿಸಿಕೊಂಡಾಗ ಕಾಲನಿಗುಂಟಾದ ಪರಾಭವವನ್ನು ಚಿತ್ರಿಸಿದ ನಾಟಕ 5
19. ಕಾಲಡಿಯಲ್ಲಿ ಹರಿವ ರಾಸಾಯನಿಕ ದ್ರವ 4
20. ಕೃಷ್ಣದೇವರಾಯನ ಪ್ರಸಿದ್ಧ ಅಳಿಯ 4
21. ಹಿಂದಿನ ಕಾಲದಲ್ಲಿ ತಳೆದಿದ್ದ ಹುಟ್ಟು 4
22. ಸರಿಯಾಗಿ ನಡು ಸಾಯಂಕಾಲದ ಹೊತ್ತು 4

## ಪದಬಂಧ ಉತ್ತರ -2881

**ಮೇಲಿಂದ ಕೆಳಕ್ಕೆ**

1. ಶಿವರಾತ್ರಿ 2.ನಿಜ 3.ಹತ್ತುಸಾವಿರ 4.ತಿರುಕ 6.ಸವಿನಯ 7.ಕಾಗದದದೋಣಿ 9.ಲಕ್ಷ್ಮೀನರಸಿಂಹ 12.ವಾನರ 15.ಪರಮಭಕ್ತ 16.ಮಕರಂದ 19.ಗವಿರಾಯ 20.ಬಡವಿ 23.ರವಿ

**ಎಡದಿಂದ ಬಲಕ್ಕೆ**

1.ಶಿವಾನಿ 3.ಹರಪಾರ್ವತಿ 5.ಜಲಸ 6.ವಿರಸಾ 7.ಕಾಯಕ 8.ತ್ರಿಕಾಲಜ್ಞಾನ 10.ವಿರಾಗ 11.ಯವಾರ 13.ಸಾಂತ್ವನ 14.ದಕ್ಷಿಣ 15.ಪರಮ 17.ಸಿಂಗಾರ 18.ಕಲ್ಯಾಣಿರಾಗ 20.ಬರಹ 21.ಮಧುರಂ 22.ದಸರ 24.ವಿಷಯಾಸಕ್ತ 25.ವಿದಾಯ

# ಬೆಂಗಳೂರಿನ ಅಸ್ಮಿತೆ ವಿಮಲಾ ರಂಗಾಚಾರ್

ಶ್ರೀನಿವಾಸ ಜಿ.ಕಪ್ಪಣ್ಣ

ವಿಮಲಾ ರಂಗಾಚಾರ್

ಬೆಂಗಳೂರಿನಲ್ಲಿ ಎಡಿಎ ರಂಗಮಂದಿರ ಇರದಿದ್ದರೆ... ಬಾಲಭವನದಲ್ಲಿ ಮಕ್ಕಳ ರಂಗಮಂದಿರ ಇರದಿದ್ದರೆ... ರವೀಂದ್ರ ಕಲಾಕ್ಷೇತ್ರ ಈಗ ಇದ್ದಂತೆ ಇರದಿದ್ದರೆ...

ಕೆನರಾ ಬ್ಯಾಂಕಿನಲ್ಲಿ 'ಕೌಶಲ' ಯೋಜನೆ ಅಡಿಯಲ್ಲಿ ಸರಳ ಸಾಲ ಮತ್ತು ಕರಕುಶಲ ಕಲೆಗಳಿಗೆ ಪ್ರೋತ್ಸಾಹ ದೊರೆಯದಿದ್ದರೆ...

ಕಾವೇರಿ ಎಂಪೋರಿಯಂಗೆ ಈಗಿರುವ ಮಾನ್ಯತೆ ದೊರೆಯದೇ ಇದ್ದಿದ್ದರೆ...

ಒಂದುವೇಳೆ ಹೀಗೆ ಆಗಿದ್ದರೆ ಬೆಂಗಳೂರಿನ ಸಾಂಸ್ಕೃತಿಕ ಲೋಕವನ್ನು ಊಹಿಸುವುದೇ ಕಷ್ಟವಾಗುತ್ತಿತ್ತು. ವಿಮಲಾ ರಂಗಾಚಾರ್ ಅವರು ಕರಕುಶಲ ಕಲೆ, ಸಂಗೀತ, ನೃತ್ಯ, ರಂಗಭೂಮಿ, ಮಹಿಳಾ ಸಬಲೀಕರಣ, ಮಹಿಳಾ ಶಿಕ್ಷಣ.. ಹೀಗೆ ಹಲವಾರು ಆಯಾಮಗಳಲ್ಲಿ ಶ್ರಮಿಸಿದರು.

ಇನ್ನೊಂದು ನಾಲ್ಕುವರ್ಷ ಕಳೆದಿದ್ದರೆ ಶತಾಯುಷಿಯಾಗಿರುತ್ತಿದ್ದ ಸ್ಫುರದ್ರೂಪಿ ವಿಮಲಾ, ಸಂಪ್ರದಾಯಸ್ಥ ಕುಟುಂಬದ ಮಹಿಳೆ. ದೂರದರ್ಶಿತ್ವ ಮತ್ತು ಆಡಳಿತ ಎರಡನ್ನೂ ಅತಿಶಿಸ್ತಿನಿಂದ ನಡೆಸಿಕೊಂಡು ಬಂದರು. ಘನತೆಯಿಂದ ಬದುಕಿದರು. ಮೃದುಮಾತಿನ, ಮೆಲುಧ್ವನಿಯ ಆದರೆ ಗಟ್ಟಿ ನಿಲುವಿನ ಸುಶಿಕ್ಷಿತ ಮಹಿಳೆ. ಸಿದ್ಧಚೌಕಟ್ಟುಗಳನ್ನು ಮೀರಿ, ಸಕಾರಾತ್ಮಕವಾಗಿ ಬೆಳೆಯುವುದನ್ನು ತೋರಿಸಿಕೊಟ್ಟವರು.

ಕಾವೇರಿ ಎಂಪೋರಿಯಂನ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದ ನಂತರ ರಾಜ್ಯಪಾಲರಾದ ಧರ್ಮವೀರ ಅವರು ಬಾಲಭವನದ ಜವಾಬ್ದಾರಿ ವಹಿಸಿಕೊಟ್ಟರು.

ಮಕ್ಕಳ ಮನಃಶಾಸ್ತ್ರ ಓದಿದ್ದ ಅವರು ಮಕ್ಕಳ ರಂಗಭೂಮಿಯತ್ತ ಹೆಚ್ಚು ಒಲವು ತೋರಿದರು. ಎಂ.ಎಸ್.ಸತ್ಯು, ಬಿ.ವಿ.ಕಾರಂತ, ಪ್ರೇಮಾ ಕಾರಂತ, ಗಿರೀಶ ಕಾರ್ನಾಡ್ ಮುಂತಾದವರೆಲ್ಲ ಇವರ ಕನಸಿಗೆ ನೀರೆರೆದರು. ಬಲು ಶಿಸ್ತಿನ ವಿಮಲಾ ಅವರು ಕಲೆಗೆ ಯಾವತ್ತೂ ಮೌಲ್ಯ ಕಟ್ಟಲಾಗದು ಎಂದೇ ಹೇಳುತ್ತಿದ್ದರು. ಟಿ.ಪಿ.ಕೈಲಾಸಂ ರಚನೆಯ 'ಪೋಲಿ ಕಿಟ್ಟಿ' ನಾಟಕ ಎಂಟು ಪ್ರದರ್ಶನ ಕಂಡಿತ್ತು. ಪ್ರತಿ ಪ್ರದರ್ಶನಕ್ಕೂ ಎಂಟು ಸಾವಿರ ರೂಪಾಯಿ ಸಂಭಾವನೆ ನೀಡಿದ್ದರು. ಕಲೆಯು ಕಲಾವಿದರನ್ನು ಪೋಷಿಸಿದರಷ್ಟೇ ಕಲಾವಿದರೂ ಕಲೆಯನ್ನು ಪೋಷಿಸುತ್ತಾರೆ ಎಂಬುದು ಅವರ ನಂಬಿಕೆ ಆಗಿತ್ತು. ವೃತ್ತಿಪರ ಬಾಂಧವ್ಯವನ್ನು ಬಯಸುತ್ತಿದ್ದ ಅವರು ಅಶಿಸ್ತನ್ನು ಸಹಿಸುತ್ತಿರಲಿಲ್ಲ. ಈ ನಾಟಕದ ಒಂಬತ್ತನೆಯ ಪ್ರದರ್ಶನಕ್ಕೆ ಮುಖ್ಯ ಕಲಾವಿದ ಬರುವುದಿಲ್ಲವೆಂದು ಹೇಳಿದ್ದರಿಂದ ಪ್ರದರ್ಶನ ರದ್ದಾಗಬೇಕಾಯಿತು. ಈ ಬಗ್ಗೆ ಮಾಹಿತಿ ನೀಡಲಿಲ್ಲ ಎಂಬ ಕಾರಣಕ್ಕೆ, ಇನ್ನುಂದೆ ಬಾಲಭವನದ ಹೊಸಿಲು ತುಳಿಯಕೂಡದು ಎಂದು ಕಠಿಣವಾಗಿ ನನಗೆ ಹೇಳಿದ್ದರು. ಹೀಗೆ ಹೇಳುವಾಗ ಯಾವುದೇ ದರ್ಪ ಇರಲಿಲ್ಲ. ಗೌರವದಿಂದಲೇ ನನ್ನ ತಪ್ಪು ಮನವರಿಕೆಯಾಗುವಂತೆ ಹೇಳಿ ದಂಡಿಸಿದ್ದರು. ಆ ಅವರ ಧ್ವನಿ, ಧಾಟಿ ಇವೆರಡೂ ಶಿಸ್ತನ್ನು ರೂಪಿಸಿತು.

80ರ ದಶಕದಲ್ಲಿ ಕೆನರಾ ಬ್ಯಾಂಕ್ ನಿರ್ದೇಶಕ ಮಂಡಳಿಗೆ ವಿಮಲಾ ಅವರನ್ನು ನೇಮಿಸಲಾಗಿತ್ತು. ಆಡಳಿತದಲ್ಲಿ ಮಹಿಳಾ ದೃಷ್ಟಿಕೋನದ ಮಹತ್ವವನ್ನು ಮನಗಾಣಿಸುವಂತೆ ಕರಕುಶಲಗಾರರಿಗೆ ತರಬೇತಿ ಮತ್ತು ಉದ್ಯೋಗಾವಕಾಶ ಕಲ್ಪಿಸುವ ಯೋಜನೆ ಕೈಗೆತ್ತಿಕೊಂಡರು. ಅವರ ಪರಿಕಲ್ಪನೆಯ 'ಕೌಶಲ್ಯ' ಯೋಜನೆ ಆರಂಭವಾಗಿದ್ದು ಹೀಗೆ. ಮುಂದೆ ಶಿಲ್ಪಕಲಾ ಗ್ರಾಮ ಸ್ಥಾಪನೆಗೆ ಇದು ಪ್ರೇರಣೆ ಆಯಿತು.

ತಾಯಿ ಅಮ್ಮಣ್ಣಿ ಅಯ್ಯಂಗಾರ್ ಅವರಿಂದ ಬಂದ ಬಳುವಳಿ ಇದು. ಅವರೂ ಆ ಕಾಲಕ್ಕೆ ವಸ್ತ್ರವಿನ್ಯಾಸ ಮಾಡಿ, ರೇಷ್ಮೆ ಸೀರೆಗಳಿಗೆ ಹೊಸಹೊಸ ಚಿತ್ತಾರಗಳ ಅಂಚು, ಒಡಲು ಹೆಣೆಯಲು ಹೇಳಿಕೊಡುತ್ತಿದ್ದರು. ಮಗಳು ವಿಮಲಾ ಕರಕುಶಲ ಕರ್ಮಿಗಳೊಂದಿಗೆ ಸಂಪರ್ಕ ಬೆಳೆಯಲು ಸಾಧ್ಯವಾದುದು ಮನೆಗೆ ಬರುವ ನೇಕಾರರಿಂದ. ಕಲೆ ಉಳಿಯಬೇಕು ಎಂಬುದು ಅವರ ತುಡಿತವಾಗಿತ್ತು.

ಅಂತಃಕರಣದ ಮಹಾಒಡಲು ಅವರದ್ದಾಗಿತ್ತು. ಸಿ.ವಿ. ರಾಮನ್ ಅವರ ಪತ್ನಿ ಲೋಕಸುಂದರಿ ಅವರು ಆರಂಭಿಸಿದ್ದ ಸೇವಾ ಸದನವನ್ನು 1950ರಲ್ಲಿ ವಿಮಲಾ ಅವರ ಸುಪರ್ದಿಗೆ ಒಪ್ಪಿಸಿದರು. ನಿರಾಶ್ರಿತ ಮಹಿಳೆಯರು ಮತ್ತು ಮಕ್ಕಳ ದೇಖುರೇಕಿಗಾಗಿ ಆರಂಭಿಸಿದ್ದ ಈ ಸಂಸ್ಥೆಯನ್ನು ಬೆಂಗಳೂರು ಮತ್ತು ಮಲ್ಲೇಶ್ವರದ ಅಸ್ಮಿತೆಯಾಗಿ ಬೆಳೆಸಲಾಯಿತು.

ವಿಮಲಾ ಅವರು ರಂಗಾಚಾರ್ ಅವರನ್ನು ಮದುವೆಯಾದಾಗ, ಪತಿ ವೈದ್ಯ ಆಗಿರುವುದರಿಂದ ತಾವೂ ನರ್ಸಾಗಿ ಅವರೊಂದಿಗೆ ಸೇವೆ ಸಲ್ಲಿಸಬೇಕು ಎಂದು ಬಯಸಿದ್ದರು. ಆದರೆ ಅವರ ಪತಿ ಸ್ವತಂತ್ರ ವ್ಯಕ್ತಿತ್ವ ರೂಢಿಸಿಕೊಳ್ಳಲು ಸೂಚಿಸಿದ್ದರಿಂದ ಮಕ್ಕಳ ಮನಃಶಾಸ್ತ್ರ ಓದಿದರು. ತಂದೆ ಅವರೊಂದಿಗೆ ನಾಟಕಗಳನ್ನು ನೋಡಲು ಹೋಗುತ್ತಿದ್ದ ಅವರು, ಆಮೇಲೆ ತಮ್ಮ ಪತಿಯೊಂದಿಗೆ ನಾಟಕಗಳಲ್ಲಿ ನಟಿಸಲಾರಂಭಿಸಿದರು. ಆ ಕಾಲದಲ್ಲಿ ಬೆಂಗಳೂರಿನ ಕಾಲೇಜುಗಳಲ್ಲಿ ಮಹಿಳೆಯರ ತಂಡ ನಾಟಕವಾಡುತ್ತಿದ್ದರೆ ಗಂಡು ಪಾತ್ರಗಳನ್ನೂ ಮಹಿಳೆಯರೇ ನಿರ್ವಹಿಸುತ್ತಿದ್ದರು. ಗಂಡು ಮಕ್ಕಳ ತಂಡಗಳಿದ್ದರೆ ಹೆಣ್ಣು ಪಾತ್ರಗಳನ್ನು ಪುರುಷರೇ ನಿರ್ವಹಿಸುತ್ತಿದ್ದರು. ವಿಮಲಾ ಅವರು ಮಾತ್ರ ಸಂಪ್ರದಾಯಸ್ಥ ಮನಸ್ಥಿತಿಯ ಎಂ.ವಿ. ಶಾಸ್ತ್ರಿಗಳಿಗೆ 'ನಾನು ನಟಿಸುತ್ತಿಲ್ಲವೇ'? ಎಂದು ಪ್ರಶ್ನಿಸಿ ಅವರ ಮನೋಭಾವ ಬದಲಿಸಿದ್ದರು.

ಸಿದ್ಧಚೌಕಟ್ಟನ್ನು ಮೀರಿ ಬೆಳೆಯುವುದು ಅವರಿಗಿಷ್ಟದ ಕೆಲಸವಾಗಿತ್ತು. ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದಿದ್ದರೂ ಮುಕ್ತವಾಗಿ ಇರುವುದನ್ನು ಅವರು ಬದುಕಿ ತೋರಿದರು.

ವಿಮಲಾ ರಂಗಾಚಾರ್ ಅವರ ಪರಿಚಿತರ ಬಳಗವೇ ದೊಡ್ಡದಿತ್ತು. ಯಾವಾಗಲೂ ಯಾರಿಂದಲೂ ಯಾವುದನ್ನೂ ಅಪೇಕ್ಷಿಸದೇ ಕೆಲಸ ಮಾಡುತ್ತಿದ್ದ ಅವರ ಸುತ್ತಲೂ ಅಧಿಕಾರಶಾಹಿಗಳ ಮತ್ತು ಸಿರಿವಂತರ ಗುಂಪು ಸದಾ ಸೇರಿರುತ್ತಿತ್ತು. ಎಲ್ಲರನ್ನೂ ಒಂದೇ ದೃಷ್ಟಿಯಿಂದ ಅವರು ಕಾಣುತ್ತಿದ್ದರಿಂದ ಅವರು ಕೈ ಇರಿಸಿದ ಎಲ್ಲ ಕೆಲಸಗಳೂ ಹೂ ಎತ್ತಿದಂತೆ ಸರಾಗವಾಗಿ ಆಗುತ್ತಿದ್ದವು.'ನೀಡಿರುವ ಜವಾಬ್ದಾರಿಯನ್ನು ಸಂಪೂರ್ಣ ಬದ್ಧತೆ ಮತ್ತು ಸಮರ್ಪಣೆಯಿಂದ ಮಾಡಿ. ಯಾರ ಯಾವ ಟೀಕೆಗಳಿಗೂ ಉತ್ತರಿಸಬೇಕಾಗಿಲ್ಲ. ಯಾರಿಂದಲೂ ಏನೂ ನಿರೀಕ್ಷಿಸಬೇಕಾಗಿಲ್ಲ, ಯಾವ ಅಪೇಕ್ಷೆಗಳನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ಅವು ತಾವಾಗಿಯೇ ತಮ್ಮ ಉದ್ದೇಶ ಈಡೇರುವಂತೆ ಬೆಳೆಯುತ್ತವೆ ಎಂಬಂತೆ ಅವರು ಬದುಕಿದರು.

ಎಡಿಎ ರಂಗಮಂದಿರ ಆರಂಭವಾಗಿದ್ದೂ ಹೀಗೆಯೇ. ಕೇಂದ್ರ ಸಾಹಿತ್ಯ ಅಕಾಡೆಮಿಯ ದಕ್ಷಿಣ ಕಚೇರಿಗೆ ಮೊದಲು ಸ್ಥಳ ಒದಗಿಸಲು ಮನಸು ಮಾಡಿದ್ದೇ ವಿಮಲಾ ರಂಗಾಚಾರ್. ಎಡಿಎ ರಂಗಮಂದಿರದ ಮೇಲ್ಭಾಗದಲ್ಲಿ ಜಾಗ ನೀಡಿರದೇ ಇದ್ದರೆ ಅದಿಲ್ಲಿಗೆ ಬರುತ್ತಲೇ ಇರಲಿಲ್ಲ. ರವೀಂದ್ರ ಕಲಾಕ್ಷೇತ್ರ ಬೆಂಗಳೂರಿನಲ್ಲಿ ರೂಪು ತಳೆಯಲು ಗಟ್ಟಿಯಾಗಿ ನಿಂತವರಲ್ಲಿ ಇವರೂ ಒಬ್ಬರು.

ಬೆಂಗಳೂರಿನಲ್ಲಿ ನಾಟಕಗಳ ಪ್ರದರ್ಶನಕ್ಕೆ, ನೃತ್ಯಗಳ ಪ್ರದರ್ಶನಕ್ಕೆ ವೇದಿಕೆಗಳಿದ್ದರೆ ಅವು ವಿಮಲಾ ಅವರ ಪರಿಶ್ರಮದಿಂದ ತಲೆ ಎತ್ತಿರುವ ರಂಗಮಂದಿರಗಳಾಗಿವೆ.

ಸಬಲೀಕರಣ, ಸಮಾನತೆ, ಸಮಾನ ಅವಕಾಶಗಳು ಇವೆಲ್ಲ ಪದಗಳ ಪರಿಕಲ್ಪನೆಯಾಗುವ ಕಾಲದಲ್ಲಿ ಕೇವಲ ಬದ್ಧತೆ ಮತ್ತು ಸಿದ್ಧಚೌಕಟ್ಟಿನಿಂದಾಚೆ ಬರುವ ಸಾಹಸ ಮನೋಭಾವವನ್ನು ಕಾರ್ಯರೂಪಕ್ಕಿಳಿಸುವ ಕಾರ್ಯಕ್ಷಮತೆಯಿಂದ ವಿಮಲಾ ರಂಗಾಚಾರ್ ಬದುಕಿದರು. 2025ರ ಫೆ.25ರಂದು ತಮ್ಮ ಬದುಕಿನ ಯಾನ ಮುಗಿಸಿದ ವಿಮಲಾ ಅವರ ಬಗ್ಗೆ ನುಡಿನಮನ ಕಾರ್ಯಕ್ರಮಗಳಾದಾಗ ಎಲ್ಲರೂ ಅವರ ಕೆಲಸಗಳ ಬಗ್ಗೆಯೇ ಮಾತಾಡಿದರು. ಮಾತುಗಳಾಡುತ್ತ ಅವರು ಬದುಕಲಿಲ್ಲ. ಅವರ ಬದುಕೇ ಮಾತುಗಳಾದವು. ಪ್ರೇರಣೆಯ ಮಾತು, ಮನೋಸ್ಥೈರ್ಯದ ಮಾತು, ದೂರದೃಷ್ಟಿಯ ಮಾತು, ಲಲಿತ ಕಲೆಗಳ ಉಪಾಸನೆ ಹಾಗೂ ಪೋಷಣೆಯ ಮಾತು.

ಆ ಜೀವ... ನಮ್ಮ ನಡುವೆ ಇಂಥ ಜೀವನ ನಡೆಸಿ ಹೋಯಿತು.

ನಿರೂಪಣೆ: ರಶ್ಮಿ ಎಸ್

**ಕಥೆ** — ಶಾಲಿನಿ ರಮೇಶ ಅವರ **ದೂರ ಸರಿದವನು** — ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — https://www.prajavani.net/short-story

**ಕವನ** — ನಂದಿನಿ ಹೆದ್ದುರ್ಗ ಅವರ **ಕವಿಯೆಂಬುವವಳು** — ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — https://www.prajavani.net/poetry

**ಸಾದರ ಸ್ವೀಕಾರ** — ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

# ...ಗಂಗಮ್ಮ ಬಂದಳು



10ನೇ ಪುಟದಿಂದ...

ಪ್ರಸ್ತುತ ಈ ಬಾವಿ ಇರುವ ಜಾಗವನ್ನು ಮಾರಾಟ ಮಾಡಿದ್ದಾರೆ.

ಗೌರಿ ಮಾತನಾಡುತ್ತಲೇ ಸಮೀಪದ ಅಂಗನವಾಡಿ ಕೇಂದ್ರದ ಬಳಿ ಕರೆದೊಯ್ದರು. ಅಲ್ಲಿರುವ ಬಾವಿ ತೋರಿಸುತ್ತ, 'ಬಾವಿ ತೋಡುವುದು ಇನ್ನು ಸಾಕು ಅನಿಸಿ ಸುಮ್ಮನಿದ್ದೆ. ಅದಾಗಲೇ ಹಲವೆಡೆ ಸನ್ಮಾನ, ಗೌರವಗಳು ತಾವಾಗಿಯೇ ಹುಡುಕಿ ಬಂದಿದ್ದವು. ಆಗ ಮನಸ್ಸಲ್ಲಿ ಈ ಸನ್ಮಾನಗಳಿಗೆ ಯೋಗ್ಯಳಲ್ಲ ಎಂಬ ಭಾವನೆ ಬಂತು. ಆಗ ಸಮಾಜಕ್ಕಾಗಿ ಏನಾದರೂ ಮಾಡಬೇಕು ಎನ್ನುವ ಆಸೆ ಮೊಳಕೆಯೊಡೆಯಿತು. ಆ ವೇಳೆಗೆ (2024) ಸರಿಯಾಗಿ ಮನೆ ಬಳಿ ಇರುವ ಅಂಗನವಾಡಿಗೆ ನೀರಿನ ಕೊರತೆ ಇದೆಯೆಂಬ ವಿಷಯ ಕಿವಿಗೆಬಿತ್ತು. ಸಮೀಪದ ಹುತ್ಗಾರ ಗ್ರಾಮ ಪಂಚಾಯಿತಿಯಿಂದ ಆಗೊಮ್ಮೆ ಈಗೊಮ್ಮೆ ಬರುವ ನೀರು. ಅದು ಬಿಟ್ಟರೆ ಶಿಕ್ಷಕಿಗೆ ದೂರದ ಬಾವಿಯಿಂದ ಕೊಡ ಹೊತ್ತು ನೀರು ತರುವ ಶಿಕ್ಷೆ. ಮೊಮ್ಮಗನನ್ನು ಅಂಗನವಾಡಿಗೆ ಬಿಡಲು ಹೋದ ನನ್ನ ಮನಸ್ಸಿಗೆ ಬಂದ ಯೋಚನೆಯೊಂದೇ, ಅದು ಬಾವಿ ತೋಡುವುದು.'

ಗೌರಿ ನಾಯ್ಕ ಕೂಡಲೇ ಶಿಕ್ಷಕಿ ಮತ್ತು ಗ್ರಾಮ ಪಂಚಾಯಿತಿ ಮುಖ್ಯಸ್ಥರ ಬಳಿ ಮಾತನಾಡಿದರು. ಮರುದಿನ ಬೆಳ್ಳಂಬೆಳಿಗ್ಗೆ ಅಂಗನವಾಡಿ ಹಿಂದೆ ಜಾಗ ಗುರುತು ಮಾಡಿದರು. ಮನೆಯ ಮೂಲೆಯಲ್ಲಿ ಪೇರಿಸಿಟ್ಟ ಪಿಕಾಸಿ, ಗುದ್ದಲಿ, ಹಾರೆ, ಬಕೆಟ್‌ಗಳನ್ನು ತಂದು ಭೂಮಿ ಅಗೆತ ಆರಂಭಿಸಿದರು. ಸೂರ್ಯ ನೆತ್ತಿಗೇರುವ ಮುನ್ನವೇ ಮೂರಡಿ ಆಳದಲ್ಲಿ ಪಿಕಾಸಿ ಅಗೆತದ ಸದ್ದು ಕೇಳಿಸುತ್ತಿತ್ತು. ವಾರ ಕಳೆಯುವುದರಲ್ಲಿ 15 ಅಡಿ ಬಾವಿ ತೋಡಿದ್ದರು. ಆಗ ವಿಘ್ನವೊಂದು ಎದುರಾಯಿತು. ಬಾವಿ ತೆಗೆಯಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅನುಮತಿ ಪಡೆದಿಲ್ಲ ಎಂಬ ತಕರಾರು. ಸ್ವಾರ್ಥವಿಲ್ಲದೇ ಪುಟ್ಟ ಮಕ್ಕಳಿಗೆ ನೀರುಣಿಸಲು ಮುಂದೆ ಬಂದ ಇವರಿಗೆ ತೊಂದರೆ ಆಗುತ್ತಿರುವುದನ್ನು ಗಮನಿಸಿದ ಗ್ರಾಮಸ್ಥರು ಬೆಂಬಲಕ್ಕೆ ನಿಂತರು. ಅಲ್ಲಿಗೆ ಗೌರಿ ಅವರ ಉತ್ಸಾಹ ನೂರ್ಮಡಿಸಿತ್ತು. ಮತ್ತೆ ವಾರ ಕಳೆಯುವುದರಲ್ಲಿ 30 ಅಡಿ ಆಳದಿಂದ ಒಂಟಿಯಾಗಿಯೇ ಮಣ್ಣೆತ್ತಿ ನೀರ ಸೆಲೆ ಹುಡುಕುತ್ತಿದ್ದರು. ಈ ಬಾವಿಯು 60 ಅಡಿಯಷ್ಟು ಆಳ ಕಂಡಾಗ ಗಂಗೆ ಉಕ್ಕಿದಳು. ಈ ಬಾವಿಗೆ ಕಟ್ಟೆ ಕಟ್ಟಿಸಿಕೊಟ್ಟದ್ದೂ ಇವರೇ.

'ಗಂಗೆ ಅಂದ್ರ ಪವಿತ್ರ ನೀರು. ಅದನ್ ಎಲ್ ಮಿಂದ್ರೂ ಪುಣ್ಯ ಬರ್‍ತೈತಿ. ಯಾರೀಗ್ ಕೊಟ್ರೂ ಜೀವ್ನ ಪಾವನ ಆಗ್ತೈತಿ. ನಸೀಬದಾಗ್ ಬರದ್ರ ಮಾತ್ರ ಗಂಗೆ ಸಂಗ ಆಗ್ತೈತಿ. ನನ್ ನಸೀಬ್ ಚೊಕ್ಕಿತ್ತು ಹಂಗಾಗೇ ನಾನು ನಾಲ್ಕು ಬಾವಿ ತೋಡಿದಾಗ್ಲೂ ಸಂಗ ಬಿಡ್ದೆ ನನ್ ಕೈಹಿಡಿದ್ಲು ಆಕೀ'.... ಹೀಗೆ ಮಾತಾಡುತ್ತಲೇ ಅವರು ತಾವು ನೆಟ್ಟ ಅಡಿಕೆ ಗಿಡಗಳಿಗೆ ಬಾವಿಯಿಂದ ನೀರೆತ್ತಿ ಉಣಿಸುತ್ತಿದ್ದರು.

ಬಾವಿಗೆ ನೀರು ಸೇದಲು ಬಿಟ್ಟ ಕೊಡ 'ಡುಡುಂ.. ಡುಡುಂ..' ಸಪ್ಪಳ ಮಾಡುತ್ತಿತ್ತು. ಮಾತು ಮುಂದುವರೆಸಿದ ಅವರು, 'ದೂರದಲ್ಲಿ ಮಹಾ ಕುಂಭಮೇಳ ನಡೀತೈತಿ ಅನ್ನೋದು ಗೊತ್ತಿತ್ತು. ಅಲ್ಲಿಗೆ ಹೋಗೋದು ಅಂದ್ರ ರೊಕ್ಕನೂ ಬೇಕು, ಶಕ್ತಿನು ಬೇಕು. ನನ್ ಹತ್ರ ಶಕ್ತಿ ಒಂದೇ ಇತ್ತು. ಪವಿತ್ರಸ್ನಾನ ಮಾಡುವ ಇಚ್ಛೆ ಮನಸಲ್ ಗಟ್ಟಿಯಾಗಿತ್ತು. ಹೆಂಗೂ ಗಂಗೆ ಜತೆ ಹಳೆ ನಂಟು ಇತ್ತು ನಂದು. ಹಂಗಾಗ್ ಆಕಿ ನನ್ ಕೈಬಿಡೂದಿಲ್ಲಾ ಅನ್ನೋ ನಂಬ್ಕಿ ಮ್ಯಾಲೆ ಒಂಟಿಯಾಗೇ ಬಾವಿ ತೋಡ್ದೆ. ನೀರೂ ಬಂತು, ನನ್ ಪವಿತ್ರ ಸ್ನಾನಾನೂ ಆತು. ಕುಂಭಕ್ ಹೋಗ್ದೇ ಗಂಗೆ ಸ್ನಾನ ಮಾಡಿದ್ ಪುಣ್ಯ ನನಗೆ ಬಂತು. ಈ ಬಾರಿ ಶಿವರಾತ್ರಿ ದಿನ ಇದೇ ಬಾವಿ ನೀರ್ನಿಂದ ಶಿವನಿಗೂ ಅಭಿಷೇಕ ಮಾಡಿಸಿದೆ. ನಾ ತೋಡಿದ್ ನಾಲ್ಕನೇ ಬಾವ್ಯಾಗ್ ಮಹಾಕುಂಭ, ಶಿವರಾತ್ರಿ ನೆನಪೈತಿ' ಅನ್ನುವಾಗ ಗೌರಿ ಭಾವುಕರಾದರು.

ತುಂಬಿದ ಕೊಡವನ್ನು ಸರಸರನೆ ಎತ್ತಿ ಮನೆಯ ಬಚ್ಚಲು ಹಂಡೆಗೆ ನೀರು ಸುರಿದ ಅವರು ತಾವು ತೋಡಿದ ಬಾವಿಗಳ ಘಟನಾವಳಿಗಳನ್ನು ನೆನಪಿಸಿಕೊಂಡು ಪುಳಕಗೊಂಡರು.

'ನನ್ನ ಸಂಗಾತಿಗಳು ಅಂದ್ರೆ ಗುದ್ದಲಿ, ಬಕೆಟ್, ಹಗ್ಗ, ಪಿಕಾಸಿ, ಹಾರೆ, ಚಾಣ. ಬಾವಿ ತೋಡುವ ಕೆಲಸ ಗಂಡಸರಿಗೆ ಮಾತ್ರ ಸೀಮಿತವಲ್ಲ. ದೈಹಿಕ ಸಾಮರ್ಥ್ಯ, ಛಲವಿದ್ದರೆ ಹೆಂಗಸರೂ ಮಾಡಬಹುದು. ಈ ಹಿಂದೆ ನಿತ್ಯ ಆರೆಂಟು ತಾಸು ಕೆಲಸ ಮಾಡಿ ಬಾವಿ ತೆಗೆದಿದ್ದೆ. ಆಗ ತೋಡಿದ ಬಾವಿಯಲ್ಲಿ ಈಗಲೂ ಏಳು ಅಡಿ ನೀರು ಇದೆ. ನನ್ನ ತೋಟದ ಗಿಡಗಳಿಗೆ ಈ ನೀರೇ ಆಸರೆಯಾಗಿದೆ. ಅದೇ ರೀತಿ ಅಂಗನವಾಡಿ ಹಿಂಭಾಗ ನಾನೇ ಜಾಗ ಹುಡುಕಿಕೊಂಡು ತೆಗೆದ ಬಾವಿಯಲ್ಲಿ ನೀರು ಬಂದು ಈಗ ಅಲ್ಲಿನ ಮಕ್ಕಳು ಅದೇ ನೀರು ಕುಡಿಯುತ್ತಿದ್ದಾರೆ. ನನಗೆ ಅದನ್ನು ನೋಡುವುದಕ್ಕಿಂತ ಖುಷಿ ಬೇರೊಂದಿಲ್ಲ' ಎನ್ನುವಾಗ ಅವರ ಕಣ್ಣಂಚಲ್ಲಿ ನೀರು ಚಿಮ್ಮಿತು.

# ಅನನ್ಯ ಮಹಾಯಾನಗಾಥೆ...

10ನೇ ಪುಟದಿಂದ...

ಇದಕ್ಕಾಗಿಯೇ ತಂಡದಲ್ಲಿ 'ವೆದರ್ ರೂಟರ್' ಆಗಿ ಒಬ್ಬರು ಇರುತ್ತಾರೆ. ಅವರು ಗಾಳಿಯ ದಿಕ್ಕು, ವೇಗ ಹಾಗೂ ಹವಾಮಾನದ ಮಾಹಿತಿ ರವಾನಿಸುತ್ತಿರುತ್ತಾರೆ. ಎಲ್ಲಾ ಬೋಟ್‌ಗಳಲ್ಲಿ ಆಟೊಮ್ಯಾಟಿಕ್ ಐಡೆಂಟಿಫಿಕೇಶನ್ ಸಿಸ್ಟಂ (ಎಐಎಸ್) ಇರುತ್ತದೆ. ಇದು ನಿರಂತರವಾಗಿ ಸುತ್ತಮುತ್ತಲಿನ ಎಲ್ಲಾ ಬೋಟ್, ಹಡಗುಗಳ ಮಾಹಿತಿಯನ್ನು ನೀಡುತ್ತಿರುತ್ತದೆ. ರಾತ್ರಿ ವೇಳೆಯಲ್ಲಿ ಯಾವುದಾದರೂ ಹಡಗುಗಳು ನನ್ನ ದಾರಿಯಲ್ಲಿದ್ದರೆ ಅಲಾರ್ಮ್ ಮೂಲಕ ಅದು ಎಚ್ಚರಿಸುತ್ತದೆ. ಜೊತೆಗೆ 'ಬೀಗ' ಎನ್ನುವ ಉಪಗ್ರಹ ಆಧಾರಿತ ಇಂಟರ್‌ನೆಟ್ ವ್ಯವಸ್ಥೆಯೂ ಬೋಟ್‌ನಲ್ಲಿತ್ತು. ಈ ಮೂಲಕ ಕುಟುಂಬದ ಸಂಪರ್ಕದಲ್ಲಿದ್ದೆ. ಮೊಬೈಲ್‌ನಲ್ಲಿದ್ದ ಹಲವು ಜಾನರ್‌ನ ಸಂಗೀತ, ಆಡಿಯೊ ಬುಕ್ಸ್ ಹಾಗೂ ಪಾಡ್‌ಕಾಸ್ಟ್‌ಗಳನ್ನು ಪ್ರತಿನಿತ್ಯವೂ ಕೇಳುತ್ತಿದ್ದೆ.

ನಾನು ಮಾನಸಿಕವಾಗಿ ಕಡಲ ನೀಲಿಯಲ್ಲಿ ಕರಗಿಹೋಗಿದ್ದೆ. ದೇಹವು ಸಮುದ್ರದಂತೆ ಆಗಿರುವ ಅನುಭವವದು. ಅದೊಂದು ಕಠಿಣವಾದ ವಾತಾವರಣ. ಆದರೆ ಅಷ್ಟೇ ಸುಂದರ. ಯಾನದಲ್ಲಿ ಕೇವಲ ನೀಲಿ ಸಮುದ್ರವನ್ನೇ ನೋಡುತ್ತಿದ್ದ ನನಗೆ ಇತರೆ ಬಣ್ಣಗಳೇ ಮರೆತುಹೋಗಿದ್ದವು!.

ಈ ಯಾನದಿಂದ ಕಲಿತ ಪಾಠವೆಂದರೆ ಪರಿಸ್ಥಿತಿಯ ವಿರುದ್ಧ ತನ್ನೆಲ್ಲಾ ಸಾಮರ್ಥ್ಯವನ್ನು ಹಾಕಿ ನಿರಂತರವಾಗಿ ಹೋರಾಡಬೇಕಿಲ್ಲ. ಬದಲಾಗಿ ಪರಿಸ್ಥಿತಿಗೆ ಅನುಗುಣವಾಗಿ ಹೆಜ್ಜೆ ಇಡುತ್ತಾ ಗುರಿ ಮುಟ್ಟಬೇಕು. ಸಮುದ್ರ ಯಾವತ್ತಿದ್ದರೂ ನಮಗಿಂತ ಹೆಚ್ಚು ಸಾಮರ್ಥ್ಯ ಹೊಂದಿದೆ ಎನ್ನುವುದನ್ನು ಅರಿತು ಅದರೊಂದಿಗೆ ಒಂದಾಗಬೇಕು.

ಮನಸ್ಸು ಯಾವಾಗಲೂ ಕಾಣದ ಕಡಲಿಗೆ ಹಂಬಲಿಸುತ್ತಲೇ ಇರುತ್ತದೆ...


## ಸಮ್ಮರ್ ಕ್ಯಾಂಪು: ಕಲಿಕೆಯ ಇಂಪು

ಕ್ಷೇಮ ಅಧ್ಯಯನ ಕೇಂದ್ರ

ಧಾರವಾಡದ ಹಳ್ಳಿಗೇರಿಯಲ್ಲಿರುವ ಕ್ಷೇಮ ಅಧ್ಯಯನ ಕೇಂದ್ರ

ಹೊಸತನದ ಹುಡುಕಾಟ ಇಂದಿನ ಜೀವನ ಶೈಲಿ. ಹೊಸ ಜ್ಞಾನ, ಹೊಸ ಕ್ಷಿತಿಜ, ಹೊಸ ನೋಟ, ಹೊಸ ಮಾರ್ಗ... ಹೀಗೆ ಎಲ್ಲದರ ಹುಡುಕಾಟ. ಇವತ್ತಿನ ಪಾಲಕರು, ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು, ಶಿಕ್ಷಣ ಪ್ರೇಮಿಗಳು ಅಂಥದ್ದೇ ಹುಡುಕಾಟದಲ್ಲಿ ಇದ್ದಾರೆ. ಇದು ಅಷ್ಟೇ ಅನಿವಾರ್ಯ.

ಮಕ್ಕಳು ವಿದ್ಯಾವಂತರಾಗಬೇಕು, ಹೆಸರು ಮಾಡಬೇಕು, ಉತ್ತಮ ಪ್ರಜೆಗಳಾಗಬೇಕು ಹೀಗೆ ನೂರೆಂಟು ಕನಸುಗಳೊಂದಿಗೆ ಪಾಲಕರ ನೇರ ದೃಷ್ಟಿ ಇರುವುದು ಪರೀಕ್ಷಾ ಫಲಿತಾಂಶದ ಮೇಲೆಯೇ. ಆದರೆ, ವಿದ್ಯಾರ್ಥಿಗಳಿಗೆ ಹಾಗಲ್ಲ. ಸಿಕ್ಕ ಅವಕಾಶಗಳಲ್ಲೇ ಚೂರು ಸಮಯ ಕದ್ದು ಆಟ ಆಡಿ ಮೊಬೈಲ್‌ನಲ್ಲಿ ಗೇಮ್ ಆಡಿ, ಅದರ ಹಿಸ್ಟರಿ ಡಿಲೀಟ್ ಮಾಡುತ್ತಾರೆ. ಏನೂ ಆಗೇ ಇಲ್ಲವೆಂದು ಬೆಪ್ಪನಂತೆ ಪುಸ್ತಕ ಓದುವ ನಟನೆಯಲ್ಲಿ ಪಳಗಿದ ಮನಸ್ಸುಗಳು. ಸಿಕ್ಕಿ ಹಾಕಿಕೊಂಡಾಗ ಹಿ...ಹೀ....ಹಲ್ಲು ಕಿರಿದು ನಕ್ಕು ... ತಂದೆ ತಾಯಿಯರಿಗೆ ಮೋಡಿ ಹಾಕುವ ಅವರ ತುಂಟತನ ಕಷ್ಟವಾದರೂ ಇಷ್ಟವಾಗುವ ಭಂಗಿ. ಪಾಲಕರಿಗೆ ಒಳಗೊಳಗೇ ಸಂಕಟ. ಶಾಲಾ ಫಲಿತಾಂಶ ಬಂದಾಗ ಕೆಲವು ಪಾಲಕರ ಮೊಗದಲ್ಲಿ ನಸುನಗು. ಕೆಲವರಿಗೆ ಬೇಸರ, ಕೋಪ. ಇನ್ನೂ ಕೆಲವರದ್ದು ಉದಾಸೀನ ಪ್ರತಿಕ್ರಿಯೆ. ವಿದ್ಯಾರ್ಥಿಗಳೂ ಹಾಗೆಯೇ.

ಇದಕ್ಕೆ...ಪರಿಹಾರವೇನು? ಮಕ್ಕಳ ಮನಸ್ಸು ಪರಿವರ್ತನೆ ಹೇಗೆ? ಅವರನ್ನು ರಚನಾತ್ಮಕ ಕಾರ್ಯಕ್ಕೆ ತೊಡಗಿಸುವುದು ಹೇಗೆ?

ನಮ್ಮ ಪರಂಪರೆಯಲ್ಲಿ ಇದಕ್ಕೆ ಉತ್ತರವಿದೆ. ಮಕ್ಕಳು ಇಂದು ಸುಖ ವಲಯ (comfort zone) ಹಾಗೂ ಜೋಪಾನ ವಲಯ (safe zone) ನಲ್ಲಿದ್ದಾರೆ. ಇದನ್ನು ಸ್ವಲ್ಪ ಅಲುಗಾಡಿಸಬೇಕು. ಜೀವನದ ಬಹುಮುಖತೆಯನ್ನು ಅವರಿಗೆ ಪರಿಚಯಿಸಬೇಕು. ಸೇವಾಸಕ್ತಿ, ಜ್ಞಾನಾಸಕ್ತಿಗಳನ್ನು ಅವರ ಕಲಿಕೆಯ ಭಾಗವಾಗಿಸುವುದು ಇಂದಿನ ಅಗತ್ಯ.

ಇಂತಹ ಯೋಚನೆಗಳನ್ನು ಇಟ್ಟುಕೊಂಡು ರಜೆಯಲ್ಲಿ ತರಬೇತಿಯನ್ನು ಕ್ಷೇಮ ಅಧ್ಯಯನ ಕೇಂದ್ರ ಆಯೋಜಿಸುತ್ತದೆ. ಶಾಲಾ ವಿದ್ಯೆಯ ತರಬೇತಿಯ ಜೊತೆಗೆ ಪೂರ್ಣ ವ್ಯಕ್ತಿತ್ವ ಬೆಳವಣಿಗೆ ಇಲ್ಲಿ ಆದ್ಯತೆ.

ಇದು ಕಮರ್ಷಿಯಲ್ ಕಾರ್ಪೊರೇಟ್ ಶೈಲಿಯ ಕೋಚಿಂಗ್ ಕೇಂದ್ರವಲ್ಲ. ಆಕರ್ಷಕ ಕಟ್ಟಡ, ಬಣ್ಣದ ಬೆಂಚು, ಹಿರಿಗಾತ್ರದ ಪುಸ್ತಕಗಳ ಹೊರೆ, ಬ್ಯಾಗ್ ಗಳ ಕೊಡುಗೆಯ ಆಮಿಷವಿಲ್ಲ. ತುಂಬಾ ಸರಳ ಸುಂದರ ನಿಸರ್ಗಧಾಮ. ಕೆಲವೇ ವಿದ್ಯಾರ್ಥಿಗಳಿಗೆ ಪ್ರವೇಶ. ಎಲ್ಲ ವಿದ್ಯಾರ್ಥಿಗಳು ನಮ್ಮ ಮಕ್ಕಳೇ ಎನ್ನುವ ಭಾವದಿಂದ ಅಭ್ಯಾಸ ಬೋಧನೆ.

ಇಲ್ಲಿ ಎರಡು ಕೋರ್ಸುಗಳು ಮಾತ್ರ ನಡೆಯುತ್ತವೆ.

SSLC, X-CBSE ತರಬೇತಿ ಮತ್ತು 4 ಮತ್ತು 5ನೆಯ ವರ್ಗದ ವಿದ್ಯಾರ್ಥಿಗಳಿಗೆ ಬೇಸಿಕ್ ತರಬೇತಿ. ಈ ಎರಡೂ ಕೋರ್ಸುಗಳಿಗೆ ತಲಾ 25 ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಅವಕಾಶವಿದೆ.

ಭಾನುವಾರವೂ ಭೇಟಿ ನೀಡಬಹುದು. ನಿಮ್ಮ ಮಕ್ಕಳನ್ನು ಸೇರಿಸಿ. ಅವರ ಯಶಸ್ಸು ನಿಮ್ಮ ಕುಟುಂಬದ ಯಶಸ್ವಿಯಾಗಿ ಬದಲಾಗಲಿ. ನಿಮ್ಮ ಮಕ್ಕಳು ಹೊಸ ಹುಮ್ಮಸ್ಸು ಪಡೆದುಕೊಳ್ಳಲಿ.

ದೂರವಾಣಿ ಸಂಖ್ಯೆ: 99450 72895.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

# ಎರಡು ವಿಲಕ್ಷಣ ನಾಟ್ಯ ಬಿಂಬಗಳು

'ಮತ್ತಾಯ 22-39' ನಾಟಕದ ದೃಶ್ಯ

ಡಿ.ಎಸ್.ಚೌಗಲೆ

ನಟ ಪ್ರಕಾಶ್ ರಾಜ್ ನೇತೃತ್ವದ ನಿರ್ದಿಗಂತದ ಉತ್ತರ ಕರ್ನಾಟಕ ದಿಕ್ಕಿನ ಮೊದಲ ಹೆಜ್ಜೆ ಧಾರವಾಡದಲ್ಲಿ ಗಟ್ಟಿಯಾಗಿ ಮೂಡಿದೆ. ಆ ಹೆಜ್ಜೆಗಳು ಮುಂದಿನ ದಿನಗಳಲ್ಲಿ ಬೀದರ್, ಕಲಬುರಗಿ, ರಾಯಚೂರು, ಬಳ್ಳಾರಿಗಳತ್ತ ಸಾಗಲಿವೆ. ಇದೊಂದು ರಂಗ ಚಳವಳಿಯ ಸಶಕ್ತ ನಡೆಯಾಗಿದೆ. ಅದರ ಕುರುಹುಗಳು ಧಾರವಾಡದ ಉತ್ಸವದಲ್ಲಿ ಢಾಳವಾಗಿ ಕಂಡವು. ಉತ್ಸವದಲ್ಲಿಯ ಹಾಡು, ಚರ್ಚೆ, ನಾಟಕಗಳಲ್ಲಿ 'ತಿಂಡಿಗೆ ಬಂದ ತುಂಡೇರಾಯ' ಮತ್ತು 'ಮತ್ತಾಯ 22- 39'- ಇವೆರಡು ವಿಲಕ್ಷಣ ನಾಟ್ಯ ಬಿಂಬಗಳು ಮತ್ತು ಕನ್ನಡ ರಂಗಭೂಮಿಯ ನವ ದಿಗಂತವನ್ನು ವಿಸ್ತರಿಸಿ ಸಾಗಬಲ್ಲವು ಎಂಬುದನ್ನು ಸಾಬೀತು ಪಡಿಸಿದವು. ಇದೊಂದು ಭರವಸೆಯ ಬೆಳವಣಿಗೆ.

ವಿದೇಶದಲ್ಲಿ ರಂಗಧ್ಯಯನ ಪೂರೈಸಿದ ವಿಜಯಪುರದ ಲೋಣಿ ಬಿಕೆಯ ಹುಡುಗ ಶಕೀಲ್ ಅಹ್ಮದ್ ತಮ್ಮ ಶೋಧದ ಹೊಸ ಪರಿಭಾಷೆಯನ್ನು ಸೃಷ್ಟಿಸಿರುವರು. ತನ್ನ ಎದೆಯೊಳಗೆ ಮಡುಗಟ್ಟಿದ ಹಲವು ಸಾಮಾಜಿಕ, ರಾಜಕೀಯ ಪ್ರಶ್ನೆಗಳಿಗೆ ಬ್ರೆಕ್ಟ್‌ನ ಮೂಲಕ ತುಂಡೇರಾಯನನ್ನು ಕಟ್ಟುವ ಪ್ರೊಸೆಸ್‌ನಲ್ಲಿ ಉತ್ತರ ಕಂಡುಕೊಳ್ಳಲು ಯತ್ನಿಸಿರುವರು.

ಅಡಾಲ್ಫ್ ಹಿಟ್ಲರ್ ಮತ್ತು ನಾಝಿ ನೆಲೆಯಲ್ಲಿ ನೈಜತೆಯ ಆಧರಿಸಿದ ಬರ್ಟೋಲ್ಟ್ ಬ್ರೆಕ್ಟ್ ನ 'ದಿ ರೆಸಿಸ್ಟಿಬಲ್ ರೈಜ್ ಆಫ್ ಆರ್ಥರೊ ಉಯಿ' ನಾಟಕದ ದೇಸಿ ರೂಪಾಂತರವೇ 'ತಿಂಡಿಗೆ ಬಂದ ತುಂಡೇರಾಯ.' ಕೊಲೆ, ಸುಲಿಗೆ, ದರೋಡೆ ಕಸುಬಿನ ತುಂಡೇರಾಯ ಸಮಾಜವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ನಡೆಸುವ ಕ್ರಿಯೆಗಳು ಹತ್ತಾರು. ಆರ್ಥಿಕ ಸಂಕಷ್ಟ, ಭಯರಹಿತ ವಾತಾವರಣದಿಂದಾಗಿ ಆತನ ಹೆಸರು ಮರೆಯಾಗತೊಡಗುತ್ತದೆ. ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣಗೊಳಿಸುವ, ಲಂಚ, ಭ್ರಷ್ಟರೂಪಿ ರಾಜಕಾರಣಿಯ ವಿಚಾರಗಳು ಕಿವಿಗೆ ಬೀಳುತ್ತಿದ್ದಂತೆ ತುಂಡೇರಾಯನ ಕನಸುಗಳು ಚಿಗುರುವವು. ತನ್ನ ಗುಂಪು ಕಟ್ಟಿಕೊಳ್ಳುವನು. ಕುಟಿಲ ತಂತ್ರಗಳನ್ನು ಹೂಡುವನು. ಬಲ ಪ್ರಯೋಗದಿಂದ ದೊಂಬಿ, ಗಲಭೆ ಹುಟ್ಟು ಹಾಕುವನು. ಮೋಡಿ ಮಾಡುವ ಮಾತುಗಳು, ಹಿಂಸಾತ್ಮಕ ನೀತಿಯಿಂದಾಗಿ ಸರ್ವಾಧಿಕಾರಿಯಾಗುವನು. ಅಧಿಕಾರ ದಾಹ, ದುರಾಸೆ, ಹಪಾಹಪಿತನ ಮತ್ತು ಕ್ರೌರ್ಯ ಹೆಚ್ಚುವವು. ಜನರನ್ನು ಮರಳು ಮಾಡಿ ಕೊಲ್ಲುತ್ತ, ರಾಜ್ಯಗಳನ್ನು ಕಬಳಿಸುತ್ತ ಸಾಗುವನು.

ಈ ಎಳೆಯ ನಾಟಕವನ್ನು ವಿನ್ಯಾಸಗೊಳಿಸಿ ನಿರ್ದೇಶನ ಮಾಡಿದ್ದು ಶಕೀಲ್ ಅಹ್ಮದ್. ಮೂಲ ಪಠ್ಯವನ್ನು ಕಲಾವಿದರು ಸೇರಿ ಮೂರು ತಿಂಗಳ ತಾಲೀಮಿನ ಪ್ರೊಸೆಸ್‌ನಲ್ಲಿಯೇ ಸಿದ್ಧಪಡಿಸಿರುವರು. ಉತ್ತರ ಕರ್ನಾಟಕದ ಆಡುನುಡಿಗಳಲ್ಲಿ ಹೊಮ್ಮುವ ಸಂವಾದವು ನಾಟಕದ ಶಕ್ತಿ. ಅಸಹಾಯ ತಳಮಳದ ನ್ಯಾಯಾಧೀಶ ಮತ್ತು ವ್ಯಾಪಾರಿ ಕರ್ಮಠತನದ ನುಡಿಗಟ್ಟು ನುಡಿಸುವ ಹನುಮಂತ, ಶಾಂತ ಕೊಲ್ಲುವ ತೀಕ್ಷ್ಣ ಕಣ್ಣಿನ ಸೋಮನ ಪಾತ್ರಧಾರಿ ಗಣಪತಿ ಮತ್ತು ಧರ್ಮರಾಜನಾಗಿ ರಂಗಮಂಚದಲ್ಲಿ ಸಂಚಲನ ಮೂಡಿಸುವ ಸಿದ್ದಪ್ಪ ಬಿಜಾಪುರ್ ನಾಟಕದ ಮುಖ್ಯ ಕೇಂದ್ರಗಳು. ಆಸ್ಕರ್ ಪ್ರಶಸ್ತಿ ಪಡೆದ 'ಜೋಕರ್' ಅಭಿನಯ ಜ್ಞಾಪಿಸುವ ಸಿದ್ದಪ್ಪನ ಚಲನೆಯನ್ನು ಶಕೀಲ್ ವಿಲಕ್ಷಣ ನವ್ಯ ಶೈಲಿಯಲ್ಲಿ ಸೃಜಿಸಿದ್ದಾರೆ. ಈ ಶೈಲಿಯನ್ನು 'ಶಕೀಲ್ ಘರಾನಾ' ಎನ್ನಬಹುದು.

***

'ತಿಂಡಿಗೆ ಬಂದ ತುಂಡೇರಾಯ'ನಾಟಕದ ದೃಶ್ಯ

ನಮ್ಮನ್ನು ಎಚ್ಚರಗೊಳಿಸುವ ಮಂಗಳೂರಿನ ಅಸ್ತಿತ್ವ ಅಭಿನಯದ 'ಮತ್ತಾಯ 22-39'ನಾಟಕವು ತಣ್ಣಗೆ ಪ್ರೇಕ್ಷಕನ ಪ್ರಜ್ಞೆಯ ಕಣಕಣದಲ್ಲಿ ಇಂಗಿತು. ಪ್ರಕೃತಿಯನ್ನು ನೈಜರೂಪದಲ್ಲಿ ಇಟ್ಟುಕೊಳ್ಳದಿದ್ದರೆ ಭವಿಷ್ಯದಲ್ಲಿ ಭೀಕರ ಬರಗಾಲದಿಂದ ಹನಿ ನೀರಿಗೂ ಹಾಹಾಕಾರ ಕಟ್ಟಿಟ್ಟ ಬುತ್ತಿ ಎಂಬುದನ್ನು ಎರಡೇ ಪಾತ್ರಗಳಲ್ಲಿ ಕೇರಳದ ಅರುಣ ಲಾಲ್ ಕಲಾತ್ಮಕ ರೂಪಕವಾಗಿ ಕಟ್ಟಿಕೊಟ್ಟರು.

ರಂಗದ ಬಲಕ್ಕೊಂದು ಒಣಗಿದ ಟಿಸಿಲು ಕೊಂಬೆ ಮರ. ಒಣ ಇಟ್ಟಿಗೆಗಳನ್ನೇ ಬಾವಿ, ಕಾಳಿನ ದಾಸ್ತಾನು, ಕೋಳಿಗಳನ್ನಾಗಿ ಬಳಸಿ ಇಡೀ ಸಾದರೀಕರಣವನ್ನು ಪರಿಣಾಮಕಾರಿಯಾಗಿ ನೋಡುಗನ ಎದೆಗೆ ಇಳಿಸುವಲ್ಲಿ ಅರುಣ ಲಾಲ್‌ರ ಪ್ರಯೋಗಶೀಲತೆ ಯಶಸ್ಸು ಕಂಡಿದೆ. ಟಿ.ವಿ. ಕುಚುಭಾವರ ಕತೆಯನ್ನು ಸುಧಾಕುಮಾರಿ ಕನ್ನಡಕ್ಕೆ ತಂದಿರುವರು. ಇದನ್ನು ತನ್ನದೇ ಶೈಲಿಯಲ್ಲಿ ಪರಿಕಲ್ಪನೆಯ ರೂಪಕೊಟ್ಟು ವಿನ್ಯಾಸಗೊಳಿಸಿ ಇಂಪ್ರೊವೈಜಡ್ ಪ್ರೊಸೆಸ್‌ನಲ್ಲಿ ನಾಟಕದ ಸಂವಾದಗಳನ್ನು ರಚಿಸಿರುವರು. ಕುಮಾರ ಲಾಲ್ ಯೋಹಾನ್ನನ ಉತ್ತರ ಕರ್ನಾಟಕದ ದೇಸಿ ನುಡಿ ಮತ್ತು ಕ್ಲಾನ್ವಿನ್ ಫರ್ನಾಂಡಿಸ್ ಮತ್ತಾಯನ ದಕ್ಷಿಣ ಕನ್ನಡ ಮಾತುಗಳು ಆ ಸ್ವಭಾವಗಳ ನೆಲೆಯಲ್ಲೇ ಅಭಿನಯದಲ್ಲಿ ಸ್ಫುಟಗೊಳ್ಳುವವು.

ಭೀಕರ ಬರ. ಮಣ್ಣು ಸುಟ್ಟು ಕಲ್ಲಾಗಿದೆ. ಜೀವ ಜಗತ್ತು ನಾಶವಾಗಿದೆ. ಇಬ್ಬರೇ ಬದುಕಿರುವರು. ಮತ್ತಾಯನ ಹತ್ತಿರ ಬಾವಿಯ ನೀರು, ಕೋಳಿಗಳು ಮತ್ತು ಅಕ್ಕಿಯಿದೆ. ಆಶ್ರಯವಿಲ್ಲದ ನೆರೆಯ ಯೋಹಾನ್ನ ಮತ್ತಾಯನ ಹತ್ತಿರ ಉಣ್ಣಲು ಬರುವುದು, ಮಾತುಗಳಲ್ಲಿ ಬದುಕು ಸಾಗುವುದು. ಹಾಡುತ್ತ, ಹರಟುತ್ತ ಸಂತಸದಿ ಹಂಚಿ ಉಣ್ಣುತ್ತ ಇರುವಾಗಲೇ ಆಹಾರ ಮತ್ತು ನೀರು ಖಾಲಿಯಾಗುವ ಭಯದಿಂದ ಮತ್ತಾಯ ಯೋಹಾನ್ನನಿಗೆ ಊಟಕ್ಕೆ ಬರಬೇಡ ಎಂದು ಹೇಳುತ್ತಾನೆ. ಆಹಾರ ಅರಸುತ್ತ ಹೋದ ಯೋಹಾನ್ನನ ಅಂತ್ಯವಾಗುತ್ತದೆ. ಮತ್ತಾಯ ಒಂಟಿಯಾಗುವನು. ಗೆಳೆಯನ ಅಗಲಿಕೆ ಪಶ್ಚಾತ್ತಾಪಕ್ಕೆ ಹೊರಳುತ್ತದೆ. ನಮ್ಮ ನೆರೆಹೊರೆಯವರ ಸಂಗಡ ಕೂಡು ಬದುಕಿನ ಅಗತ್ಯವನ್ನು, ಪ್ರೀತಿಸಬೇಕೆಂಬ ಅರಿವನ್ನು ನಾಟಕ ಒಡಮೂಡಿಸುತ್ತಿರುವಾಗಲೇ ಕಾಲ ಮೀರಿರುತ್ತದೆ. ವಿಷಾದದ ಬಿಸಿಯುಸಿರಲ್ಲಿ ನಾಟಕ ಕೊನೆಗೊಳ್ಳುತ್ತದೆ. ಇವು ಧಾರವಾಡ ಸೃಜನಾದಲ್ಲಿ ಪ್ರಯೋಗಗೊಂಡವು. ❖

## ಮೊದಲ ಓದು

# ಹೆಣ್ಣುಮಕ್ಕಳ ಮನೋಲೋಕ ದರ್ಶನ



**ನನ್ನಕ್ಕ ನಿಲೂಫರ್**
ಲೇ: ಮಿತ್ರಾ ವೆಂಕಟ್ರಾಜ
ಪ್ರ: ಅಂಕಿತ
ಸಂ: 080 2661 7100
ಪು: 159
₹195

**ಈ ಕಥಾಸಂಕಲನದಲ್ಲಿರುವ** ಕಥೆಗಳಲ್ಲಿ ಬರುವ ಪಾತ್ರಗಳೆಲ್ಲವೂ ದೇಶ, ಭಾಷೆ ಹಾಗೂ ವಯಸ್ಸಿನ ಗಡಿಯನ್ನು ಮೀರಿ ಓದುಗನೊಳಗೆ ಇಳಿಯುತ್ತವೆ. ಬೇಜವಾಬ್ದಾರಿ ಗಂಡನನ್ನು ಕಟ್ಟಿಕೊಂಡು ಊರಿಂದ ಊರು ಬಿಟ್ಟು ಮುಂಬೈ ಮಹಾನಗರದಂಥ ಊರಿನಲ್ಲಿ ಬದುಕು ಕಟ್ಟಿಕೊಂಡ ಗಟ್ಟಿಗಿತ್ತಿ ಲಲಿತಾಂಬೆ ಒಂದೆಡೆಯಾದರೆ, ಮದುವೆಯೆಂಬುದಕ್ಕೆ ಮನಸ್ಸು ಒಪ್ಪಬೇಕು ಎನ್ನುತ್ತಲೇ 33 ಆದರೂ ಮದುವೆಯಾಗದ ಆಧುನಿಕ ಹೆಣ್ಣುಮಕ್ಕಳ ಕಥನವಿದೆ. ಮದುವೆಯೆಂಬುದು ಮನಸ್ಸಿಗೆ ಹಿಡಿಸಬೇಕಾದ ಅಪ್ಪಟ ಸಂಗತಿ ಎಂಬುದನ್ನು ಬಲವಾಗಿ ನಂಬಿರುವ ಹೆಣ್ಣುಮಕ್ಕಳ ಭಿತ್ತಿಯನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಭೂತ ಹಾಗೂ ವರ್ತಮಾನಗಳ ತಿಕ್ಕಾಟವನ್ನು ಕಟ್ಟಿಕೊಡುತ್ತಲೇ ಕತೆಗಾರ್ತಿ ಮಿತ್ರಾ ಹೆಣ್ಣುಮಕ್ಕಳ ಮನೋಲೋಕವನ್ನು ಸೂಕ್ಷ್ಮವಾಗಿ ತೆರೆದಿಟ್ಟಿದ್ದಾರೆ.

ಮುಂಬೈ, ಪ್ಯಾರಿಸ್ ಚಿತ್ರಣಗಳಿದ್ದರೂ, ಅಲ್ಲಲ್ಲಿ ಬರುವ ಕುಂದಗನ್ನಡದ ಸೊಗಡು ಪಾತ್ರವನ್ನು ಮತ್ತಷ್ಟೂ ಆಪ್ತವಾಗಿಸುತ್ತದೆ. ಊರಿಂದ ಊರು ಬಿಟ್ಟು ಬೇರೆ ನಗರದಲ್ಲಿ ಬದುಕು ಕಟ್ಟಿಕೊಂಡಿದ್ದರೂ ಅಗತ್ಯಕ್ಕೆ ತಕ್ಕಂತೆ ಪಾತ್ರ ಆಡುವ ಮಾತುಗಳೆಲ್ಲವೂ ಕುಂದಗನ್ನಡದಲ್ಲಿವೆ. ಅದು ಬಹಳ ಸಹಜವೆಂಬಂತೆ. ಗಂಡನ ನೆರಳಿನಂತೆ ಬದುಕಿದರೂ ಇಲ್ಲಿ ಬರುವ ಹಲವು ಹೆಣ್ಣುಪಾತ್ರಗಳಿಗೆ ತನ್ನದೇ ಆದ ಗಟ್ಟಿತನವಿದೆ. ನೆರಳಿನಂತೆ ಕಂಡರೂ ಅದು ನೆರಳಲ್ಲ ಅನಿಸುವುದು ಕೂಡ ಕತೆಗಾರ್ತಿಯ ಸೂಕ್ಷ್ಮ ಬರಹಕ್ಕಿರುವ ತಾಕತ್ತು. ಪ್ರತಿ ಕಥೆಯೂ ವಿಭಿನ್ನ ಹಾಗೂ ವಿಶಿಷ್ಟ ಎಳೆಯಿಂದ ನೇಯ್ದಿರುವುದರಿಂದ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ.

ಉತ್ಕಟ ಪ್ರೀತಿಯ ಕನಸು ಇಟ್ಟುಕೊಂಡ ಅರ್ಧ ವಿನೋದ, ಅರ್ಧ ವಿಷಾದದಲ್ಲಿರುವ ಪ್ರಮೋದಿನಿ, ಬಾಹ್ಯ ಜಗತ್ತಿನಿಂದ ಸಂಪೂರ್ಣ ವಿಮುಖಳಾಗಿ ಆಂತರ್ಯದಲ್ಲಿ ಗೊಂಬೆಗಳೊಂದಿಗೆ ಹೊಸ ಪ್ರಪಂಚ ಕಟ್ಟಕೊಂಡ ಪೆರಿನಾಝ್ ವಾಡಿಯಾ ಹೀಗೆ ಬೇರೆ ಬೇರೆ ಭಿತ್ತಿಯಲ್ಲಿ ಅಭಿವ್ಯಕ್ತಿಗೊಂಡ ಹಲವು ಪಾತ್ರಗಳು ಮನಸ್ಸನ್ನು ಕಲಕುತ್ತವೆ.

## ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

### ಕಲ್ತನ

ಕಲ್ತನ (ನಾ). ಕಲ್ಲಾಗಿರುವಿಕೆ; ಕಠಿಣತೆ
(ಕಲ್ + ತನ)

ಭರತನು ತಂದೆಯ ಮರಣಕ್ಕೆ, ಹಾಗು ಅಣ್ಣ ರಾಮಚಂದ್ರನು ಕಾಡಿಗೆ ಹೋಗಲು ಕಾರಣವಾದ ತನ್ನ ತಾಯಿ ಕೈಕೆಯನ್ನು 'ನೀನು ಹೆತ್ತ ದಿನವೆ ಕೊರಳು ಮುರಿಯದೆ ಈ ಹೊತ್ತು ಬರುವವರೆಗೂ ಏಕೆ ಕಾಯ್ದೆ?, ನಾನು ಅಣ್ಣನ ಬಳಿಗೆ ಹೋಗಿ ಅವನ ಸೇವೆಯಲ್ಲಿದ್ದು ನೀನು ಮಾಡಿದ ಕೆಟ್ಟ ಕೆಲಸವನ್ನು ಆರಿಸುತ್ತೇನೆ' ಎಂದು ನುಡಿದು ಹೊರಡುತ್ತಾನೆ. ಆಗ ಕೈಕೆ ಅವನ ಕಾಲು ಹಿಡಿದು ತನ್ನನ್ನೂ ರಾಮನಲ್ಲಿಗೆ ಕರೆದುಕೊಂಡು ಹೋಗು ಎಂದು ಹೇಳುವಾಗ ಈ ಮಾತುಗಳನ್ನು ಉಸಿರುವಳು:

**'ಕೇಳ್, ಕೈಕೆಗಿನ್**
**ಬಾಯಿಲ್ಲೊ! ಕಲ್ಲಾದಹಲ್ಯೆಯಂ ನುಡಿಸಿದಾ**
**ರಾಮನಡಿ ಸೋಂಕಿಗುಂ ಕಿಡಿದೆನ್ನ ಕಲ್‌ತನಂ!**
**ಕೈಪಿಡದೆ ಕಾಪಿಡೆನ್ನ!'**

ಕುವೆಂಪು ಅವಳ ಆತ್ಮಶೋಧದ ನುಡಿಯಲ್ಲಿ 'ಕಲ್‌ತನ' ಎಂಬ ಪದ ಬಳಸಿದ್ದಾರೆ. ಕೈಕೆಯು ರಾಮನ ಅಡಿಯ ಸೋಂಕಿನಿಂದ ಅಹಲ್ಯೆಗೆ ಮೋಕ್ಷ ದೊರಕಿತು. ಆದರೆ ಅವನ ಪಾದದ ಸೋಂಕಿಗೆ ನನ್ನ ಕಲ್‌ತನ ಕಿಡಿಯದು ಅಂದರೆ ನಾಶವಾಗುವುದಿಲ್ಲ ಎಂದು ದುಃಖಿಸುತ್ತಾಳೆ.

### ಕಲ್ದವಸಿ

ಕಲ್ದವಸಿ (ನಾ). ಶಿಲಾತಪಸ್ವಿ

ಚಿತ್ರಕೂಟದ ರಾಮಸೀತೆಯರಿಗೆ ಅಲ್ಲಿರುವ ಗಿರಿವನದ ಪರಕೀಯವಾಗಿ ಅಪರಿಚಿತವಾಗಿದ್ದ ವಸ್ತುಗಳೆಲ್ಲ ಸಲಿಗೆಯಿಂದ ಆತ್ಮೀಯ ಭಾವಜೀವಿಗಳಾಗಿದ್ದವು. ಅಲ್ಲಿ ಕಲ್ಲಾಗಿದ್ದವುಗಳು ನೆನಪಿನ ಸಂಕೇತಗಳಾದವು. ಮರವು ಬಾಳಿಗೊಂದು ಸಂಕೇತವಾಯಿತು. ಅಲ್ಲಿರುವ ಅಪ್ರಮುಖ ವಸ್ತುಗಳೆಲ್ಲ ಅವರ ಘನಮಹಿಮೆಯಿಂದ ತಮ್ಮ ಅಲ್ಪತೆಯನ್ನು ಕಳೆದುಕೊಂಡವು. ಭಾವದ ಆವರಣವನ್ನು ಪಡೆದು, ಅವುಗಳ ಜಡವೇಶ ಇಲ್ಲವಾಗಿ ಪ್ರಾಣಮಯವಾದವು.

ಆ ಪರ್ಣಶಾಲೆಯ ಮುಂದೆ ಸೀತೆಯು ರಾಮನೊಡನೆ ಮಾತಾಡುತ್ತ ಕುಳಿತಿರಲು ಅವಳಿಗೆ ಯುಗಯುಗಗಳಿಂದ ಅಲ್ಲಿದ್ದ ಒಂದು ಕಲ್ಲಿಗೆ ಆಕೃತಿ ಬಂದಂತಾಯಿತು. ಬೆರಗಾಗಿ ಅದನ್ನು ಪತಿಗೆ ತೋರಿಸಿದಳು. ಅದನ್ನು ಕಂಡು ರಾಮನು ಕುತೂಹಲಕ್ಕೊಳಗಾದನು.

**ಕೌತುಕಂಬಟ್ಟನಿರ್ವರುಮದಕೆ ಪೆಸರಿಟ್ಟು**
**ಕರೆಯತೊಡಗಿದರಂದಿನಿಂ 'ಕಲ್ದವಸಿ'**
**ಎಂದು.**

# ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



## ಡಣ್ಣ ಚಕ್ಕು ಕ್ಷೀಶ್ರಪ್ಪ ಕಥೆಯ — ಹೂವಲ್ಲ ಬೆಡ್‌ಶೀಟ್

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು







ಅಂದು ಭಾನುವಾರ. ಗುಂಡನಿಗೆ ರಜೆ ಇತ್ತು. ಮಧ್ಯಾಹ್ನ ಊಟದ ಬಳಿಕ ನಿದ್ದೆಗೆ ಜಾರಿದ. ಅವನ ಬೆಡ್‌ಶೀಟ್ ಮೇಲೆ ಹೂವಿನ ಚಿತ್ರಗಳಿದ್ದವು. ಇದನ್ನು ಕಂಡ ಚಿಟ್ಟೆಯೊಂದು ಮಕರಂದ ಹೀರಲೆಂದು ಹಾರಿಬಂದು ಅದರ ಮೇಲೆ ಕುಳಿತಿತು. ಕೊಂಚ ಹೊತ್ತಿನಲ್ಲಿ ಹತ್ತಾರು ಚಿಟ್ಟೆಗಳು ಮುತ್ತಿದವು. ಗಾಢ ನಿದ್ದೆಯಲ್ಲಿದ್ದ ಅವನು ಎಚ್ಚರಗೊಂಡಾಗ ಚಿಟ್ಟೆಗಳನ್ನು ಕಂಡು ಅವಾಕ್ಕಾದ.



## ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

| | | | | | | | |
|---|---|---|---|---|---|---|---|
| 1 | ಕಾಲ | + | ಕರು | + | ಚಾ | = | |
| 2 | ನೆಣ | + | ಗಣ | + | ಕ್ಷ | = | |
| 3 | ನದಿ | + | ಮತಿ | + | ಅಂ | = | |
| 4 | ಹರಿ | + | ಮದ | + | ಸಿಂ | = | |
| 5 | ಕೋಟಿ | + | ರವಿ | + | ಸಾ | = | |

## ಪದ ಪರಿಚಯ ಪರೀಕ್ಷೆ

ಇಲ್ಲಿ ಕೊಟ್ಟಿರುವ ಪದಗುಚ್ಛದಿಂದ ಮುಂದೆ ಕೊಟ್ಟ ವಿವರಣೆಗೆ ತಕ್ಕಂತೆ ಅಕ್ಷರಗಳನ್ನು ಆಯ್ದುಕೊಂಡು ಅರ್ಥಬದ್ಧ ಪರ್ಯಾಯ ಪದ ರಚಿಸಿ. ಅಕ್ಷರಗಳು ಮರು ಕಳಿಸಬಹುದು. ಪದಗುಚ್ಛ: ಕನ್ನಡಿಗರ ಕಲರವ

| | | |
|---|---|---|
| 1 | | ಕಳ್ಳತನ |
| 2 | | ಹದ್ದು |
| 3 | | ದೆವ್ವ |
| 4 | | ಬೆಂಗಳೂರಿನ ಒಂದು ಉತ್ಸವ |
| 5 | | ದರ್ಪಣ |
| 6 | | ವ್ಯಾಯಾಮ |
| 7 | | ಒಬ್ಬ ಕವಿಯ ಹೆಸರು |
| 8 | | ಹಸ್ತ |
| 9 | | ಕುಶನ ಸಹೋದರ |
| 10 | | ಒಂದು ಪ್ರಾಣಿಯ ಹೆಸರು |
| 11 | | ಮದುವೆ ಗಂಡು |
| 12 | | ಕಚ್ಚು |

## ಮೋG ನ (ENGLISH)

ಇಲ್ಲಿ ಕೊಟ್ಟಿರುವ ಇಂಗ್ಲಿಷ್ ಅಕ್ಷರಗಳನ್ನು ಹಾಗೂ ಒಂದು ಕನ್ನಡ ಅಕ್ಷರವನ್ನು ಉಚ್ಚಾರದಲ್ಲಿ ಇದ್ದಂತೆ ಓದಿ ನೋಡಿ. ಎಲ್ಲವೂ ಸೇರಿ ಇಂಗ್ಲಿಷ್ ಉಚ್ಚಾರದ ಪದಗಳಂತೆ ಕಂಡುಬರುತ್ತದೆ.

ಓದಾಟ

ಉದಾ: OPನಿN = Opinion

| | |
|---|---|
| 1 | OನಿN |
| 2 | GನಿS |
| 3 | ಚಾಂPN |
| 4 | IಡೆಂTT |
| 5 | ABಲಿT |
| 6 | ಗDBD |
| 7 | CDಮಿD |
| 8 | CನಿS |

## ಮ್ಯಾಚಿಕ್

ಇಲ್ಲಿ ಒಂದು ಕಡ್ಡಿ ಸ್ಥಳಾಂತರಗೊಳಿಸಿ ಸಮೀಕರಣ ಸರಿ ಮಾಡಿ.



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಗಣಿತದಲ್ಲಿ ಗರ್ದಿಗಮ್ಮತ್ತು

ಇದೂ ಒಂದು ಮಜಾ!

$$2^5 X\ 9^2 = 2592$$

ಗುಣಿಸಿ ಖಾತ್ರಿ ಮಾಡಿಕೊಳ್ಳಿ

## ಕಳೆದ ಸಂಚಿಕೆಯ ಸರಿ ಉತ್ತರಗಳು

**ಪದಸಂಕಲನ:** 1.ಸಹಕರಿಸು 2.ವೇಗದ ರಾಣಿ 3.ನಮ್ಮ ಜಮೀನು 4.ಹಯವದನ 5.ನಂದಿವಾಹನ

**ಜಾಣಪದ ಆಟ:** 1.ರಾಗಿ 2.ಹತ್ತಿ 3.ಹೆಸರು 4.ಕಡಲೆ 5.ಉದ್ದು 6.ಗೋಧಿ 7.ಸಜ್ಜೆ 8.ಹುರುಳಿ 9.ಅವರೆ 10.ಎಳ್ಳು

**ಸಿನಿ ಸ್ವಾರಸ್ಯ:** ಕವಿ-ರತ್ನ-ಕಾಳಿ-ದಾಸ

**ಹೊಂದಿಸು ಆನಂದಿಸು:**



## ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು

ಇಮೇಲ್ ವಿಳಾಸ: majakoora@prajavani.co.in

## ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ನಯನಾ ಗೋವನಕೊಪ್ಪ
ಜೋಯಿಡಾ

ಶ್ರೀಜನ್ ತೆನ್ನಿಹಳ್ಳಿ
ವಿಜಯಪುರ

ಸಮೃದ್ಧಿ ಮರಿಗೌಡರ
ನರಗುಂದ

ಪ್ರಾರ್ಥನಾ ಆರ್.ಟಿ.
ಕೊಂಡ್ಲಹಳ್ಳಿ

ಸಂಸ್ಕೃತಿ ಎಂ.ಎಸ್.
ಮೈಸೂರು

ಎಸ್. ಕೌಶಲ್ಯ
ಗುಳೇದಗುಡ್ಡ

# ಅನುಪಮ ಸೌಂದರ್ಯದ ಹರ್ಸಿಲ್ ಕಣಿವೆ

ಪ್ರಹ್ಲಾದ ಪರ್ವತಿ

ಹಿಮಾಲಯದ ಎತ್ತರದ ಶಿಖರಗಳ ನಡುವೆ ಇರುವ 'ಹರ್ಸಿಲ್ ಕಣಿವೆ' ಉತ್ತರಾಖಂಡ ರಾಜ್ಯದ ಪ್ರಶಾಂತ ಹಾಗೂ ಅನುಪಮ ಸೌಂದರ್ಯದ ತಾಣ. ಇದು 'ಗುಪ್ತರತ್ನ' ಎಂದೇ ಹೆಸರುವಾಸಿಯಾಗಿದೆ. ಈ ಪ್ರವಾಸಿ ತಾಣವು ತನ್ನ ನೈಸರ್ಗಿಕ ಚೆಲುವು, ಹಚ್ಚಹಸಿರಿನ ದೃಶ್ಯ, ದಟ್ಟವಾದ ಪೈನ್ ಕಾಡು ಹಾಗೂ ಪರಿಶುದ್ಧ ನೀರಿನ ಹರಿವಿನಿಂದ ಆಕರ್ಷಿಸುತ್ತದೆ. ಹಿಮಾಚ್ಛಾದಿತ ಬೆಟ್ಟಗಳಿಂದ ಈ ಕಣಿವೆಗೆ ಹರಿದು ಬರುವ ಭಾಗೀರಥಿ ನದಿ ತನ್ನ ಸ್ಫಟಿಕ ಸ್ಪಷ್ಟ ನೀರಿನೊಂದಿಗೆ ಈ ಕಣಿವೆಯಲ್ಲಿ ಪ್ರಕೃತಿಯೊಡನೆ ಬೆಸೆದುಕೊಂಡ ರೀತಿ ಅನನ್ಯವಾದುದು.

ಉತ್ತರಕಾಶಿಯಿಂದ ಗಂಗೋತ್ರಿಗೆ ತೆರಳಿ ಗಂಗಾ ನದಿಯ ಉಗಮ ಸ್ಥಾನಕ್ಕೆ ಭೇಟಿ ನೀಡಿದೆವು. ಅಲ್ಲಿಂದ ಮರಳುವಾಗ ನಮ್ಮ ಟ್ಯಾಕ್ಸಿ ಡ್ರೈವರ್ ಮನಮೋಹಕ 'ಹರ್ಸಿಲ್ ಕಣಿವೆ'ಯನ್ನು ಭಾರತದ ಸ್ವಿಡ್ಜರ್ಲೆಂಡ್ ಎಂದು ಬಣ್ಣಿಸಿದರು. ಆಗ ನಾವು ಮುಂದಿನ ಪ್ರವಾಸವನ್ನು ಮೊಟಕುಗೊಳಿಸಿ ಕಣಿವೆಯತ್ತ ಪಯಣಿಸಿದೆವು. ಬೆಟ್ಟಗಳ ಅಂಚಿನ ಕಡಿದಾದ ಮಾರ್ಗದಲ್ಲಿ ಜಲಪಾತಗಳು, ತೊರೆಗಳು, ಹಿಮಾವೃತ್ತ ಶಿಖರಗಳ ವಿಹಂಗಮ ನೋಟ ರೋಮಾಂಚನವನ್ನುಂಟು ಮಾಡಿತು. ಆಳೆತ್ತರವಾಗಿ ಬೆಳೆದು ಮೈತುಂಬಿಕೊಂಡ ಸೇಬಿನತೋಟಗಳ ರಮಣೀಯ ದೃಶ್ಯ ಕಣ್ತುಂಬಿಕೊಳ್ಳುತ್ತಿದ್ದಂತೆಯೇ ಸುತ್ತುವ ರಸ್ತೆಯೊಂದಿಗೆ ಹಸಿರುಹಾಸಿನ ಕಣಿವೆಯಲ್ಲಿ ಇಳಿದಾಗ ಕಂಟೋನ್ಮೆಂಟ್ ಪ್ರದೇಶ ಕಾಣುತ್ತದೆ. ಪ್ರವೇಶದ್ವಾರದಲ್ಲಿದ್ದ ದಟ್ಟವಾದ ದೇವದಾರು ಮರಗಳ ಮಧ್ಯದಲ್ಲಿ ಕೆಂಪು ಚಾವಣಿಯ ಕಣಿವೆಯ ಮರದ ಮನೆಗಳಿಗೆ ಹೊಂದಿಕೊಂಡು ಬೆಟ್ಟಗಳ ಬಂಧನದಿಂದ ಭಾಗೀರಥಿ ಶ್ವೇತಧಾರಿಯಾಗಿ ನಾಟ್ಯವಾಡುತ್ತ ಹರಿದು ಬಂದಂತೆ ಭಾಸವಾಗುತ್ತದೆ. ನದಿಯ ಸೇತುವೆ ದಾಟುತ್ತಿರುವಂತೆ 'ಹರ್ಸಿಲ್ ಕಣಿವೆ' ಪ್ರದೇಶದ ಪ್ರಶಾಂತ ಸ್ಥಳಕ್ಕೆ ಕಾಲಿಟ್ಟ ಅನುಭವವಾಗುತ್ತದೆ.

ಹರ್ಸಿಲ್ ಕಣಿವೆಯ ವಿಹಂಗಮ ನೋಟ

'ಹರ್ಸಿಲ್ ಕಣಿವೆ'ಯು ಈ ರಾಜ್ಯದ ಉತ್ತರಕಾಶಿ ಜಿಲ್ಲೆಯ ಉತ್ತರಕಾಶಿ ಪಟ್ಟಣ ಮತ್ತು ಚಾರ್‌ಧಾಮಗಳಲ್ಲಿ ಒಂದಾದ ಯಾತ್ರಾ ಕ್ಷೇತ್ರ ಗಂಗೋತ್ರಿಯಿಂದ 73 ಕಿಲೋಮೀಟರ್ ದೂರದಲ್ಲಿದ್ದು, ಸಮುದ್ರಮಟ್ಟದಿಂದ 9,000 ಅಡಿ ಎತ್ತರದಲ್ಲಿದೆ. ಉತ್ತರಾಖಂಡದ ರಾಜಧಾನಿ ಡೆಹ್ರಾಡೂನ್‌ನಿಂದ 280 ಕಿಲೋಮೀಟರ್ ದೂರದಲ್ಲಿದೆ.

## ರಮ್ಯ ಗಿರಿಧಾಮ

ಕಣಿವೆಯು ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ನೆಲೆಯಾಗಿದೆ. ಸ್ಥಳೀಯರು ಮುಖ್ಯವಾಗಿ ಭೋಟಿಯಾ ಸಮುದಾಯದವರಾಗಿದ್ದಾರೆ. ವಿಶಿಷ್ಟ ಪದ್ಧತಿಗಳು, ಭಾಷೆ, ಸಾಂಪ್ರದಾಯಿಕ ಉಡುಗೆಗಳಿಂದ ಹೆಸರುವಾಸಿಯಾಗಿರುವ ಇವರ ಸಂಸ್ಕೃತಿಯು ಹರ್ಸಿಲ್ ಗಡಿ ಹಂಚಿಕೊಂಡಿರುವ ಟಿಬೆಟ್‌ನಂತಿದೆ.

ಈ ಕಣಿವೆ ಮರೆಯಲಾಗದ ಅನುಭವ ನೀಡುವ ನೆಮ್ಮದಿಯ ತಾಣವೆಂಬುದು ಅಲ್ಲಿಗೆ ಭೇಟಿ ನೀಡಿದಾಗ ಗೊತ್ತಾಗುತ್ತದೆ. ಉತ್ತರಾಖಂಡದ ಮೋಡಿ ಮಾಡುವ ಸೌಂದರ್ಯಕ್ಕೆ ಸಾಕ್ಷಿಯಾಗಿರುವ ಭಾಗೀರಥಿ ನದಿ ದಂಡೆಯ ಪುಟ್ಟ ಊರಲ್ಲಿರುವ ಹೋಂ ಸ್ಟೇಗಳು ಬೆಚ್ಚಗಿನ ಆತಿಥ್ಯವನ್ನು ನೀಡುತ್ತವೆ. ಕಣಿವೆಯನ್ನು ಅನ್ವೇಷಿಸಲು ಬಯಸುವವರಿಗೆ, ಚಾರಣಿಗರಿಗೆ ಇಲ್ಲಿ ಹೆಚ್ಚು ಅವಕಾಶಗಳಿವೆ. ಪ್ರಕೃತಿಯ ಸೌಂದರ್ಯದ ಸಾಮರಸ್ಯ, ಸಂಸ್ಕೃತಿಯ ಶ್ರೀಮಂತಿಕೆ ಮತ್ತು ಅತ್ಯಾಸಕ್ತಿಯ ಚಾರಣಿಗರಿಗೆ ಹರ್ಸಿಲ್ ಕಣಿವೆ ಪರಿಪೂರ್ಣ ಸ್ಥಳವಾಗಿದೆ. ಈ ಕಣಿವೆಯ ಸುತ್ತಮುತ್ತಲಿನ ಹಳ್ಳಿಗಳಿಗೆ ಭೇಟಿ ನೀಡುವುದು ಹಿಮಾಲಯದ ಗ್ರಾಮೀಣ ಜೀವನದ ಅಧಿಕೃತ ಅನುಭವ ಒದಗಿಸುತ್ತವೆ. ಗಂಗಾ ನದಿಯ ಮೂಲಕ್ಕೆ ಸಾಗುವ ಗೋಮುಖ ತಪೋವನ, ದೋಡಿತಾಲ್, ಧರಾಲಿಯಾ ಚಾರಣ ಮಾರ್ಗ, ಕೇದಾರ್ತಾಲ್ ಟ್ರೆಕ್ಕಿಂಗ್, ಬಾಸ್ಪಾ ಕಣಿವೆ, ಗಂಗೋತ್ರಿಯ ಗಂಗಾದೇವಿಯ ಚಳಿಗಾಲದ ವಾಸಸ್ಥಾನದ ಮುಖ್ವಾಸ್ ಗ್ರಾಮಗಳು ಹಿಮಾಲಯದ ನೈಸರ್ಗಿಕ ಸೌಂದರ್ಯದಿಂದ ಸುತ್ತುವರಿದಿವೆ. ಪರ್ವತ ಪ್ರದೇಶದ ಜನಜೀವನದ ಸಂಪ್ರದಾಯ, ಪಕ್ಷಿ, ಪ್ರಾಣಿ ವೀಕ್ಷಣೆ, ಆಧ್ಯಾತ್ಮಿಕ ಸಾಂತ್ವನ ಬಯಸುವವರಿಗೆ ಇದೊಂದು ಶಾಂತಿಧಾಮ. ಹಿಮಶಿಖರಗಳಿಗೆ ಹತ್ತಿರದಲ್ಲಿರುವ ಈ ತಾಣದಲ್ಲಿ ಶಿಖರಗಳಿಂದ ಇಳಿದು ಬರುವ ಭಾಗೀರಥಿ ನದಿಯ ತೊರೆಗಳ ನಿರಂತರ ಅಲೆಗಳ ನಾದ ಈ ಕಣಿವೆಯ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತದೆ.

'ಹರ್ಸಿಲ್' ಟಿಬೆಟ್‌ನ ಸ್ವಾಯತ್ತ ಪ್ರದೇಶ ಮತ್ತು ಭಾರತದ ನಡುವಿನ ಹಳೆ ಕಾರವಾನ್ ಹಾದಿಯಲ್ಲಿದೆ. ಭಾರತ-ಚೀನಾ ಗಡಿಯ ಬಳಿಯ ಎಂಟು ಹಳ್ಳಿಗಳ ಸಮೂಹವನ್ನು ಹೊಂದಿದ್ದು, ವಿವಾದಿತ ಭಾರತ-ಚೀನಾ ಗಡಿಗೆ ಸಮೀಪದಲ್ಲಿರುವ ಕಾರಣ ಇದು ಮಿಲಿಟರಿ ಮಹತ್ವವನ್ನು ಪಡೆದಿದೆ. ಈ ಸೇನಾ ಪ್ರದೇಶವು ಗರ್ವಾಲ್ ಸ್ಕೌಟ್ಸ್ ಮತ್ತು ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ ಶಿಬಿರದ ನೆಲೆಯಾಗಿದೆ.

### ತಲುಪುವುದು ಹೇಗೆ?

ಈ ಕಣಿವೆಗೆ ಅತ್ಯಂತ ರಮಣೀಯ ಮಾರ್ಗವೆಂದರೆ ಉತ್ತರಾಖಂಡದ ಪ್ರಮುಖ ನಗರಗಳಾದ ಡೆಹ್ರಾಡೂನ್, ಋಷಿಕೇಶದಿಂದ ರಸ್ತೆ ಮೂಲಕ ತಲುಪಬಹುದು. ಡೆಹ್ರಾಡೂನ್ ರೈಲು ಹಾಗೂ ವಿಮಾನ ನಿಲ್ದಾಣದಿಂದ ಹರ್ಸಿಲ್‌ಗೆ ಟ್ಯಾಕ್ಸಿ ಅಥವಾ ಬಸ್ ಮೂಲಕ ಪ್ರಯಾಣಿಸಬಹುದಾಗಿದೆ. ಹಿಮಾಲಯದ ಸಂಪೂರ್ಣ ನೋಟ, ಪ್ರಕೃತಿಯ ಆಹ್ಲಾದಕರ ವಾತಾವರಣದ ಸವಿ ಸವಿಯಲು ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಪ್ರವಾಸ ಸೂಕ್ತ. ಹಿಮಕ್ರೀಡೆ, ಹಿಮದ ಅದ್ಭುತ ಲೋಕ ವೀಕ್ಷಿಸಲು ಡಿಸೆಂಬರ್‌ನಿಂದ ಫೆಬ್ರುವರಿ ತಿಂಗಳವರೆಗೆ ಭೇಟಿ ನೀಡಬಹುದು. ಸಂಭಾವ್ಯ ಭೂಕುಸಿತ, ಮಳೆಯಿಂದಾಗಿ ರಸ್ತೆ ತಡೆ ಉಂಟಾಗುವ ಸಾಧ್ಯತೆ ಇರುವುದರಿಂದ ಜುಲೈನಿಂದ ಸೆಪ್ಟೆಂಬರ್‌ವರೆಗೆ ಪ್ರವಾಸ ಮಾಡದಿರುವುದು ಒಳಿತು.

## ಸೇಬು ಸೊಬಗು

ಈ ಪ್ರಶಾಂತ ಗಿರಿಧಾಮ ಸೇಬು ಉತ್ಪಾದನೆಗೆ ತುಂಬಾ ಪ್ರಸಿದ್ಧವಾಗಿದೆ. ಬೆಟ್ಟಗಳ ಇಳಿಜಾರಿನ ಕಲ್ಲು ಮಣ್ಣಿನ ಫಲವತ್ತಾದ ನೆಲದಲ್ಲಿ ಸಮೃದ್ಧವಾಗಿ ಬೆಳೆದ ಸೇಬಿನ ತೋಟಗಳನ್ನು ನೋಡುವುದು ಕಣ್ಣಿಗೆ ಹಬ್ಬ. ಈ ಕಣಿವೆಯ ಗ್ರಾಮಗಳಲ್ಲಿ ವಾರ್ಷಿಕ ಹತ್ತು ಸಾವಿರ ಮೆಟ್ರಿಕ್ ಟನ್ ಸೇಬು ಉತ್ಪಾದನೆಯಾಗುತ್ತದೆ. ಇಲ್ಲಿನ ಸೇಬು ಗಿಡಗಳು ಬಹುಕಾಲ ಬಾಳಿಕೆ ಉಳ್ಳವುಗಳಾಗಿದ್ದು, ವಾತಾವರಣದ ಬದಲಾವಣೆ ತಡೆದುಕೊಳ್ಳುವಿಕೆ ಹಾಗೂ ರೋಗನಿರೋಧಕಗಳಾಗಿದ್ದು, ಸೇಬುಗಳು ಸಹ ಬಹುಕಾಲ ಬಾಳಿಕೆ ಬರುತ್ತವೆ. ಇಲ್ಲಿಯ ಸೇಬು ಫಸಲು ಮಾಧುರ್ಯ ಹಾಗೂ ರಸಭರಿತವಾಗಿದ್ದು, ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆಯುತ್ತಿದ್ದು ಕೀಟನಾಶಕಗಳಿಂದ ಮುಕ್ತವಾಗಿವೆ. ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಕೊಯ್ಲು ಮಾಡಲಾಗುತ್ತಿದೆ.

ತನ್ನ ಅದ್ಭುತವಾದ ನೈಸರ್ಗಿಕ ಭೂದೃಶ್ಯಗಳು ಮತ್ತು ಸೇಬಿನತೋಟಗಳಿಗೆ ಹೆಸರುವಾಸಿಯಾದ ಈ ಕಣಿವೆ ಚಲನಚಿತ್ರ ನಿರ್ಮಾಪಕರು, ನಿರ್ದೇಶಕರನ್ನು ಆಕರ್ಷಿಸುವ ಜನಪ್ರಿಯ ತಾಣವಾಗಿದೆ. ಹಲವು ಸಿನಿಮಾಗಳು ಮತ್ತು ವೆಬ್ ಸರಣಿಗಳು ಈ ಕಣಿವೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಚಿತ್ರೀಕರಣ ಮಾಡಿವೆ. ಎಂಬತ್ತರ ದಶಕದಲ್ಲಿ ಬಾಲಿವುಡ್ ನಿರ್ಮಾಪಕ ರಾಜ್ ಕಪೂರ್ ನಿರ್ದೇಶನದ 'ರಾಮ್ ತೇರಿ ಗಂಗಾ ಮೈಲಿ' ಸೂಪರ್ ಹಿಟ್ ಚಿತ್ರದ ಹಲವು ಭಾಗಗಳನ್ನು ಹರ್ಸಿಲ್‌ನಲ್ಲಿ ಚಿತ್ರೀಕರಿಸಲಾಗಿದೆ. ಈ ಚಿತ್ರದ ಹಳ್ಳಿಯಲ್ಲಿದ್ದ ಅಂಚೆ ಕಚೇರಿಯನ್ನು ಇಂದಿಗೂ ನೋಡಬಹುದು. ನಿರ್ದೇಶಕ ಓಮಂಗ್ ಕುಮಾರ್ ನಿರ್ದೇಶಿಸಿದ ವಿವೇಕ್ ಒಬೆರಾಯ್ ಅಭಿನಯದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಯೋಪಿಕ್ ಈ ಕಣಿವೆ, ಗಂಗಾ ಘಾಟ್, ಧರಾಲಿ ಬಜಾರ್, ಮುಖ್ವಾ ಗ್ರಾಮ ಸಂಪರ್ಕಿಸುವ ತೂಗು ಸೇತುವೆ ಬಳಿ ಚಿತ್ರೀಕರಿಸಲಾಗಿದೆ. ಹರ್ಸಿಲ್ ನೆಲೋಂಗ್ ಕಣಿವೆಯು ಟಿಬೆಟ್ ಪ್ರದೇಶದೊಂದಿಗೆ ತನ್ನ ಗಡಿಗಳನ್ನು ಹಂಚಿಕೊಂಡಿರುವ ಹರ್ಸಿಲ್‌ನ ನೆರೆಹೊರೆಯಲ್ಲಿರುವ ಮತ್ತೊಂದು ಪ್ರವಾಸಿ ತಾಣವಾಗಿದೆ.



# ಬೀದಿಯಲ್ಲೂ.. ರಂಗದಲ್ಲೂ ಸಹನಾ ದನಿ

10ನೇ ಪುಟದಿಂದ...

ಹಲವರಿಗೆಜೀವನೋತ್ಸಾಹದಚಿಲುಮೆಯಾಗಿದೆ. ಆತ್ಮವಿಶ್ವಾಸದ ಮೆಟ್ಟಿಲುಗಳಾಗಿವೆ. ಹೊಸಪೇಟೆಯ ಎಂಜಿನಿಯರಿಂಗ್ ವಿದ್ಯಾರ್ಥಿ ಸಂದೀಪ್ ಕುಮಾರ್ ನಾಯಕ್ ಶಿಬಿರದಲ್ಲಿ ಸಿಕ್ಕ ತರಬೇತಿಯಿಂದಾಗಿ, ತನ್ನ ಜೀವನದ ಕಥೆಯನ್ನೇ ಬಿಂಬಿಸುವ 'ಡುಮ್ಮ ಎಂದರೆ ಡಮ್ಮಿ ಅಲ್ಲ' ಎನ್ನುವ ನಾಟಕ ಬರೆದು ಹೆಚ್ಚು ತೂಕದ ದೇಹ ಹೊಂದಿರುವ ವ್ಯಕ್ತಿಗಳ ಸಂಕಟಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಆ ಕಥೆಯನ್ನು ಸಹನಾ ಹಾಗೂ ಅವರ ತಂಡ ಅದ್ಭುತವಾಗಿ ರಂಗಮಂಚದಲ್ಲಿ ಪ್ರದರ್ಶಿಸಿದೆ. ಅವರಿಗೆ ಹೇಳಲು ಇಂತಹ ಹತ್ತಾರು ನಿದರ್ಶನಗಳಿದ್ದವು.

ನಾಟಕದ ಸೆಟ್‌ಗಳಿಗೆ ಆಧುನಿಕ ಸ್ಪರ್ಶ ನೀಡಿ, ಏಕತಾನತೆ ದೂರವಾಗಿಸುವ ಪ್ರಯತ್ನ ಗಮನಾರ್ಹವಾದುದು. ವಿಶಿಷ್ಟವಾದ ಬೆಳಕು, ವೇಷಭೂಷಣ ಬಳಸಿ ರಂಗಕ್ಕೆ ಹೊಸ ಬಣ್ಣ ನೀಡುವ ಪ್ರಯತ್ನ ಮಾಡಿದ್ದಾರೆ. ಸೆಟ್‌ಗಳನ್ನು ತಯಾರಿಸಲು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನೇ ಬಳಸುತ್ತಾರೆ. ನೋಡುಗರಿಗೆ ಏಕತಾನತೆ ಕಾಡದಿರಲು ದೃಶ್ಯಗಳ ನಡುವೆ ಸೆಟ್‌ಗಳನ್ನು ಬದಲಾಯಿಸುವ ಹೊಸ ಪ್ರಯೋಗಕ್ಕೂ ಕೈ ಹಾಕಿದ್ದಾರೆ. ಈ ಹೊಸತನ ಕಂಡು ಹಲವು ಸೇವಾ ಹಾಗೂ ಸರ್ಕಾರಿ ಸಂಸ್ಥೆಗಳು ಸಹನಾ ಅವರ ತಂಡದ ಸಹಯೋಗದೊಂದಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳ ಕುರಿತು ಹಲವು ಕಡೆಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿವೆ. ಶಿಬಿರಗಳ ಹೊರತಾಗಿಯೂ ದೇಶದಾದ್ಯಂತ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಾರೆ. ಹಾವೇರಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿಯೂ ನಾಮನಿರ್ದೇಶನಗೊಂಡಿದ್ದಾರೆ.

ಬಾಲ್ಯದಿಂದಲೇ ಹೊಸತನಕ್ಕೆ ಮಿಡಿಯುತ್ತಿದ್ದ ಅವರ ಉತ್ಸಾಹವೇ ರಂಗಭೂಮಿಯಲ್ಲಿ ಹೊಸ ಪ್ರಯತ್ನಗಳಿಗೆ ಪ್ರಚೋದನೆ ನೀಡಿದೆ. ಶಿಸ್ತು, ವೈಚಾರಿಕತೆ ಸೋದರಮಾವನಿಂದ ಬಂದವು. 'ರಸ್ತೆಯಲ್ಲಿ ನೃತ್ಯ ಮಾಡುವ ನಿನ್ನ ಮಗಳನ್ನು ಮದುವೆ ಮಾಡಿಕೊಳ್ಳುವವರು ಯಾರು' ಎಂದು ಪೋಷಕರನ್ನು ಮೂದಲಿಸಿದವರಿಗೆ ಸಾಧನೆಯ ಮೂಲಕ ಅವರು ಉತ್ತರಿಸಿದ್ದಾರೆ.

ADVERTORIAL

# ನವಾಬರ ನಗರಿ

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

"ಅತ್ತರ್ ಹಾಕಿಕೊಳ್ಳುವ ರೀತಿ ಇದು"– ಕೊಂಚವೇ ಸುಗಂಧ ಸುರಿದುಕೊಂಡು, ಕೈಗಳಿಗೆ ಅದನ್ನು ಸವರಿಕೊಳ್ಳುತ್ತಾ, ನಂತರ, ನಾಜೂಕಾಗಿ ತಮ್ಮ ಅಂಗಿಯ ಮೇಲೆ , ಎದೆ, ಭುಜ ಹಾಗೂ ಕೊನೆಗೆ ತೋಳುಗಳ ಭಾಗಕ್ಕೆ ಲೇಪಿಸಿಕೊಳ್ಳುತ್ತಾ ಫಕ್ರಾನ್ ನಮಗೆ ಅತ್ಯಂತ ಮಧುರ ಧ್ವನಿಯಲ್ಲಿ ವಿವರಿಸಿದರು. "ಸುಗಂಧಗಳಿಗಿಂತ ಅತ್ತರ್‌ನ ಪರಿಮಳ ಗಾಢವಾಗಿರುತ್ತದೆ" ಎಂದು ಸಂಕೋಚ ಬೆರೆತ ನಗುವಿನೊಂದಿಗೆ ಹೇಳಿದ ಅವರು, "ಇದನ್ನು ಪೋಷಾಕಿನ ಮೇಲೆ ಹಾಕಬೇಕು, ಚರ್ಮದ ಮೇಲಲ್ಲ" ಎಂಬುದನ್ನು ತಿಳಿಸಲು ಮರೆಯಲಿಲ್ಲ. ಅವರಾಡುತ್ತಿದ್ದ ಮಾತಿನಲ್ಲಿ ಮೋಡಿ ಮಾಡುವ ಲಯವಿತ್ತು; ಹಿಂದಿ, ಅರೇಬಿಕ್ ಹಾಗೂ ಉರ್ದು ಮಿಶ್ರಿತ ಮಧುರ ಕಾವ್ಯಾತ್ಮಕ ಧ್ವನಿ ಅದಾಗಿತ್ತು. ಜೇನಿನಲ್ಲಿ ಅದ್ದಿ ತೆಗೆದಂತಿತ್ತು ಅವರ ಮಾತಿನ ವೈಖರಿ. ಅದೆಷ್ಟು ಹೊತ್ತು ಬೇಕಾದರೂ ಅವರ ಮಾತುಗಳಿಗೆ ಕಿವಿಯಾಗಿರಬಹುದು ಎಂದು ನನಗೆ ಅನ್ನಿಸಿತು.

ಹಲವಾರು ಬಗೆಯ ಅತ್ತರ್‌ಗಳ ಪೈಕಿ, 'ಮಿಟ್ಟಿ' ಎಂಬುದು ನನಗೆ ಬಹಳ ಇಷ್ಟವಾಗಿಬಿಟ್ಟಿತು. ಆ ಬಾಟಲಿಯ ಮುಚ್ಚಳ ತೆಗೆಯುತ್ತಿದ್ದಂತೆಯೇ ಬೇಸಿಗೆ ಮುಗಿದು ಮುಂಗಾರು ಕಾಲಿಡುವ ಗಳಿಗೆಯ ನೆನಪು ನನ್ನ ಮನಸ್ಸನ್ನು ಆವರಿಸಿತು. ಕಾದು ಗಾರಾದ ಬೀಳುಮಣ್ಣು ಮಳೆಯ ಹನಿಗಳನ್ನು ಬರಮಾಡಿಕೊಳ್ಳುವ ಕ್ಷಣಗಳನ್ನು ಆ ಪುಟ್ಟ ಬಾಟಲಿಯಲ್ಲಿ ಹಿಡಿದಿಟ್ಟಿದ್ದಾರೇನೋ ಅನ್ನಿಸಿತು. ಅಷ್ಟರಲ್ಲಿ, ತನ್ನ ಪುಟ್ಟ ಅಂಗಡಿಯೊಳಗೆ ಬಂದು ಕೂರದ ಹೊರತು ತಾನು ಮುಂದುವರಿಸುವುದಿಲ್ಲವೆಂದು ಫಕ್ರಾನ್ ಮಧ್ಯಕ್ಕೇ ನಿಲ್ಲಿಸಿಬಿಟ್ಟರು. ನಮ್ಮನ್ನು ತಮ್ಮ ಅತಿಥಿಗಳೆಂದು ಭಾವಿಸಿದ್ದ ಅವರು, ಅಂಗಡಿಯಲ್ಲಿರುವ ಸುಗಂಧಗಳನ್ನು ತೋರಿಸುವಾಗ ನಮ್ಮನ್ನು ನಿಲ್ಲಿಸಬಾರದು ಎಂದು ನಿರ್ಧರಿಸಿದ್ದರು; ಬದಲಿಗೆ ಅಲ್ಲಿ ಕುಳಿತು ಅವನ್ನೆಲ್ಲಾ ನೋಡಲಿ ಎಂಬುದು ಅವರ ಭಾವನೆಯಾಗಿತ್ತು. ಆಗ, ಸಾಕಷ್ಟು ಕೇಳಿ ತಿಳಿದಿದ್ದ 'ಲಖನೋಯಿ ತೆಹಜೀಬ್' ಸಂಸ್ಕೃತಿಯ ಖುದ್ದು ಅನುಭವ ನನಗಾಯಿತು.

ಅರೇಬಿಕ್ ಮೂಲದ 'ತೆಹಜೀಬ್' ಎಂಬುದನ್ನು ಸಮೀಪದ ಅರ್ಥಕ್ಕೆ ಹತ್ತಿರವಿರುವಂತೆ ಭಾಷಾಂತರಿಸಿ ಹೇಳುವುದಾದರೆ, ಅದಕ್ಕೆ 'ಶಿಷ್ಟಾಚಾರ' ಅಥವಾ 'ಸಭ್ಯತೆ' ಎಂಬ ಅರ್ಥ ಬರುತ್ತದೆ. ಲಖನೌದ ಮಟ್ಟಿಗೆ ಹೇಳುವುದಾದರೆ, ಅದು ಅಲ್ಲಿ ಬದುಕಿನ ವಿಧಾನವೇ ಆಗಿದೆ.

ಲಖನೌ ಪ್ರವಾಸ ಮಾಡಬೇಕೆಂಬ ಆಸೆ ನನಗೆ ಬಹಳ ವರ್ಷಗಳಿಂದಲೂ ಇತ್ತು. ಆದರೂ, ಏಕೋ ಏನೋ ಅದನ್ನು ಈಡೇರಿಸಿಕೊಳ್ಳಲು ಆಗಿರಲಿಲ್ಲ. ಈ ಮಧ್ಯೆ, ಕೆಲವು ತಿಂಗಳುಗಳ ಹಿಂದೆ, ಗೆಳೆಯರೊಂದಿಗಿನ ಫುಡ್ ಟೂರ್ ಆಲೋಚನೆಯು ಆ ಕನಸನ್ನು ನನಸು ಮಾಡಿಕೊಳ್ಳಲು ಸೂಕ್ತ ಅವಕಾಶವಾಗಿ ಒದಗಿಬಂತು. ಇನ್ನು, ಲಖನೌವನ್ನು ಅಲ್ಲಿನ ಖಾದ್ಯಗಳನ್ನು ಸವಿದೇ ಅರ್ಥ ಮಾಡಿಕೊಳ್ಳಬೇಕು ಎಂಬರ್ಥದ ಮಾತು ಜನಜನಿತವಾದುದು. ಆದರೆ, ಅಲ್ಲಿ ಹೆಸರಾಂತ ಖಾದ್ಯಗಳ ಜೊತೆಗೆ ಕಂಡರಸಬೇಕಾದ್ದು ಇನ್ನೂ ಬಹಳಷ್ಟಿದೆ. ತ್ರಿವಳಿ ವಾಸ್ತುಶಿಲ್ಪ ಅದ್ಭುತಗಳಾದ, ಬಾರಾ ಇಮಾಂಬರ, ಛೋಟಾ ಇಮಾಂಬರ ಹಾಗೂ ರೂಮಿ ದರ್ವಾಜಾ, ಅಲ್ಲಿನ ಆಕರ್ಷಣೆಯ ಕೇಂದ್ರಬಿಂದುವಾಗಿವೆ. ಇವೀಗ ವಿವಾಹಪೂರ್ವ ಫೋಟೋಶೂಟ್‌ನ ನೆಚ್ಚಿನ ತಾಣವೂ ಆಗಿದೆ. ನವಾಬರ ನಾಡು ಎಂದು ಕರೆಯಲ್ಪಡುವ ಲಖನೌದ ಅಸ್ಮಿತೆಯು ಅಲ್ಲಿನ ಆಳ್ವಿಕೆಗಾರರ ಪರಂಪರೆಯಲ್ಲಿ ಆಳವಾಗಿ ಬೇರುಬಿಟ್ಟಿದೆ. ಉನ್ನತ ಗೌರವದ ಹುದ್ದೆಯಾದ 'ನವಾಬ್' ಎಂಬುದು ಮೂಲದಲ್ಲಿ ಪರ್ಷಿಯಾದ 'ನೈಬ್' ಅಥವಾ 'ನನ್–ವಾಬ್' ಎಂಬುದರಿಂದ ಬಂದಿದೆ. ಅಂದರೆ, ಇದರ ಅರ್ಥ, ಕುಟುಂಬದ ಪೋಷಕ ಅಥವಾ"ಅನ್ನದಾತ' ಅಥವಾ "ಜೀವ ಸಂರಕ್ಷಕ' ಎಂದಾಗಿದೆ. ಕಾಲಕ್ರಮೇಣ, ಇದು, ರಾಜವೈಭವ, ಅಧಿಕಾರ, ಆಧುನಿಕತೆ ಹಾಗೂ ಸಾಂಸ್ಕೃತಿಕ ಆಶ್ರಯವನ್ನು ಸಂಕೇತಿಸುವ ಪದವಾಗಿ ಮಾರ್ಪಟ್ಟಿತು.

ಬಾರಾ ಇಮಾಂಬರ ಹಾಗೂ ರೂಮಿ ದರ್ವಾಜಾಗಳು ನವಾಬಾ ಅಸಾಫ್–ಉದ್ ಆಳ್ವಿಕೆ ಅವಧಿಯಲ್ಲಿ 1784ರಲ್ಲಿ ಬರ ಪರಿಹಾರದ ಭಾಗವಾಗಿ ನಿರ್ಮಾಣಗೊಂಡವು. ಕಿಫಾಯದುಲ್ಲಾ ಎಂಬ ವಾಸ್ತುಶಿಲ್ಪಿಯಿಂದ ವಿನ್ಯಾಸಗೊಂಡ 164 ಅಡಿ ಉದ್ದ ಹಾಗೂ 52 ಅಗಲದ ಈ ಬಾರಾ ಇಮಾಂಬರವು ಸಂಪೂರ್ಣವಾಗಿ ಇಟ್ಟಿಗೆ ಮತ್ತು ಉತ್ಕೃಷ್ಟ ಗುಣಮಟ್ಟದ ಸುಣ್ಣದಕಲ್ಲುಗಳಿಂದ ಮಾಡಲ್ಪಟ್ಟಿದೆ. ಇದರ ಕಮಾನು ಶೈಲಿಯ ಮೇಲ್ಛಾವಣಿಯು ಒಂದು ಅದ್ಭುತವೇ ಸೈ. ಒಂದೇ ಒಂದು ತೊಲೆಯ ಆಸರೆಯೂ ಇಲ್ಲದ ಆ ಶೈಲಿಯ ಪ್ರಪಂಚದ ಅತ್ಯಂತ ದೊಡ್ಡ ನಿರ್ಮಿತಿ ಇದಾಗಿದೆ. ಬಾರಾ ಇಮಾಂಬರದ ಮತ್ತೊಂದು ಆಸಕ್ತಿದಾಯಕ ಸಂಗತಿಯೆಂದರೆ, ಅದರ ಬುಲ್ ಬುಲಯ್ಯಾ. ಇದು ಕಿರಿದಾದ ಓಣಿಗಳು, ಕುಸುರಿ ಚಿತ್ರಾಕೃತಿಗಳಿಂದ ಕೂಡಿದ ಬಾಲ್ಕನಿಗಳು ಹಾಗೂ ಪಡಿಯಚ್ಚಿನಂತಿರುವ ಒಂದೇ ರೀತಿಯ 489 ದ್ವಾರಗಳಿಂದ ಕೂಡಿದ್ದು, ಚಕ್ರವ್ಯೂಹವೇನೋ ಅನ್ನಿಸುತ್ತದೆ. ಇದು ನೋಡುಗರಿಗೆ, ತಾವೇ ಕಳೆದುಹೋಗಿದ್ದೇವೇನೋ ಎಂಬ ಭ್ರಮೆ ಮೂಡಿಸುತ್ತದೆ. ಇಮಾಂಬರಾಗಳು ಪವಿತ್ರ ಪೂಜಾ ಸ್ಥಳಗಳೂ ಹೌದು. ಕಳವಳದ ವಿಷಯವೆಂದರೆ, ಇತ್ತೀಚೆಗೆ ಅವು ಕೆಟ್ಟ ಕಾರಣಕ್ಕೆ ಸುದ್ದಿಗಳಾಗಿ ಗಮನ ಸೆಳೆದವು. ಸಾಮಾಜಿಕ ಮಾಧ್ಯಮದ ಇನ್‌ಫ್ಲುಯೆನ್ಸರ್ ಒಬ್ಬರು ಇಲ್ಲಿ ನೃತ್ಯದ ದೃಶ್ಯವೊಂದನ್ನು ಚಿತ್ರೀಕರಿಸಿದ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಈ ತಾಣದ 'ಪಾವಿತ್ರ್ಯ'ವನ್ನು ಸಂರಕ್ಷಿಸುವ ಉದ್ದೇಶದಿಂದ ವಿಡಿಯೊ ಚಿತ್ರೀಕರಣವನ್ನು ನಿಷೇಧಿಸಿದ್ದಾರೆ. ಪ್ರವಾಸಿಗರಾಗಿ ನಾವು ಭೇಟಿ ನೀಡುವ ಸ್ಥಳಗಳ ಪಾವಿತ್ರ್ಯ, ಮನ್ನಣೆ ಹಾಗೂ ಸ್ವಚ್ಛತೆಯನ್ನು ಕಾಪಾಡಬೇಕಾದ ನಮ್ಮ ಜವಾಬ್ದಾರಿಯನ್ನು ಇದು ನನಗೆ ನೆನಪಿಸಿತು.

ಅಲ್ಲಿ ನಾವು ಛತ್ತರ್ ಮಂಜಿಲ್‌ಗೂ (ಅಂಬ್ರೆಲಾ ಪ್ಯಾಲೆಸ್) ಭೇಟಿ ನೀಡಿದೆವು. ಇದು ಒಂದೊಮ್ಮೆ ನವಾಬರ ಸುಂದರ ನಿವಾಸವಾಗಿತ್ತು. ಈಗ ಇದು ಶಿಥಿಲಾವಶೇಷದಂತಿದ್ದರೂ ತನ್ನ ಗತವೈಭವವನ್ನು ಪಿಸುಗುಟ್ಟಿದಂತೆ ಭಾಸವಾಗುತ್ತದೆ.

ಕಬಾಬ್‌ಗಳು ಹಾಗೂ ಬಿರಿಯಾನಿಗಳ ರುಚಿಯಿಂದ ಗುರುತಿಸಿಕೊಂಡಿರುವ ಲಖನೌದ ಪಾಕ ಕಲೆಯು ಬಹಳ ಪ್ರಸಿದ್ಧವಾದುದು. ಅಲ್ಲಿನ ಭಕ್ಷ್ಯಗಳು ಅಲ್ಲಿನ ಪ್ರಖ್ಯಾತಿಗೆ ತಕ್ಕಂತೆಯೇ ಇವೆ. ಅಲ್ಲಿ ನಮಗೆ ಚಳಿಗಾಲದ ಸವಿಗಳಾದ ಕಾಲಿ ಗಾಜರ್ ಕಾ ಹಲ್ವಾ ಮತ್ತು ಮಖಾನ್ ಮಲಯ್‌ಗಳನ್ನು ಮೆಲ್ಲುವ ಅವಕಾಶವೂ ಲಭ್ಯವಾಯಿತು. ಈ ಖಾದ್ಯಗಳ ವಿವಿಧ ಬಗೆಗಳು ಹಾಗೂ ಅವುಗಳ ಸ್ವಾದಿಷ್ಟಕ್ಕೆ ಸರಿಸಾಟಿಯಾದುದು ಬೇರೊಂದಿಲ್ಲ ಎನ್ನಬಹುದು. ಅಲ್ಲಿ ಮಾಂಸಾಹಾರ ಭಕ್ಷ್ಯಗಳದ್ದೇ ಮೇಲುಗೈಯಾಗಿದ್ದರೂ ಸಾಕಷ್ಟು ಸಸ್ಯಾಹಾರ ಖಾದ್ಯಗಳ ಆಯ್ಕೆಗಳೂ ಇದ್ದವು. ಹುಳಿಯುಕ್ತ ಮಸಾಲೆ ಸ್ವಾದಗಳಿಂದ ಕೂಡಿದ ಪ್ರಸಿದ್ಧ ಚಾಟ್‌ನ ರುಚಿಯನ್ನೂ ಸವಿದೆವು. ತರುವಾಯ, ಪುರಾತನ ಅಡುಗೆ ವಿಧಾನಗಳಿಂದ ಸಿದ್ಧಗೊಂಡ ಭೂರಿಭೋಜನವನ್ನೂ ಉಂಡು ಸುಖಿಸಿದೆವು.

ನೈಮತ್ ಖಾನಾದಲ್ಲಿ, ಮನೆಯಲ್ಲಿ ಸಿದ್ಧಪಡಿಸಿದ ಆಹಾರ ಸೇವಿಸಿದ್ದಂತೂ ಮರೆಯಲಾಗದ ಅನುಭವವಾಗಿದೆ. ಸರಳವಾಗಿ ತೋರುವ ಆ ಖಾದ್ಯಗಳ ಸ್ವಾದ ಮಾತ್ರ ಎಣೆಯಿಲ್ಲದಂಥದ್ದು. ಕೊನೆಯ ದಿನ, ನಾವು ಐಷಾರಾಮಿ ಸಾರಕಾ ಹೋಟೆಲ್‌ಗೆ ತೆರಳಿ 'ಅಜ್ರಾಕ್'ನಲ್ಲಿ ಊತಣ ಮಾಡಿದೆವು. 12 ಗಂಟೆಗಳಷ್ಟು ಅವಧಿಯವರೆಗೆ ನಿಧಾನವಾಗಿ ಬೇಯಿಸಿ ಸಿದ್ಧಪಡಿಸಿದ 'ರಾನ್' ಕೂಡ ಈ ಊತಣದಲ್ಲಿ ಸೇರಿದ್ದುದು ವಿಶೇಷ.

ಇವೆಲ್ಲಾ ಒಂದು ತೂಕವಾದರೆ, ಅಲ್ಲಿನ ಕಿರಿದಾದ ಬೀದಿಗಳಲ್ಲಿನ ಖಾದ್ಯಗಳ ಸ್ವಾದವೇ ಮತ್ತೊಂದು ತೂಕ. ಅಲ್ಲಿನ ಪುಟ್ಟದಾದ, ಮೊದಲ ನೋಟಕ್ಕೆ ಒಂದಿಷ್ಟು ಭೀತಿ ಹುಟ್ಟಿಸುವಂತಿರುವ, ಸಾಮಾನ್ಯವಾದ ತಿನಿಸು ಮುಂಗಟ್ಟುಗಳಲ್ಲಿ ನಾನು ಈ ಹಿಂದೆಂದೂ ತಿಂದಿರದ ಖಾದ್ಯಗಳ ರುಚಿಗೆ ಸಾಕ್ಷಿಯಾದೆ.

ಜನಜನಿತ 'ಟುಂಡೆ ಗಲಾವತೀ ಕಬಾಬ್'ಗಳು ಅಲ್ಲಿ ಲಭ್ಯವಾದವು. ದೀರ್ಘ ಇತಿಹಾಸ ಹಾಗೂ ಸ್ವಾದಿಷ್ಟತೆಗೆ ಹೆಸರಾದ ಖಾದ್ಯ ಇವು. ಹಲ್ಲುಗಳು ಅದಾಗಲೇ ಬಿದ್ದಿದ್ದರೂ ಕಬಾಬ್‌ಗಳ ರುಚಿಗಾಗಿ ಹಂಬಲಿಸುತ್ತಿದ್ದ ನವಾಬನಿಗಾಗಿ ಬಾಯಿಗಿಡುತ್ತಿದ್ದಂತೆಯೇ ಕರಗುವ ಕಬಾಬ್ ಗಳು ಈ ನಗರದಲ್ಲಿ ಮೊದಲಿಗೆ ಸಿದ್ಧಗೊಂಡವು ಎಂಬುದು ಇಲ್ಲಿನ ಪ್ರತೀತಿ.

ಹಾಗೆಂದ ಮಾತ್ರಕ್ಕೆ ಅಲ್ಲಿ ನನಗೆ ಇಷ್ಟವಾಗದ್ದು ಏನೊಂದೂ ಇರಲೇ ಇಲ್ಲವೆಂದೇನೂ ಅಲ್ಲ. ಹೇಳಬೇಕೆಂದರೆ, 'ದಬಾಂಗ್' ಸಿನಿಮಾ ಚಿತ್ರೀಕರಣಗೊಂಡ ಮೇಲೆ ಜನಪ್ರಿಯಗೊಂಡ ಅಲ್ಲಿನ 'ದಬಾಂಗ್ ಟೀ' ನನಗೆ ಅಷ್ಟೇನೂ ರುಚಿಸಲಿಲ್ಲ. ಅದು ಚಿಟ್ಟೆನ್ನಿಸುವಷ್ಟು ಕೆನೆಯುಕ್ತ ಎಂದು ನನಗೆ ಅನ್ನಿಸಿತು. ಇನ್ನು, ಅಲ್ಲಿ ಕಾಶ್ಮೀರಿ ಚಹಾ ಕುಡಿಯಲು ಅಷ್ಟು ಆಸಕ್ತಿ ತೋರದ ನಾನು, ಅದಕ್ಕೆ ಬದಲಾಗಿ ಗಲಾವತೀ ಕಬಾಬ್‌ಗಳ ರುಚಿಗೇ ಅಂಟಿಕೊಂಡೆ!

ಲಖನೌದ ಹೆಸರಾಂತ ಸ್ಮರಣಿಕೆಯಾದ 'ಚಿಕಂಕರಿ ಕಸೂತಿ'ಯನ್ನು ಎಡತಾಕದೆ ಆ ನಗರಿಯನ್ನು ಬಿಟ್ಟು ಹೊರಡಲು ಸಾಧ್ಯವೇ? ಬೇಗನೇ ಒಂದು ಸಣ್ಣ ಭೇಟಿ ನೀಡಿ, ಅದನ್ನು ಮುಗಿಸೋಣವೆಂದು ಹೊರಟ ನಾವು, ಅಲ್ಲಿ ಬರೋಬ್ಬರಿ ಎರಡು ಗಂಟೆಗಳ ಕಾಲ ಬಿಡುವಿಲ್ಲದೆ ಶಾಪಿಂಗ್‌ನಲ್ಲಿ ಮುಳುಗಿದೆವು. ಇದರಿಂದಾಗಿ ನಮ್ಮ ಸೂಟ್‌ಕೇಸುಗಳು ಸೂಕ್ಷ್ಮ ಕೈಚಳಕದ ಕಸೂತಿ ಡ್ರೆಸ್‌ಗಳಿಂದ ತುಂಬಿ ತುಳುಕುವಂತಾದವು. ವ್ಹೋಲ್‌ಸೇಲ್ ಮಾರ್ಕೆಟ್‌ಗಳಿಂದ ಹಿಡಿದು ಬೊಟಿಕ್ ಡಿಸೈನರ್ ಸ್ಟೋರ್‌ಗಳವರೆಗೆ ಅಸಂಖ್ಯ ಆಯ್ಕೆಗಳನ್ನು ಲಖನೌ ನಮಗೆ ಕೊಡಮಾಡಿತ್ತು.

ಚಿಕಂಕರಿ ಚಿತ್ರಾಕೃತಿಗಳು ಲಖನೌದ ವಾಸ್ತುಶಿಲ್ಪವನ್ನು ಪ್ರತಿಫಲಿಸುತ್ತವೆ. ಮೀನಿನ ಚಿತ್ರವು ನವಾಬಿ ಕಲೆ ಹಾಗೂ ಸಂಸ್ಕೃತಿಯಲ್ಲಿ ವ್ಯಾಪಕವಾಗಿ ಕಂಡುಬರುವ ಸಂಕೇತವಾಗಿದೆ. ಪರ್ಷಿಯನ್ ಹಾಗೂ ಇಸ್ಲಾಂ ಪರಂಪರೆಗಳಲ್ಲಿ ಅದೃಷ್ಟ, ಫಲವಂತಿಕೆ ಹಾಗೂ ಸಮೃದ್ಧಿಯನ್ನು ಮೀನು (ಮಾಹೀ) ಪ್ರತಿನಿಧಿಸುತ್ತದೆ. ಪರ್ಷಿಯನ್ ಮೂಲದವರಾದ ಅವಧ್ ನವಾಬರು ತಮ್ಮ ಆಡಳಿತ ಹಾಗೂ ಸೌಂದರ್ಯಪ್ರಜ್ಞೆಯ ಪ್ರಧಾನ ಸಂಕೇತವಾಗಿ ಮೀನಿನ ಚಿತ್ರವನ್ನು ಬಳಸುತ್ತಿದ್ದರು.

ಹೆಬ್ಬಾಗಿಲುಗಳು, ರಾಜಮನೆತನದ ಧ್ವಜಗಳು ಹಾಗೂ ಚಾರಿತ್ರಿಕ ನಿರ್ಮಿತಿಗಳ ಮುಖಮಂಟಪಗಳಲ್ಲಿ ಮೀನಿನ ಚಿತ್ರಗಳು ಕಂಡುಬರುತ್ತವೆ. ಇದು, ಸೇನಾ ಕಮಾಂಡರ್‌ಗಳು ಹಾಗೂ ಅಧಿಕಾರಿಗಳಿಗೆ ನವಾಬರು ಪ್ರದಾನ ಮಾಡುತ್ತಿದ್ದ ಗೌರವ ಹಾಗೂ ಶ್ರೇಷ್ಠತೆಯ ದ್ಯೋತಕವಾದ 'ಮಾಹೀ–ಮರಾತಿಬ್'ನ ಭಾಗವಾಗಿತ್ತು. ಈ ಚಿತ್ರಾಕೃತಿಗಳು ಸಮೃದ್ಧಿ ಹಾಗೂ ಸಂರಕ್ಷಣೆಯನ್ನು ಪ್ರತಿನಿಧಿಸುತ್ತಾ ಲಖನೌದ ಸಾಂಸ್ಕೃತಿಕ ಹಾಗೂ ಕಲಾ ಅಸ್ಮಿತೆಯೊಂದಿಗೆ ಹಾಸುಹೊಕ್ಕಾಗಿವೆ. ಇಂತಹ ಅನನ್ಯ ನಗರಿಯಾದ ಲಖನೌಗೆ ಭೇಟಿ ನೀಡಬೇಕೆಂಬ ಕಾತರ ನಿಮ್ಮದಾಗಿದ್ದರೆ, ಭಾರತದ ಸಾರ–ಸತ್ವವೇ ಆಗಿರುವ ಸಂಸ್ಕೃತಿಗಳ ಮೋಹಕ ಸಂಯೋಜನೆಯಾದ 'ವೀಣಾ ವರ್ಲ್ಡ್ ಟೂರ್ ಆಫ್ ಲಖನೌ, ಅಯೋಧ್ಯಾ ಅಂಡ್ ವಾರಾಣಸಿ'ಯಲ್ಲಿ ಭಾಗಿಯಾಗಿ.

ನನ್ನ ಪಯಣ ಮುಗಿಯುತ್ತಾ ಬಂದಾಗ, ಲಖನೌದ ವಿಶಿಷ್ಟ ಸೊಬಗಿನ ಬಗ್ಗೆ ಬೆರಗುಗೊಳ್ಳದೆ ಇರಲು ಸಾಧ್ಯವಾದೀತೆ? ಚರಿತ್ರೆ ಎಂಬುದು ಅಲ್ಲಿ ಬೀಸುವ ಗಾಳಿಯಲ್ಲೇ ಮಿಳಿತಗೊಂಡುಬಿಟ್ಟಿದೆ. ನಮ್ಮ ಮೇಲೂ ಪ್ರಭಾವ ಬೀರುವಂತೆ ಕಾವ್ಯಾತ್ಮಕವಾಗಿ ಹಾಗೂ ಪಕ್ವಗೊಂಡ ಭಾಷೆಯಲ್ಲಿ ಮಾತನಾಡುವ ಅಲ್ಲಿನ ಜನರು ಆಪ್ತತೆಯನ್ನೇ ತುಳುಕಿಸಿದರು. ಆ ಪ್ರವಾಸ ಮುಗಿಯುವ ವೇಳೆಗೆ ನಾವು ಕೂಡ ಶುದ್ಧ ಹಿಂದಿಯಲ್ಲಿ ಮಾತನಾಡಲು ಶುರುಮಾಡಿದ್ದೆವು. ಆ ಮೂಲಕ, ಲಖನೌದ 'ತೆಹಜೀಬ್' ಅನ್ನು ನಮ್ಮೊಂದಿಗೆ ನಾವಿರುವಲ್ಲಿಗೆ ಕೊಂಡೊಯ್ಯುತ್ತೇವೇನೋ ಅನ್ನಿಸಿತು. ಅಲ್ಲಿನ ಭವ್ಯ ಇತಿಹಾಸದಿಂದ ಹಿಡಿದು ಆರ್ದ್ರತೆಯ ಭಾವ ಮೂಡಿಸುವ ಜನರವರೆಗೆ, ಅಲ್ಲಿನ ಪ್ರತಿಯೊಂದು ಕ್ಷಣವೂ ಸುಂದರ ಕಥಾನಕದೊಳಕ್ಕೆ ಇಣುಕಿ ಹಾಕಿದಂತಿತ್ತು. ಗಾಳಿಯಲ್ಲೇ ತೀಡುವ ಅತ್ತರ್ ಇರಬಹುದು, ಕಬಾಬ್‌ಗಳ ಸವಿಯಿರಬಹುದು ಅಥವಾ ಭವ್ಯ ವಾಸ್ತುಶಿಲ್ಪದ ಇತಿಹಾಸದ ಪ್ರತಿಧ್ವನಿ ಇರಬಹುದು, ಮತ್ತೆ ಮತ್ತೆ ಆವರಿಸುವ ಗುಂಗು ಲಖನೌ ನಗರಿಯದ್ದಾಗಿದೆ.

Email: travel@veenaworld.com | ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.

ನಿಮ್ಮ ಗೆಳೆಯರ ಬಳಗದಲ್ಲಿ ಅಂಟಾರ್ಕ್ಟಿಕಾಗೆ ಭೇಟಿ ನೀಡಿದ ಮೊದಲಿಗರಾಗಿ!

ಯಾವ ದೇಶಕ್ಕೂ ಸೇರದ ಕಡಲ ಜೀವಿಗಳ ಸಾಮ್ರಾಜ್ಯವಿದು; ಪೆಂಗ್ವಿನ್‌ಗಳು, ತಿಮಿಂಗಿಲಗಳು ಮತ್ತು ನೀರುನಾಯಿಗಳ ಸಮೃದ್ಧ ಸಂತತಿಯ ಶಾಂತಿಯ ತಾಣವಿದು. ಅಲ್ಲಿ ನಾವು ಕೇವಲ ಅತಿಥಿಗಳಷ್ಟೇ, ನಮಗೆ ವರ್ಷದ ಕೆಲವೇ ತಿಂಗಳು ಮಾತ್ರ ಅಲ್ಲಿಗೆ ಭೇಟಿ ನೀಡಲು ಅವಕಾಶ. ಪರಿಶುಭ್ರ ನಿರ್ಮಲ ಹಾಗೂ ಪ್ರಶಾಂತ ಅಂಟಾರ್ಕ್ಟಿಕಾವು ಜನಜಂಜಡದ ಉಸಾಬರಿಯಿಲ್ಲದ ಉತ್ಕೃಷ್ಟ ಪ್ರವಾಸಿ ನೆಲೆಯಾಗಿದೆ. ಬದುಕಿನಲ್ಲಿ ಒಮ್ಮೆ ಮಾತ್ರ ಸಿಗಬಹುದಾದ ಈ ಅನ್ವೇಷಣೆಯ ಅವಕಾಶದಲ್ಲಿ ಭಾಗಿಯಾಗಿ ಹಾಗೂ 'ನಾನು ಎಲ್ಲ ಏಳು ಭೂಖಂಡಗಳನ್ನೂ ನೋಡಿದ್ದೇನೆ' ಎಂದು ಹೆಮ್ಮೆಯಿಂದ ಹೇಳಿರಿ. 'ವೀಣಾ ವರ್ಲ್ಡ್', ಇಲ್ಲಿಗೆ ಇತ್ತೀಚೆಗೆ ಪ್ರವಾಸಗಳನ್ನು ಯಶಸ್ವಿಯಾಗಿ ಏರ್ಪಡಿಸಿದೆ. ನೀವು ಪ್ರವಾಸದ ಸಂಭ್ರಮದಲ್ಲಿರುವಾಗ ನಮ್ಮ ಟೂರ್ ಮ್ಯಾನೇಜರುಗಳು ನಿಮಗೆ ಮಾರ್ಗದರ್ಶನ ಮಾಡುವ ಜೊತೆಗೆ ಬೇರೆಲ್ಲವನ್ನೂ ನಿರ್ವಹಿಸುತ್ತಾರೆ.

ಚಲೋ, ಬ್ಯಾಗ್ ಭರೋ, ನಿಕಲ್ ಪಡೋ 'ವೀಣಾ ವರ್ಲ್ಡ್'ನೊಂದಿಗೆ!

18ರಿಂದ–31ನೇ ಮಾರ್ಚ್ ಪ್ರತಿದಿನವೂ ತೆರೆದಿರುತ್ತದೆ
ವೀಣಾ ವರ್ಲ್ಡ್ ಸೇಲ್ಸ್ ಆಫೀಸುಗಳು
ಬೆಳಿಗ್ಗೆ 10ರಿಂದ ಸಂಜೆ 8
ಭಾನುವಾರಗಳಂದು ಕೂಡ!

ಅಂಟಾರ್ಕ್ಟಿಕಾ
ಏಳನೇ ಖಂಡ
'ವೀಣಾ ವರ್ಲ್ಡ್'ನೊಂದಿಗೆ
13 ದಿನಗಳು - ಡಿಸೆಂಬರ್ 8 - 1325000
ಬ್ಯೂನೊ ಐರಿಸ್ (3N), ಉಸ್ವಾಯಾ, ಅಂಟಾರ್ಕ್ಟಿಕಾ ಕ್ರೂಸ್ (9N)

veena world.com | Toll-Free: 1800 22 7979
Veena World Bengaluru: Jayanagar 887 997 2217, Indiranagar 887 997 9500

VEENA WORLD
Travel. Explore. Celebrate Life.

# ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9

(ಪಾಕಿಸ್ತಾನ–ದುಬೈ)

ದುಬೈನಲ್ಲಿ ಇಂದು ಫೈನಲ್ • ರೋಹಿತ್ ಬಳಗಕ್ಕೆ ಕಿವೀಸ್ ಪಡೆ ಸವಾಲು • ಸ್ಪಿನ್ನರ್‌ಗಳ ಸೆಣಸಾಟಕ್ಕೆ ವೇದಿಕೆ ಸಿದ್ಧ

## ‘ಚಾಂಪಿಯನ್’ ಪಟ್ಟಕ್ಕಾಗಿ ಹಣಾಹಣಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡವು 12 ವರ್ಷಗಳ ನಂತರ ಮತ್ತೊಮ್ಮೆ ಚಾಂಪಿಯನ್ಸ್ ಟ್ರೋಫಿಗೆ ಮುತ್ತಿಡುವ ಕ್ಷಣವನ್ನು ಕಣ್ತುಂಬಿಕೊಳ್ಳಲು ಭಾರತದ ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ.

ಭಾನುವಾರ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಟೂರ್ನಿಯ ಫೈನಲ್ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗವು ನ್ಯೂಜಿಲೆಂಡ್ ವಿರುದ್ಧ ಜಯಿಸಿದರೆ ‘ಚಾಂಪಿಯನ್’ ಕನಸು ಈಡೇರಲಿದೆ. ಕಿವೀಸ್ ಬಳಗವೂ 25 ವರ್ಷಗಳ ನಂತರ ಪ್ರಶಸ್ತಿ ಮುಡಿಗೇರಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಐಸಿಸಿಯ ಎಲ್ಲ ಟೂರ್ನಿಗಳಲ್ಲಿ ಕಿವೀಸ್ ಬಳಗವು 10–6ರಿಂದ ಭಾರತದ ಎದುರು ಮುನ್ನಡೆಯಲ್ಲಿದೆ. ಆದರೆ ಅಂಕಿ ಅಂಶಗಳನ್ನು ಮತ್ತಷ್ಟು ಸಾಣೆಸಿದರೆ ಐಸಿಸಿ ಟೂರ್ನಿಗಳ ನಾಕೌಟ್ ಪಂದ್ಯಗಳಲ್ಲಿ ಯೂ ಕಿವೀಸ್ ತಂಡವು 3–1ರ ಮುನ್ನಡೆಯಲ್ಲಿದೆ.

ಈ ಟೂರ್ನಿಯ ಗುಂಪು ಹಂತದಲ್ಲಿ ಉಭಯ ತಂಡಗಳು ಒಂದು ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಭಾರತ ಗೆದ್ದಿತ್ತು. ಹೈಬ್ರಿಡ್ ಮಾದರಿಯ ಟೂರ್ನಿ ಇದಾಗಿರುವುದರಿಂದ ಭಾರತ ತಂಡವು ತನ್ನ ಎಲ್ಲ ಪಂದ್ಯಗಳನ್ನೂ ದುಬೈನಲ್ಲಿ ಆಡುತ್ತಿದೆ. ಫೈನಲ್ ಕೂಡ ಇಲ್ಲಿಯೇ ಇದೆ. ಇದರಿಂದಾಗಿ ಭಾರತಕ್ಕೆ ಹೆಚ್ಚು ಅನುಕೂಲವಾಗಿದೆ ಎಂಬ ಚರ್ಚೆಗಳು ಜೋರಾಗಿಯೇ ನಡೆಯುತ್ತಿವೆ.

ಇದರ ನಡುವೆಯೂ ಕಿವೀಸ್ ತಂಡವು ಪ್ರಶಸ್ತಿ ಗೆಲ್ಲುವ ಆತ್ಮವಿಶ್ವಾಸದಲ್ಲಿದೆ. ಸೆಮಿಫೈನಲ್‌ನಲ್ಲಿ ಬಲಿಷ್ಠ ದಕ್ಷಿಣ ಆಫ್ರಿಕಾ ಎದುರು ಭರ್ಜರಿ ಜಯ ಸಾಧಿಸಿ ಬಂದಿರುವ ಮಿಚೆಲ್ ಸ್ಯಾಂಟನರ್ ಬಳಗಕ್ಕೆ ಭಾರತದ ಸ್ಪಿನ್ ಶಕ್ತಿಯನ್ನು ಮೀರಿ ನಿಲ್ಲುವ ಸವಾಲು ಇದೆ.

ಬಲಗೈ ಸ್ಪಿನ್ನರ್ ವರುಣ ಚಕ್ರವರ್ತಿ ಮತ್ತು ಎಡಗೈ ಮೋಡಿಗಾರ ಕುಲದೀಪ್ ಯಾದವ್ ಅವರ ಜೋಡಿಯೂ ಕಿವೀಸ್ ಬಳಗವನ್ನು ಕಾಡಲು ಸಿದ್ಧವಾಗಿದೆ. ಅವರೊಂದಿಗೆ ಸ್ಪಿನ್– ಆಲ್‌ರೌಂಡರ್‌ಗ-ಳಾದ ರವೀಂದ್ರ ಜಡೇಜ ಮತ್ತು ಅಕ್ಷರ್ ಪಟೇಲ್ ಕೂಡ ಇದ್ದಾರೆ. ಕಿವೀಸ್ ತಂಡದಲ್ಲಿ ಅಮೋಘ ಲಯದಲ್ಲಿರುವ ರಚಿನ್ ರವೀಂದ್ರ ಹಾಗೂ ಅನುಭವಿ ಬ್ಯಾಟರ್ ಕೇನ್ ವಿಲಿಯಮ್ಸನ್ ಅವರನ್ನು ಕಟ್ಟಿಹಾಕುವುದು ಬೌಲರ್‌ಗಳ ಮುಂದಿರುವ ಮುಖ್ಯ ಸವಾಲು.

ನ್ಯೂಜಿಲೆಂಡ್ ತಂಡದಲ್ಲಿಯೂ ಪರಿಣಾಮಕಾರಿ ಸ್ಪಿನ್ನರ್‌ಗಳಿದ್ದಾರೆ. ನಾಯಕ ಸ್ಯಾಂಟನರ್, ಮೈಕೆಲ್ ಬ್ರೇಸ್‌ವೆಲ್, ರವೀಂದ್ರ ಮತ್ತು ಗ್ಲೆನ್ ಫಿಲಿಪ್ಸ್ ಅವರು ತಮ್ಮ ತಂಡವನ್ನು ಗೆಲುವಿನತ್ತ ಮುನ್ನಡೆಸುವ ಸಮರ್ಥರಾಗಿದ್ದಾರೆ. ಅಲ್ಲದೇ ಗ್ಲೆನ್ ಸೇರಿದಂತೆ ಉಳಿದ ಕೆಲವು ಆಟಗಾರರು ಚುರುಕಿನ ಫೀಲ್ಡಿಂಗ್ ಮೂಲಕ ಬ್ಯಾಟರ್‌ಗಳಿಗೆ ಬಿಸಿ ಮುಟ್ಟಿಸುವಲ್ಲಿಯೂ ನುರಿತಿದ್ದಾರೆ. ಕಳೆದ ಪಂದ್ಯದಲ್ಲಿ ಗ್ಲೆನ್ ಪಡೆದ ‘ಸಾಹಸಮಯ’ ಕ್ಯಾಚ್‌ಗೆ ವಿರಾಟ್ ಕೊಹ್ಲಿ ಔಟಾಗಿದ್ದರು.

ಉತ್ತಮ ಲಯದಲ್ಲಿರುವ ವಿರಾಟ್, ಗಿಲ್, ಶ್ರೇಯಸ್ ಅಯ್ಯರ್ ಮತ್ತು ಕೆ.ಎಲ್. ರಾಹುಲ್ ಅವರನ್ನು ಕಟ್ಟಿಹಾಕುವತ್ತ ಕಿವೀಸ್ ಬೌಲರ್‌ಗಳು ಹೆಚ್ಚು ಗಮನ ಹರಿಸುವುದು ಖಚಿತ. ಅದರಿಂದಾಗಿ ರೋಹಿತ್ ಶರ್ಮಾ ಅವರು ಉತ್ತಮ ಆರಂಭ ನೀಡಿ, ದೀರ್ಘ ಇನಿಂಗ್ಸ್ ಆಡಿದರೆ ತಂಡದ ಹಾದಿ ಸುಲಭವಾಗುತ್ತದೆ. ಅಕ್ಷರ್ ಪಟೇಲ್ ಮತ್ತು ಹಾರ್ದಿಕ್ ಪಾಂಡ್ಯ ಅವರೂ ಮಧ್ಯಮ ಕ್ರಮಾಂಕವನ್ನು ಬಲಪಡಿಸುವ ಹೊಣೆ ನಿಭಾಯಿಸಬೇಕಿದೆ. ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ತೋರಿದ ಸಂಘಟಿತ ಆಟವನ್ನು ಇಲ್ಲಿಯೂ ಪುನರಾವರ್ತಿಸಿದರೆ ಕಿವೀಸ್ ಬಳಗ ಸೋಲಿನತ್ತ ಜಾರಬಹುದು.

### ಮುಖ್ಯಾಂಶಗಳು

- ಭಾರತ ತಂಡವು ನಾಲ್ವರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸುವ ಸಾಧ್ಯತೆ
- ಉತ್ತಮ ಲಯದಲ್ಲಿರುವ ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್
- 25 ವರ್ಷಗಳ ನಂತರ ಟ್ರೋಫಿ ಜಯಿಸುವತ್ತ ಕಿವೀಸ್ ಚಿತ್ತ

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ರಚಿನ್ ರವೀಂದ್ರ

ವಿರಾಟ್ ಕೊಹ್ಲಿ

### ತಂಡಗಳು

**ಭಾರತ:** ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಮೊಹಮ್ಮದ್ ಶಮಿ, ಅರ್ಷದೀಪ್ ಸಿಂಗ್, ರವೀಂದ್ರ ಜಡೇಜ, ವರುಣ್ ಚಕ್ರವರ್ತಿ.

**ನ್ಯೂಜಿಲೆಂಡ್:** ಮಿಚೆಲ್ ಸ್ಯಾಂಟನರ್ (ನಾಯಕ), ಮೈಕೆಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್‌ಮನ್, ಡೆವೊನ್ ಕಾನ್ವೆ, ಲಾಕಿ ಫರ್ಗ್ಯುಸನ್, ಮ್ಯಾಟ್ ಹೆನ್ರಿ, ಟಾಮ್ ಲೇಥಮ್, ಡ್ಯಾರಿಲ್ ಮಿಚೆಲ್. ವಿಲ್ ಒ ರೂರ್ಕಿ, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ನೇಥನ್ ಸ್ಮಿತ್, ಕೇನ್ ವಿಲಿಯಮ್ಸನ್, ವಿಲ್ ಯಂಗ್, ಜೇಕಬ್ ಡಫಿ

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅಭ್ಯಾಸ –ಎಎಫ್‌ಪಿ ಚಿತ್ರ

### ಬಲಾಬಲ (ಏಕದಿನ ಕ್ರಿಕೆಟ್)




### ಭಾರತ–ನ್ಯೂಜಿಲೆಂಡ್ ಹಣಾಹಣಿ (ಐಸಿಸಿ ನಾಕೌಟ್)

| ವರ್ಷ | ಟೂರ್ನಿ | ವಿಜೇತ |
|---|---|---|
| 2000 | ಚಾಂಪಿಯನ್ಸ್ ಟ್ರೋಫಿ ಫೈನಲ್ | ನ್ಯೂಜಿಲೆಂಡ್ |
| 2019 | ಏಕದಿನ ವಿಶ್ವಕಪ್ ಸೆಮಿಫೈನಲ್ | ನ್ಯೂಜಿಲೆಂಡ್ |
| 2021 | ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ | ನ್ಯೂಜಿಲೆಂಡ್ |
| 2023 | ಏಕದಿನ ವಿಶ್ವಕಪ್ ಸೆಮಿಫೈನಲ್ | ಭಾರತ |

### ರೋಹಿತ್, ಕೊಹ್ಲಿ ನಿವೃತ್ತಿ ಚರ್ಚೆ ನಡೆದಿಲ್ಲ: ಗಿಲ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಏಕದಿನ ಭವಿಷ್ಯದ ಬಗ್ಗೆ ಚರ್ಚೆಗಳು ನಡೆಯುತ್ತಿರುವ ಹೊತ್ತಿನಲ್ಲೇ, ‘ಭಾರತ ತಂಡದ ಡ್ರೆಸಿಂಗ್ ರೂಮ್‌ನಲ್ಲಿ ಇಂಥ ಚರ್ಚೆಯೇ ನಡೆದಿಲ್ಲ’ ಎಂದು ಉಪ ನಾಯಕ ಶುಭಮನ್ ಗಿಲ್ ಶನಿವಾರ ಇಲ್ಲಿ ತಿಳಿಸಿದರು.

ಈ ದಿಗ್ಗಜ ಆಟಗಾರರು ಉತ್ತಮ ಪ್ರದರ್ಶನ ನೀಡುತ್ತಿದ್ದರೂ, ಭಾರತ ಚಾಂಪಿಯನ್ಸ್ ಟ್ರೋಫಿ ಗೆದ್ದ ಮೇಲೆ ಇಬ್ಬರೂ ಅಥವಾ ಯಾರಾದರೊಬ್ಬರು ವಿದಾಯ ಹೇಳಲಿದ್ದಾರೆ ಎಂಬ ಮಾತು ಕ್ರಿಕೆಟ್ ವಲಯಗಳಲ್ಲಿ ಕೇಳಿಬರುತ್ತಿದೆ.

‘ಆದರೆ ಇಂಥ ಯಾವುದೇ ಮಾತುಕತೆಗಳು ತಂಡದಲ್ಲಿ ನಡೆದಿಲ್ಲ’ ಎಂದು ಗಿಲ್, ಪಂದ್ಯಪೂರ್ವ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

**46** ರನ್
ವಿರಾಟ್ ಕೊಹ್ಲಿ ಅವರಿಗೆ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆಗಲು ಅಗತ್ಯವಿರುವ ರನ್‌ಗಳು. ಈ ಪಂದ್ಯದಲ್ಲಿ ಅವರು 46 ರನ್ ಗಳಿಸಿದರೆ ವೆಸ್ಟ್ ಇಂಡೀಸ್ ತಂಡದ ಕ್ರಿಸ್ ಗೇಲ್ (791 ರನ್) ಅವರ ದಾಖಲೆಯನ್ನು ಮುರಿಯುವರು.

**9** ಐಸಿಸಿ ಟ್ರೋಫಿ ಟೂರ್ನಿಗಳಲ್ಲಿ
ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಆಡುತ್ತಿರುವ ಒಂಬತ್ತನೇ ಫೈನಲ್ ಇದಾಗಿದೆ.

**3** ಟ್ರೋಫಿ
ರೋಹಿತ್ ಮತ್ತು ವಿರಾಟ್ ಅವರು ತಲಾ 3 ಐಸಿಸಿ ಟ್ರೋಫಿ ಜಯಿಸಿದ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ. ರೋಹಿತ್ 2007ರ ಟಿ20 ವಿಶ್ವಕಪ್, 2013ರ ಚಾಂಪಿಯನ್ಸ್ ಟ್ರೋಫಿ ಮತ್ತು 2024ರ ಟಿ20 ವಿಶ್ವಕಪ್ ಜಯದಲ್ಲಿ ಆಡಿದ್ದರು. ವಿರಾಟ್ 2011ರ ಏಕದಿನ ವಿಶ್ವಕಪ್, 2013 ರ ಚಾಂಪಿಯನ್ಸ್ ಟ್ರೋಫಿ ಮತ್ತು 2024ರ ಟಿ20 ಟೂರ್ನಿಯಲ್ಲಿ ಆಡಿದ್ದರು.

### ರೋ–ಕೋ ಜೋಡಿಗೆ ಕೊನೆ ಆಟ?

ಭಾರತದ ‘ಸೂಪರ್‌ಸ್ಟಾರ್’ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ವೃತ್ತಿಜೀವನದ ಕೊನೆಯ ಚಾಂಪಿಯನ್ಸ್ ಟ್ರೋಫಿ ಟೂರ್ನಿ ಇದಾಗುವ ಸಾಧ್ಯತೆ ಇದೆ.

ಹೋದ ವರ್ಷ ಭಾರತ ತಂಡವು ಅಮೆರಿಕ–ವೆಸ್ಟ್ ಇಂಡೀಸ್‌ನಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ ನಂತರ ರೋಹಿತ್, ಕೊಹ್ಲಿ ಅವರು ಚುಟುಕು ಮಾದರಿಗೆ ವಿದಾಯ ಘೋಷಿಸಿದ್ದರು. ಟೆಸ್ಟ್ ಮತ್ತು ಏಕದಿನ ಮಾದರಿಯಲ್ಲಿ ಮುಂದುವರಿದಿದ್ದರು. ಅದೇ ಸಂದರ್ಭದಲ್ಲಿ ಎಡಗೈ ಆಲ್‌ರೌಂಡರ್ ರವೀಂದ್ರ ಜಡೇಜ ಕೂಡ ಟಿ20 ಮಾದರಿಯಿಂದ ನಿವೃತ್ತರಾಗಿದ್ದರು.

ಇಲ್ಲಿ ಒಂದೊಮ್ಮೆ ಭಾರತ ತಂಡವು ಟ್ರೋಫಿ ಜಯಿಸಿದರೆ 37 ವರ್ಷದ ರೋಹಿತ್ ಮತ್ತು 36 ವರ್ಷ ವಯಸ್ಸಿನ ಕೊಹ್ಲಿ ವಿದಾಯ ಹೇಳುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ.

**ಟಾಸ್ ಯಾರ ಪರ?:**
ಭಾರತ ತಂಡವು ಕಳೆದ 14 ಏಕದಿನ ಪಂದ್ಯಗಳಲ್ಲಿ ಸತತ ಟಾಸ್ ಸೋತಿದೆ. ಇದರಲ್ಲಿ ಭಾರತವು 9 ಪಂದ್ಯಗಳನ್ನು ಜಯಿಸಿದೆ. ನಾಲ್ಕರಲ್ಲಿ ಸೋತು, ಒಂದರಲ್ಲಿ ಟೈ ಮಾಡಿಕೊಂಡಿದೆ.

ಆದರೆ. ಫೈನಲ್‌ನಲ್ಲಿ ಟಾಸ್ ಗೆಲುವು ಮುಖ್ಯವಾಗಲಿದೆ. ಟಾಸ್ ಗೆದ್ದ ತಂಡವು ತೆಗೆದುಕೊಳ್ಳುವ ನಿರ್ಣಯವೂ ಮುಖ್ಯವಾಗಲಿದೆ. ನ್ಯೂಜಿಲೆಂಡ್ ತಂಡವು ದೊಡ್ಡ ಮೊತ್ತವನ್ನು ಕಲೆಹಾಕುವ ಸಾಮರ್ಥ್ಯ ಹೊಂದಿರುವುದರಿಂದ ಮೊದಲು ಬ್ಯಾಟಿಂಗ್ ಮಾಡಿದರೆ ದೊಡ್ಡ ಗುರಿ ಒಡ್ಡಬಹುದು. ಅಗ ಗುರಿ ಬೆನ್ನಟ್ಟುವ ಒತ್ತಡಕ್ಕೆ ಭಾರತ ಒಳಗಾಗಬಹುದು. ಚೇಸಿಂಗ್ ಮಾಸ್ಟರ್ ವಿರಾಟ್ ಕೊಹ್ಲಿ ಆಟವೇ ಆಗ ಪ್ರಮುಖವಾಗುವ ಸಾಧ್ಯತೆ ಇದೆ.

## ಹಿಜಾಬ್:ಭಾರತ ತಂಡದ ಅಸಮಾಧಾನ

### ಇರಾನ್‌ನ ಟೆಹರಾನ್‌ನಲ್ಲಿ ಏಷ್ಯನ್ ಮಹಿಳೆಯರ ಕಬಡ್ಡಿ ಚಾಂಪಿಯನ್‌ಷಿಪ್

• ವಿಕ್ರಂ ಕಾಂತಿಕೆರೆ

ಮಂಗಳೂರು: ಇರಾನ್‌ನ ಟೆಹರಾನ್ ನಗರದಲ್ಲಿ ಶನಿವಾರ ಮುಕ್ತಾಯಗೊಂಡ ಏಷ್ಯನ್ ಮಹಿಳೆಯರ ಕಬಡ್ಡಿ ಚಾಂಪಿಯನ್‌ಷಿಪ್ ಆಡಲು ಬಂದಿದ್ದ ಭಾರತ ತಂಡದ ಆಟಗಾರ್ತಿಯರಿಗೆ ಹಿಜಾಬ್ ಕಡ್ಡಾಯ ಮಾಡಿದ್ದಕ್ಕೆ ಭಾರತ ತಂಡ ಅಸಮಾಧಾನ ವ್ಯಕ್ತಪಡಿಸಿದೆ.

ಚಾಂಪಿಯನ್‌ಷಿಪ್‌ನ ಆರನೇ ಆವೃತ್ತಿ ಮಾ.6ರಂದು ಆರಂಭಗೊಂಡಿತ್ತು. ನಾಲ್ಕು ಬಾರಿಯ ಚಾಂಪಿಯನ್ ಭಾರತ, ಆತಿಥೇಯ ಇರಾನ್, ಇರಾಕ್, ನೇಪಾಳ, ಥಾಯ್ಲೆಂಡ್, ಬಾಂಗ್ಲಾದೇಶ ಮತ್ತು ಮಲೇಷ್ಯಾ ತಂಡಗಳು ಪಾಲ್ಗೊಂಡಿದ್ದವು.

ಚಾಂಪಿಯನ್‌ಷಿಪ್‌ನ ಉದ್ಘಾಟನಾ ಸಮಾರಂಭದಲ್ಲಿ ಎಲ್ಲ ತಂಡಗಳ ಆಟಗಾರ್ತಿಯರು ಹಿಜಾಬ್ ಧರಿಸಿ ನಿಂತಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಂಡಿದ್ದವು. ಒಳಾಂಗಣದಲ್ಲಿ ನಡೆದ ಪಂದ್ಯಗಳನ್ನು ವೀಕ್ಷಿಸಲು ಪುರುಷರಿಗೆ ಅವಕಾಶ ಇಲ್ಲದಿರುವುದು ಮತ್ತು ನೇರ ಪ್ರಸಾರಕ್ಕೆ ಅವಕಾಶ ನೀಡದಿದ್ದುದರ ಬಗ್ಗೆ ಆನ್‌ಲೈನ್ ಮೂಲಕ ಕ್ರೀಡಾ ಸುದ್ದಿಗಳನ್ನು ಬಿತ್ತರಿಸುವ ಮಾಧ್ಯಮಗಳಲ್ಲಿ ಬೇಸರದ ಮಾತುಗಳು ಕೇಳಿಬಂದಿದ್ದವು.

ಎರಡು ಬಾರಿ ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸುವ ಅವಕಾಶ ಲಭಿಸಿರುವ ಮೊದಲ ನಗರ ಟೆಹರಾನ್. ಇದಕ್ಕಿಂತ ಮೊದಲು ಇತರ ಟೂರ್ನಿಗಳು ಇರಾನ್‌ನಲ್ಲಿ ನಡೆದಿವೆ. ಪ್ರತಿ ಬಾರಿಯೂ ಇಲ್ಲಿ ಹಿಜಾಬ್ ಕಡ್ಡಾಯ ಎಂದು ಭಾರತ ತಂಡದ ಕೋಚ್ ತೇಜಸ್ವಿನಿ ಬಾಯಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೇರೆ ಬೇರೆ ಟೂರ್ನಿಗಳಲ್ಲಿ ಎರಡು ಬಾರಿ ಆಟಗಾರ್ತಿಯಾಗಿ ಮತ್ತು ಈಗ ಕೋಚ್ ಆಗಿ ಬಂದಿದ್ದೇನೆ. ಅಂಗಣದಲ್ಲಿ ಪುರುಷರು ಇಲ್ಲದ ಕಾರಣ ಹಿಜಾಬ್ ತೆಗೆದಿರಿಸಬಹುದು. ಆದರೆ ಹೋಟೆಲ್ ಸೇರಿದಂತೆ ಉಳಿದ ಎಲ್ಲ ಕಡೆ ಹಿಜಾಬ್ ಧರಿಸಿಯೇ ಇರಬೇಕು. ಭಾರತ ತಂಡ ಒಟ್ಟು 12 ಮಂದಿಯನ್ನು ಹೊಂದಿದ್ದು ಇವರ ಪೈಕಿ ಏಳು ಮಂದಿ ಹೊಸಬರು. ಅವರಿಗೆ ಇದು ಹೊಸ ಅನುಭವ. ಇಲ್ಲಿನ ಧಾರ್ಮಿಕ ಆಚರಣೆಗಳನ್ನು ಎಲ್ಲ ದೇಶದವರಿಗೂ ಕಡ್ಡಾಯಗೊಳಿಸುವುದು ಬೇಸರ ಉಂಟುಮಾಡಿದೆ’ ಎಂದು ತೇಜಸ್ವಿನಿ ಬಾಯಿ ಹೇಳಿದರು.

ಹೊರಗೆ ಹೋಗಲು ನಿರ್ಬಂಧ

ಚಾಂಪಿಯನ್‌ಷಿಪ್ ನಡೆಯುವ ಸ್ಥಳದಲ್ಲಿ ಅನೇಕ ನಿರ್ಬಂಧಗಳು ಇವೆ. ಹೋಟೆಲ್ ಕೊಠಡಿ ಬಿಟ್ಟು ಹೊರಗೆ ಹೋಗುವಂತಿಲ್ಲ. ಆಹಾರದಲ್ಲೂ ಆಯ್ಕೆ ಇಲ್ಲ. ಅಕ್ಕಿ ಪದಾರ್ಥಗಳಷ್ಟೇ ಸಿಗುತ್ತವೆ. ಆದ್ದರಿಂದ ರೋಟಿ ಮತ್ತಿತರ ಆಹಾರ ತಿಂದು ರೂಢಿ ಇರುವವರಿಗೆ ತೊಂದರೆ ಆಗುತ್ತದೆ. ಇಂಥ ಕಡೆಯಲ್ಲಿ ಮತ್ತೆ ಮತ್ತೆ ಟೂರ್ನಿಗಳನ್ನು ಯಾಕೆ ಆಯೋಜಿಸುತ್ತಾರೆ ಎಂದೇ ಗೊತ್ತಾಗುತ್ತಿಲ್ಲ’ ಎಂದು ತೇಜಸ್ವಿನಿ ಹೇಳಿದರು.

‘ವಿಮಾನದಿಂದ ಇಳಿಯುವಾಗಲೇ ಹಿಜಾಬ್ ಕಡ್ಡಾಯ ಮಾಡುತ್ತಾರೆ. ಹೋಟೆಲ್‌ನಲ್ಲಿ ಊಟದ ಹಾಲ್‌ಗೆ ಹೋಗುವಾಗ ಹಿಜಾಬ್ ಕಾಣಿಸದೇ ಇದ್ದರೆ ಒತ್ತಾಯ ಪೂರ್ವಕವಾಗಿ ಹಾಕಿಸುತ್ತಾರೆ’ ಎಂದು ಅವರು ಹೇಳಿದರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಿಜಾಬ್ ಧರಿಸಿರುವ ಭಾರತದ ಆಟಗಾರ್ತಿಯರು

### ಏಷ್ಯನ್ ಕಬಡ್ಡಿ: ಭಾರತ ಮಹಿಳಾ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಭಾರತ ತಂಡ ಫೈನಲ್‌ನಲ್ಲಿ ಏಳು ಪಾಯಿಂಟ್‌ಗಳಿಂದ ಆತಿಥೇಯ ಇರಾನ್ ತಂಡವನ್ನು ಸೋಲಿಸಿ ಟೆಹರಾನ್‌ನಲ್ಲಿ ಶನಿವಾರ ಮುಕ್ತಾಯಗೊಂಡ ಆರನೇ ಏಷ್ಯನ್ ಮಹಿಳಾ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಭಾರತ ಫೈನಲ್‌ನಲ್ಲಿ 32–25 ರಿಂದ ಇರಾನ್ ತಂಡದ ಮೇಲೆ ಜಯಗಳಿಸಿತು.

## ಐ ಲೀಗ್:8– 1ರಿಂದ ಗೆದ್ದ ಡೆಂಪೊ ತಂಡ

ಬೆಂಗಳೂರು: ಡೆಂಪೊ ಕ್ರೀಡಾ ಕ್ಲಬ್ ತಂಡ, ಗೋವಾದ ಫತೋರ್ಡಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಎಸ್‌ಸಿ ಬೆಂಗಳೂರು ತಂಡವನ್ನು 8–1 ಗೋಲುಗಳಿಂದ ಸದೆಬಡಿಯಿತು.

ವಿರಾಮದ ವೇಳೆಗೆ ವಿಜೇತರು 4–1 ಗೋಲುಗಳಿಂದ ಮುಂದಿದ್ದರು.ಮಾರ್ಕಸ್ ಜೋಸೆಫ್ (8, 9, 43ನೇ ನಿಮಿಷ) ಮೂರು ಗೋಲುಗಳನ್ನು ಹೊಡೆದು ಆತಿಥೇಯ ತಂಡದ ಗೆಲುವಿನಲ್ಲಿ ಮಿಂಚಿದರು.

## ರಾಯಲ್ ಚಾಲೆಂಜರ್ಸ್ ಔಟ್

ಲಖನೌ (ಪಿಟಿಐ): ಕಳಪೆ ಬೌಲಿಂಗ್‌ನಿಂದಾಗಿ ‘ಹಾಲಿ ಚಾಂಪಿಯನ್’ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ನಾಕೌಟ್ ಹಾದಿಯಿಂದ ಹೊರಬಿತ್ತು.

ಜಾರ್ಜಿಯಾ ವೊಲ್ ಗಳಿಸಿದ ಅಜೇಯ 99 ರನ್‌ಗಳ ಬಲದಿಂದ ಗೆದ್ದ ಯು.ಪಿ ವಾರಿಯರ್ಸ್ ತಂಡವು ಶನಿವಾರ ನಡೆದ ಪಂದ್ಯದಲ್ಲಿ 12 ರನ್‌ಗಳಿಂದ ಜಯಿಸಿತು. ಅದರೊಂದಿಗೆ ಆರ್‌ಸಿಬಿ ತಂಡವನ್ನು ಟೂರ್ನಿಯಿಂದ ಹೊರಗೆ ತಳ್ಳಿತು. ಆರ್‌ಸಿಬಿಗೆ ಇನ್ನೊಂದು ಪಂದ್ಯ ಬಾಕಿ ಇದೆ. ಅದರಲ್ಲಿ ಗೆದ್ದರೂ ನಾಕೌಟ್ ಪ್ರವೇಶ ಸಾಧ್ಯವಾಗದು.

ಈ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಸಿಬಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಾರಿಯರ್ಸ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 225 ರನ್ ಗಳಿಸಿತು. ಜಾರ್ಜಿಯಾ ವೊಲ್ ಅವರಿಗೆ ಡಬ್ಲ್ಯುಪಿಎಲ್‌ನಲ್ಲಿ ಚೊಚ್ಚಲ ಶತಕ ಗಳಿಸುವ ಅವಕಾಶ ಕೇವಲ 1 ರನ್ ಅಂತರದಿಂದ ಕೈತಪ್ಪಿತು.

ಈ ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡವು 19.3 ಓವರ್‌ಗಳಲ್ಲಿ 213 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಮಧ್ಯಮ ಕ್ರಮಾಂಕದ ಬ್ಯಾಟರ್ ರಿಚಾ ಘೋಷ್ (69; 33ಎ, 4X6, 6X5) ಮತ್ತು ಕೊನೆಯ ಹಂತದಲ್ಲಿ ಸ್ನೇಹ ರಾಣಾ (26; 6ಎ, 4X2, 6X3) ಅವರ ಅಬ್ಬರದ ಬ್ಯಾಟಿಂಗ್ ಗಮನ ಸೆಳೆಯಿತು. ಆದರೆ ಎದುರಾಳಿ ತಂಡದ ದೀಪ್ತಿ ಶರ್ಮಾ ಮತ್ತು ಸೋಫಿ ಎಕ್ಲೆಸ್ಟೊನ್ ಅವರು ತಲಾ 3 ವಿಕೆಟ್ ಗಳಿಸಿ ಆರ್‌ಸಿಬಿ ಓಟಕ್ಕೆ ಕಡಿವಾಣ ಹಾಕಿದರು.

ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ (4 ರನ್) ಈ ಪಂದ್ಯದಲ್ಲಿಯೂ ವಿಫಲರಾದರು. ಮೇಘನಾ ಮತ್ತು ಎಲಿಸ್ ಪೆರಿ ಕ್ರಮವಾಗಿ 27 ಮತ್ತು 28 ರನ್ ಗಳಿಸಿದರು.

ಆದರೆ ವಾರಿಯರ್ಸ್ ತಂ ಡದ ಆರಂಭ ಉತ್ತಮವಾಗಿತ್ತು. ವಾರಿಯರ್ಸ್ ಆರಂಭಿಕ ಜೋಡಿ ಗ್ರೇಸ್ ಹ್ಯಾರಿಸ್ (39; 22ಎ, 47, 6X1) ಹಾಗೂ ಜಾರ್ಜಿಯಾ (ಔಟಾಗದೇ 99; 56ಎ, 4X17, 6X1) ಮೊದಲ ವಿಕೆಟ್ ಜೊತೆಯಾಟದಲ್ಲಿ 77 ರನ್ ಸೇರಿಸಿದರು. ಈ ಬುನಾದಿಯ ಮೇಲೆ ಬೃಹತ್ ಮೊತ್ತ ಗಳಿಸಲು ಸಾಧ್ಯವಾಯಿತು.

ಆದರೆ ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ತಮ್ಮ ಶತಕ ಪೂರೈಸಲು ಜಾರ್ಜಿಯಾ ಅವರಿಗೆ ಕೇವಲ 2 ರನ್‌ಗಳು ಬೇಕಾಗಿದ್ದವು. ಆ ಸಂದರ್ಭದಲ್ಲಿ ಅವರು ಎರಡು ಪಡೆಯಲು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಇನ್ನೊಂದು ಬದಿಯಲ್ಲಿದ್ದ ದೀಪ್ತಿ ಶರ್ಮಾ ರನ್‌ಔಟ್ ಆದರು. ಅದರಿಂದಾಗಿ ಜಾರ್ಜಿಯಾ ಶತಕದ ಕನಸು ಕೈಗೂಡಲಿಲ್ಲ.

**ಸಂಕ್ಷಿಪ್ತ ಸ್ಕೋರು: ಯು.ಪಿ. ವಾರಿಯರ್ಸ್:** 20 ಓವರ್‌ಗಳಲ್ಲಿ 5ಕ್ಕೆ225 (ಗ್ರೇಸ್ ಹ್ಯಾರಿಸ್ 39, ಜಾರ್ಜಿಯಾ ವೊಲ್ ಔಟಾಗದೆ 99, ಕಿರಣ್ ನವಗಿರೆ 46, ಜಾರ್ಜಿಯಾ ವೇರ್‌ಹ್ಯಾಮ್ 43ಕ್ಕೆ2), **ಆರ್‌ಸಿಬಿ:** 19.3 ಓವರ್‌ಗಳಲ್ಲಿ 213 (ಎಸ್. ಮೇಘನಾ 27, ಎಲಿಸ್ ಪೆರಿ 28, ರಿಚಾ ಘೋಷ್ 69, ಜಾರ್ಜಿಯಾ ವೇರ್‌ಹಾಮ್ 17, ಸ್ನೇಹ ರಾಣಾ 26, ಷಿನೆಲ್ ಹೆನ್ರಿ 39ಕ್ಕೆ2, ಸೋಫಿ ಎಕ್ಲೆಸ್ಟೊನ್ 25ಕ್ಕೆ3, ದೀಪ್ತಿ ಶರ್ಮಾ 50ಕ್ಕೆ3) ಫಲಿತಾಂಶ: ಯು.ಪಿ. ವಾರಿಯರ್ಸ್ ತಂಡಕ್ಕೆ 12 ರನ್ ಜಯ.**ಪಂದ್ಯ ಆಟಗಾರ್ತಿ:** ಜಾರ್ಜಿಯಾ ವೊಲ್

ಜಾರ್ಜಿಯಾ ವೊಲ್

### ಡಬ್ಲ್ಯುಪಿಎಲ್ ಅಂಕಪಟ್ಟಿ

| ತಂಡಗಳು | ಪಂದ್ಯ | ಗೆಲುವು | ಸೋಲು | ಅಂಕ |
|---|---|---|---|---|
| ಡೆಲ್ಲಿ | 8 | 5 | 3 | 10 |
| ಗುಜರಾತ್ | 7 | 4 | 3 | 8 |
| ಮುಂಬೈ | 6 | 4 | 2 | 8 |
| ಯುಪಿ | 8 | 3 | 5 | 6 |
| ಆರ್‌ಸಿಬಿ | 7 | 2 | 5 | 4 |

## ಕೆಕೆಆರ್‌ಗೆ ಗಿಬ್ಸನ್ ಸಹಾಯಕ ಕೋಚ್

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡ, ಇದೇ 22ರಂದು ಆರಂಭವಾಗು ಐಪಿಎಲ್ ಟೂರ್ನಿಗೆ ವೆಸ್ಟ್ ಇಂಡೀಸ್‌ನ ಅನುಭವಿ ಆಟಗಾರ ಒಟಿಸ್ ಗಿಬ್ಸನ್ ಅವರನ್ನು ಶನಿವಾರ ಸಹಾಯಕ ಕೋಚ್ ಆಗಿ ನೇಮಕ ಮಾಡಿದೆ. ಗಿಬ್ಸನ್ ಮೊದಲ ದರ್ಜೆ ಕ್ರಿಕೆಟ್‌ನಲ್ಲಿ 650 ವಿಕೆಟ್‌ಗಳನ್ನು ಪಡೆದಿದ್ದಾರೆ.

## ಮಾಸ್ಟರ್ಸ್ ಅಥ್ಲೆಟಿಕ್ಸ್: ಯೋಗೇಂದ್ರಗೆ ಬೆಳ್ಳಿ

ಬೆಂಗಳೂರು: ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ ಎಂ. ಯೋಗೇಂದ್ರ ಅವರು ಇಲ್ಲಿ ಶನಿವಾರ ನಡೆದ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು.

ಭಾರತ ಕ್ರೀಡಾ ಪ್ರಾಧಿಕಾರದ ಕ್ರೀಡಾಂಗಣದಲ್ಲಿ ನಡೆದ 60 ವರ್ಷ ಮೇಲ್ಪಟ್ಟ ಪುರುಷರ 2000 ಮೀ. ಸ್ಟೀಪಲ್ ಚೇಸ್ ಓಟದಲ್ಲಿ ಯೋಗೇಂದ್ರ ಬೆಳ್ಳಿ ಗೆದ್ದರು.

ಎಂ.ಯೋಗೇಂದ್ರ

## ಪ್ರಾಗ್ ಮಾಸ್ಟರ್ಸ್; ಅರವಿಂದ್‌ಗೆ ಪ್ರಶಸ್ತಿ

ಪ್ರಾಗ್ (ಪಿಟಿಐ): ಚೆಸ್ ಆಟದಲ್ಲಿ ಭಾರತದ ಪ್ರಾಬಲ್ಯ ಎಗ್ಗಿಲ್ಲದೇ ಮುಂದುವರಿದಿದೆ. ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ಚಿದರಂಬರಮ್ ಅವರು ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಶುಕ್ರವಾರ ಪ್ರಶಸ್ತಿ ಗೆದ್ದುಕೊಂಡರು.

25 ವರ್ಷ ವಯಸ್ಸಿನ ಚೆನ್ನೈ ಆಟಗಾರ ಅಂತಿಮ ಸುತ್ತಿನಲ್ಲಿ ಟರ್ಕಿಯ ಎಡಿಲ್ ಗುರೆಝ್ ಅವರ ಜೊತೆ ಡ್ರಾ ಮಾಡಿಕೊಂಡರು. ಅವರು 9 ಸುತ್ತುಗಳಿಂದ 6 ಪಾಯಿಂಟ್ಸ್ ಸಂಗ್ರಹಿಸಿದರು. ಅವರು ಟೂರ್ನಿಯಲ್ಲಿ ಅಜೇಯರಾಗಿದ್ದು ಆರು ಪಂದ್ಯ ಡ್ರಾ ಮಾಡಿ, ಮೂರರಲ್ಲಿ ಜಯಗಳಿಸಿದರು.

ಅಂತಿಮ ಸುತ್ತಿನಲ್ಲಿ ಡಚ್ ಗ್ರ್ಯಾಂಡ್ ಮಾಸ್ಟರ್ ಅನಿಶ್ ಗಿರಿ ಅವರಿಗೆ ಮಣಿದ ಭಾರತದ ಇನ್ನೊಬ್ಬ ಪ್ರತಿಭಾವಂತ ಪ್ರಜ್ಞಾನಂದ (5) ಎರಡನೇ ಸ್ಥಾನ ಪಡೆದರು. ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ ಪ್ರಜ್ಞಾನಂದ ಅವರ ಜೊತೆಗೆ ಅನಿಶ್ ಗಿರಿ ಮತ್ತು ಅಗ್ರ ಶ್ರೇಯಾಂಕದ ವೀ ಯಿ (ಚೀನಾ) ಅವರೂ ಐದು ಪಾಯಿಂಟ್ಸ್ ಪಡೆದರೂ, ಟೈಬ್ರೇಕರ್ ಆಧಾರದಲ್ಲಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

‘ನಾನು ಎರಡು ದಿನಗಳಿಂದ ಚೆನ್ನಾಗಿ ನಿದ್ದೆ ಮಾಡಿರಲಿಲ್ಲ. ಏಳನೇ ಸುತ್ತಿನಲ್ಲಿ ನನಗೆ ಲೀಡ್ ದೊರೆತ ಬಳಿಕ ಒತ್ತಡಕ್ಕೆ ಒಳಗಾಗಿದ್ದೆ’ ಎಂದು ಅರವಿಂದ್ ಹೇಳಿದರು.

ಅನೀಶ್ ಗಿರಿ ಎದುರಿನ ಪಂದ್ಯ ಟೂರ್ನಿಯಲ್ಲಿ ತಮ್ಮ ಅತ್ಯುತ್ತಮ ಪಂದ್ಯವಾಗಿತ್ತು ಎಂದು ಅವರು ಹೇಳಿದರು. ಏಳನೇ ಸುತ್ತಿನ ಆ ಪಂದ್ಯದಲ್ಲಿ ಅರವಿಂದ್ ಜಯಗಳಿಸಿದ್ದರು.

ಅಂತಿಮ ಸುತ್ತಿನ ಇತರ ಪಂದ್ಯಗಳಲ್ಲಿ ಝೆಕ್ ರಿಪಬ್ಲಿಕ್‌ನ ಡೇವಿಡ್ ನವಾರ, ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಜೊತೆ ಡ್ರಾ ಮಾಡಿಕೊಂಡರೆ, ಇನ್ನೊಬ್ಬ ಸ್ಥಳೀಯ ಆಟಗಾರ ಗುಯೆನ್ ಥಾಯ್ಡೈ ವಾನ್, ಜರ್ಮನಿಯ ವಿನ್ಸೆಂಟ್ ಕೀಮರ್ ಜೊತೆ ಡ್ರಾ ಮಾಡಿಕೊಂಡರು. ವಿಯೆಟ್ನಾಮಿನ ಕ್ವಾಂಗ್ ಲೀಮ್ ಲಿ ಮತ್ತು ಚೀನಾದ ವೀ ಯಿ ನಡುವಣ ಪಂದ್ಯವೂ ಡ್ರಾ ಆಯಿತು.

ಚಾಲೆಂಜರ್ಸ್ ವಿಭಾಗದ ಅಂತಿಮ ಸುತ್ತಿನಲ್ಲಿ ದಿವ್ಯಾ ದೇಶಮುಖ್ (3) ಕೊನೆಗೂ ಗ್ರೀಸ್‌ನ ಆಟಗಾರ್ತಿ ಸ್ಟಾಮಟಿಸ್ ಕೌರ್ಕೊಲಸ್ ಅರ್ಡಿಟಿಸ್ ಅವರನ್ನು ಸೋಲಿಸಿ ಮೊದಲ ಗೆಲುವು ದಾಖಲಿಸಿದರು. ಈ ವಿಭಾಗದಲ್ಲಿ ಉಜ್ಬೇಕಿಸ್ತಾನದ ನೊದಿರ್ಬೆಕ್‌ಯಾಕೊಬೊಯೆವ್ (7) ಪ್ರಶಸ್ತಿ ಗೆದ್ದುಕೊಂಡರು.

ಅರವಿಂದ್ ಚಿದರಂಬರಮ್

### ಪ್ರಣವ್ ವಿಶ್ವ ಜೂನಿಯರ್ ಚಾಂಪಿಯನ್

ನವದೆಹಲಿ (ಪಿಟಿಐ): ಭಾರತದ ಪ್ರಣವ್ ವೆಂಕಟೇಶ್, ಮಾಂಟೆನಿಗ್ರೊದ ಪೆಟ್ರೊವಾಕ್‌ನಲ್ಲಿ ಶುಕ್ರವಾರ ಮುಕ್ತಾಯಗೊಂಡ ವಿಶ್ವ ಜೂನಿಯರ್ ಚೆಸ್ (20 ವರ್ಷದೊಳಗಿನವರ) ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

11ನೇ ಹಾಗೂ ಅಂತಿಮ ಸುತ್ತಿನಲ್ಲಿ ಅವರು ಸ್ಲೋವೇನಿಯಾದ ಮೆಟಿಕ್ ಲೆವ್ರೆನ್ಸಿಕ್ ಜೊತೆ 18 ನಡೆಗಳಲ್ಲಿ ಡ್ರಾ ಮಾಡಿಕೊಂಡರು. ಅವರು 7 ಗೆಲುವು, 4 ಡ್ರಾ ಸೇರಿ ಒಟ್ಟು 9 ಪಾಯಿಂಟ್ಸ್ ಗಳಿಸಿ ಅಜೇಯರಾಗುಳಿದರು.

2024ರಲ್ಲಿ ಚೆನ್ನೈ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಪ್ರಣವ್ ಅವರು ಚಾಲೆಂಜರ್ ವಿಭಾಗದಲ್ಲಿ ಚಾಂಪಿಯನ್ ಆಗಿದ್ದರು.

ಅವರು ವಿಶ್ವನಾಥನ್ ಆನಂದ್ ಅವರ ವೆಸ್ಟ್‌ಬ್ರಿಜ್ ಆನಂದ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ವಿಶೇಷ ಎಂದರೆ ಆನಂದ್ ಅವರೂ 1987ರಲ್ಲಿ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಗೆಲ್ಲುವ ಮೂಲಕವೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಮೊದಲ ಬಾರಿ ಗಮನ ಸೆಳೆದಿದ್ದರು.ಪ್ರಣವ್ ಅವರಿಗೆ ಅಭಿನಂದಿಸಿ ಆನಂದ್ ಅವರು ‘ಎಕ್ಸ್’ನಲ್ಲಿ ಸಂದೇಶ ಹಾಕಿದ್ದಾರೆ.